UNIVERSAL LIBRARY
OU_202078
UNIVERSAL LIBRARY

OSMANIA UNIVERSITY LIBRARY

Call No. K170/S94V Accession No. K 333

Author

Title ವಿದುರನೀತಿ ಮತ್ತು ನಾರದನೀತಿ

This book should be returned on or before the date last marked below.

॥ ಶ್ರೀ ॥

# ವಿದುರನೀತಿ, ನಾರದನೀತಿ,

ತಥಾ

# ಯಕ್ಷಪ್ರಶ್ನೆಗಳು.

ಈ ಪುಸ್ತಕವನ್ನು
ವಿದ್ವಾನರಕಡೆಯಿಂದ ಸಿದ್ಧಮಾಡಿಸಿ,
**ಆಬಾಜೀ ರಾಮಚಂದ್ರ ಸಾವಂತ,**
ಇವರು ತಮ್ಮ "ಶ್ರೀರಾಮತತ್ವ-ಪ್ರಕಾಶ" ಛಾಪಖಾನೆ
ಯಲ್ಲಿ ಛಾಪಿಸಿ ಪ್ರಸಿದ್ಧ ಪಡಿಸಿದರು.

**ಬೆಳಗಾಂವ**

ಸನ್ ೧೯೧೦ ಇಸ್ವಿ
ಯ ೭ ಆ

ಈ ಪುಸ್ತಕದ ಯಾವತ್ತು ಹಕ್ಕನ್ನು ಪ್ರಕಾಶಕರು ಕಾಯದೆ ಪ್ರಕಾರ ತಮ್ಮಕಡಿಗೆ ಇಟ್ಟುಕೊಂಡಿದ್ದಾರೆ.

# ವಿದುರನೀತಿ ಮತ್ತು ನಾರದನೀತಿ.

## ಉದ್ಯೋಗ ಪರ್ವ.

1963

## ವಿದುರನೀತಿ.

ಪಾಂಡವರು ಅರಣ್ಯದಲ್ಲಿರುವಾಗ ಅವರಬಳಿಗೆ ಕಳುಹಿಸಲ್ಪಟ್ಟಿದ್ದ ಸಂಜಯನು ಬಂದು, ಧೃತರಾಷ್ಟ್ರನಿಗೆ ಧರ್ಮರಾಯು ಹೇಳಿದಮಾತುಗಳು ಸಭೆಯಲ್ಲಕೂಡಿದಾಗ್ಯೆ ಹೇಳಬೇಕಾಗಿ ಇರುತ್ತದೆ, ಕಾರಣ ಅಪ್ಪಣೆ ಕೊಡೆನ್ನಲು ಅದಕ್ಕೆ ಒಳ್ಳೇದು ಹೋಗು ನಾಳೆ ಪ್ರಾತಃಕಾಲದಲ್ಲಿ, ಕೌರವರೆಲ್ಲರೂ ಕೂಡುತ್ತಾರೆ ಆಗ್ಯೆ ಹೇಳೆಂದು ಅಪ್ಪಣೆಕೊಟ್ಟು ಕಳುಹಿಸಿದನು. ತರುವಾಯ ಸಂಜಯನು ನಾಳೆ ಏನು ವರ್ತಮಾನವು ಹೇಳುತ್ತಾನೋ ಎಂಬಮನೋವ್ಯಾಕುಲದಿಂದ ರಾತ್ರಿ ನಿದ್ರೆಬಾರದೆ ಇದ್ದು ಧೃತರಾಷ್ಟ್ರನು ವಿದುರನ್ನ ಕರೇಕಳುಹಿಸಿ, ವಿದುರನೇ ಕೇಳು ಸಂಜಯನು ನನ್ನನ್ನು ದೂಷಿಶಿ ಧರ್ಮರಾಯುಹೇಳಿದ ಮಾತುಗಳು ಹೇಳುತ್ತೇನೆಂದು ಹೇಳಹೋದನು. ಆದ್ದರಿಂದ ನನಗೆ ನಿದ್ರೆಯಿಲ್ಲದೆ ಮಹತ್ಸಂತಾಪ ತಗಲಿದೆ ಆದ್ದರಿಂದ ಅದಕ್ಕೆ ಏನಾದರೂ ಹೇಳೆನ್ನಲು, ವಿದುರನು ಹೇಳಿದ್ದೇನೆಂದರೆ:—

# ವಿದುರನೀತಿ.

ಬಲವಂತನ ಕೈಗೆ ಸಿಕ್ಕಿದವಗೂ, ಸಹಾಯ ಸಂಪತ್ತು ಇಲ್ಲದವಗೂ, ಸ್ವತ್ತು ಕಳಕೊಂಡವನಿಗೂ, ಕಾಮುಕನಿಗೂ, ಚೋರನಿಗೂ, ನಿದ್ರೆಪ್ರಾಪ್ತವಾಗುವದಿಲ್ಲ. ಇಂಥವರಿಗೆ ನಿದ್ರೆಯಿಲ್ಲವಾದ್ದರಿಂದ, ನಿನ್ನಲ್ಲಿ ಇಂಥಾ ದೋಷಗಳು ಇಲ್ಲವಷ್ಟೆ? ಎರಡನೇಯವರ ಸ್ವತ್ತಿನಲ್ಲಿ ಆಸಕ್ತಿ ಉಂಟಾದವನಾಗಿ ಸಂತಾಪದಲ್ಲಿ ಬೀಳಲಿಲ್ಲವಷ್ಟೆ? ಎಂದು ವಿದುರನು ಹೇಳಲಾಗಿ, ಧೃತರಾಷ್ಟ್ರನು ನೀನು ಸರ್ವಜ್ಞರಿಗೆ ಸಮ್ಮತನಾದವನಾದ್ದರಿಂದ ಧರ್ಮಗಳನ್ನೆಲ್ಲ ತಿಳಿಸಬೇಕೆನಲು, ವಿದುರನು ಹೇಳಿದ್ದೇನೆಂದರೆ.

ರಾಜಲಕ್ಷಣಗಳಿಂದ ಸಂಪನ್ನನೆಂದು ಮೂರುಲೋಕಗಳಿಗೆ ಸಮ್ಮತನಾದ ನಿನ್ನ ಸೇವಕನಾದ ಧರ್ಮರಾಯನನ್ನು ಅರಣ್ಯವನ್ನು ಕುರಿತು ನೀನು ಕಳುಹಿಸಿದಿ. ಈ ಕಳುಹಿಸಿದ್ದು ವಿರೋಧವಾದದ್ದು, ಆದರೆ ಆಧರ್ಮಜ್ಞನಾದ ಧರ್ಮರಾಯನು ನಿನ್ನಿಂದ ತೇಜೋಹಾನಿ ಮಾಡಲ್ಪಟ್ಟವನಾದರೂ ಆತ ಘಾತಕ ಕೃತ್ಯವಿಲ್ಲದವನಾಗಿಯೂ ದಯಾಶಾಲಿಯಾಗಿಯೂ ಸತ್ಯಸ್ಥನಾಗಿಯೂ ಶಕ್ಯವಾಗುವಹಾಗೆ ಪರಾಕ್ರಮಮಾಡುವವನಾಗಿಯೂ ಇರುವ ಕಾರಣ ನಿನ್ನಲ್ಲಿ ಗುರುತ್ವವನ್ನಿಟ್ಟು ನಿನ್ನಿಂದ ಪಟ್ಟ ಅನೇಕ ಕ್ಲೇಶಗಳನ್ನು ಸಹಿಸಿದ್ದಾನೆ ದುರ್ಯೋಧನ, ಶಕುನಿ, ಕರ್ಣ, ದುಶ್ಶಾಸನ, ಇವರಲ್ಲಿ ಈ ರಾಜ್ಯವನ್ನಿಟ್ಟು ಸಂಪತ್ತು ಹೊಂದುವದಕ್ಕೆ ಹ್ಯಾಗೆ ಇಚ್ಛೈಸುತ್ತಿ? ಪಂಡಿತರ ಲಕ್ಷಣವೇನಂದರೆ:—

ಆತ್ಮವಿಷಯಕಜ್ಞಾನ ಉಂಟಾಗುವದಕ್ಕೆ ವೇದಾಂತ ಶಾಸ್ತ್ರಗಳು ಅಧ್ಯಯನ ಮಾಡಬೇಕೆಂದು ಆರಂಭಿಸುವದು, ಸಹನ ಉಂಟಾಗುವದು, ಧರ್ಮದಲ್ಲಿ ನಿರತನಾಗಿರುವದು, ಪ್ರಶಸ್ತವಾದ ವ್ಯಾಪಾರಗಳನ್ನು ಸೇವಿಸುತ್ತಾ ವೇದಶಾಸ್ತ್ರಗಳಲ್ಲಿ ಹೇಳಲ್ಪಟ್ಟ ಪರಮಾತ್ಮ ಉಂಟೆಂದು ಹೇಳುವದು, ವೇದಶಾಸ್ತ್ರಗಳಲ್ಲಿ ಶ್ರದ್ಧೆ ಉಂಟಾಗುವದು, ಇದೇ ಪಂಡಿತರ ಲಕ್ಷಣವು.

ಇದಲ್ಲದೆ ಕ್ರೋಧ, ಹರುಷ, ಲಜ್ಜಾ, ಗರ್ವ, ಅಹಂಕಾರವುಳ್ಳವನಾಗುವದೂ, ಇವು ಅರ್ಥಗಳೂ ಯಾರ ಮನಸ್ಸನ್ನು ಎಳೆಯದೇ ಹೋಗುವದೋ ಅವನು ಪಂಡಿತನು. ಯಾವನು ಮಾಡುವ ಕೆಲಸವನ್ನೂ ಯಾವನು ಮಾಡಹೋಗುವ ಆಲೋಚನೆಯನ್ನೂ, ಯಾವನು ಮಾಡಿದಾಥೆ ಆಲೋಚನೆಯನ್ನೂ ಎರಡನೇಯವರು ಮುಂಚಿತಿಳಿಯದೆ ಕಾರ್ಯವಾದ ತರುವಾಯ ತಿಳಿಯುವನೋ ಅವನು ಪಂಡಿತನು. ಯಾವನು ಮಾಡುವ ಕೆಲಸವನ್ನು ಶೀತವೂ, ಉಷ್ಣವೂ, ಭಯವೂ, ಅಸಕ್ತಿಯೂ ಸಮೃದ್ಧಿಯೂ, ವಿಘ್ನಮಾಡದೆ ಹೋಗುವನೋ ಅವನು ಪಂಡಿತನು. ಯಾವನನ್ನು ಪ್ರವರ್ತಿಸಿದಂಥಾ ಪ್ರಜ್ಞೆಯೂ ಕಾಮಾರ್ಥನಾದರೆಂದು ತಿಳಿಯಲಿಟ್ಟಗಾಗಿ ಧರ್ಮಾರ್ಥಗಳನ್ನೇ ಅನುಸರಿಸಿ ಕಾಮಾರ್ಥಗಳನ್ನು ಇಚ್ಛಿಸದೇ ಇರುವನೋ ಅವನು ಪಂಡಿತನು ಅತ್ಯಂತ ಮೋಕ್ಷಗಾಮಿಯು ಯಥಾಶಕ್ತಿಯಾಗಿ ಕಾರ್ಯಗಳನ್ನು ಮಾಡಬೇಕೆಂದು ಇಚ್ಛೈಸುವವರೂ, ಯಥಾಶಕ್ತಿಯಾಗಿ ಕಾರ್ಯಗಳನ್ನು ಮಾಡುವವರೂ, ಸ್ವಲ್ಪವಾದವರೆಂದು ಯರಡನೇಯವರಿಗೆ ಅವಮಾನವನ್ನು ಮಾಡದವರೂ, ಪಂಡಿತರೆಂದು ಹೇಳಲ್ಪಡುತ್ತಾರೆ ಬಹುಜಾಗ್ರತೆಯಾಗಿ ತಿಳುಕೊಳ್ಳುವವನೂ ಸಾವಕಾಶವಾಗಿ ಕೇಳುವವನೂ, ಅರ್ಥವನ್ನು ತಿಳಿದು ಫಲಾಪೇಕ್ಷೆ ಇಲ್ಲದ ಹಾಗೆ ಸೇವಿಸುವವನೂ, ಎರಡನೇಯವನ ಅರ್ಥಸಂಬಂಧ ಉಂಟಾದ ಕಾಲದಲ್ಲಿ ತಜ್ಞನ್ಯಸುಖ ಗರುವ ಇಲ್ಲದ ಹಾಗೆ ಇರುವಂಥಾದ್ದೇ ಪಂಡಿತನಲ್ಲಿ ಮೊದಲು ತಿಳುವಳಿಕೆ. ತನ್ನಿಂದ ಹೊಂದುವದಕ್ಕೆ ಅಶಕ್ಯವಾದ ವಸ್ತುವನ್ನು ಇಚ್ಛೈಸದವರೂ, ನಷ್ಟವಾದ ದ್ರವ್ಯವನ್ನು ಕುರಿತು ವ್ಯಸನಮಾಡದವರು ಆಪತ್ಕಾಲದಲ್ಲಿ ಮೋಹವನ್ನು ಹೊಂದದವರೂ, ಸದಸದ್ವಿವೇಕವುಳ್ಳ ಪಂಡಿತರು ತಾನುಮಾಡುವ ಕಾರ್ಯಪೂರ್ತಿ ಆದೀತೆಂದು ನಿಶ್ಚಯಿಸಿ ಆರಂಭಿಸುವವನೂ, ಕಾರ್ಯವನ್ನು ಮಾಡ ಆರಂಭಿಸಿ ಅದನ್ನು ಪೂರ್ತಿಮಾಡದೇ ಇರದೆ ನಿರರ್ಥಕವಾಗಿ ಕಾಲಕ್ಷೇಪವಾಡದೇ ಸ್ವಾಧೀನವಾದ ಬುದ್ಧಿಯುಳ್ಳವನು ಪಂಡಿತನು. ಯೋಗ್ಯವಾ

ದ ಕಾರ್ಯ್ಯಗಳಲ್ಲಿ ಅನುರಾಗವುಳ್ಳವರೂ, ಮೋಕ್ಷಸಂಪತ್ಸಾಧಕವಾದ ಕರ್ಮಗಳನ್ನು ಮಾಡುವವರೂ ಹಿತವಾದ ವಸ್ತುವುಗಳಲ್ಲಿ ಅಸೂಯೆಪಡದವರೂ ಪಂಡಿತರು. ತನಗೆ ಸನ್ಮಾನವಾದ ಕಾಲದಲ್ಲಿ ಸಂತೋಷಪಡದೇ ಅವಮಾನಕಾಲದಲ್ಲಿ ಸಂತಾಪಪಡದೇ ಗಂಗಾಸಮಂಧವಾದ ಅಗಾಧವಾದ ಭೂಮಿಯು ಹಾಗೆ ಅಗಾಧವಾದ ಬುದ್ಧಿಯುಳ್ಳವನೇ ಪಂಡಿತನೆಂದು ಹೇಳಲ್ಪಡುತ್ತಾನೆ. ಸಕಲ ಭೂತಗಳೂ, ಅಸ್ಥಿರಗಳೆಂದು ತಿಳಿದವನಾಗಿ ಸಮಸ್ತವಾದ ಕರ್ಮಗಳಿಂದ ಮನುಷ್ಯರ ಕೈಯ್ಯ ಆಗುವಂಥಾ ಕಪಟಯೋಗಗಳನ್ನು ತಿಳಿದವನು ಪಂಡಿತನೆಂದು ಹೇಳಲ್ಪಡುತ್ತಾನೆ. ಸಭೆಗಳಲ್ಲಿ ಪ್ರವರ್ತಿಸುವಂಥಾ ವಾಕ್ಯಗಳುಳ್ಳವನಾಗುವದಲ್ಲದೆ ವಿಚಿತ್ರವಾದ ವರ್ತಮಾನಗಳನ್ನು ಹೇಳುವಂಥವನಾಗಿ ಊಹೆಗಳುಳ್ಳವನಾಗಿ ತತ್ಕಾಲದಲ್ಲಿ ನೂತನ ನೂತನವಾಗಿ, ಬುದ್ಧಿಪ್ರಾಗಲ್ಭ್ಯವುಳ್ಳವನಾಗಿ, ಗ್ರಂಥಗಳನ್ನು ಹೇಳುವವನು ಯಾರೋ ಅವನು ಪಂಡಿತನು. ಯಾವನು ಓದದ ವೇದ ಶ್ರದ್ಧೆಸಹಾಯನಾಗಿ ಉಳ್ಳದೆಲ್ಲೇ, ಯಾವನನ ಪ್ರಗ್ನೇದವೇ ಸಹಾಯವಾಗಿ ಉಳ್ಳದೋ, ಆತನಿಗೆ ಆಗುವ ಪ್ರಯೋಜನಗಳನ್ನು ಮರ್ಯಾದೋಲ್ಲಂಘನೆಪೂರ್ವಕವಾಗಿ ಹೊಂದದವನು ಪಂಡಿತನಾಮಧೇಯವನ್ನು ಹೊಂದುವನು. ವೇದಾರ್ಥವನ್ನು ತಿಳಿಯದೇ ಸಕಲ ಧರ್ಮಗಳನ್ನು ಮಾಡಬೇಕೆಂಬ ಹೆಚ್ಚಾದ ಅಹಂಕಾರವುಳ್ಳವನೂ, ದರಿದ್ರನಾಗಿ ಸಕಲ ಧರ್ಮಗಳನ್ನು ಮಾಡಬೇಕೆಂಬ ಹೆಚ್ಚಾದ ಮನಸ್ಸುಳ್ಳವನೂ, ದ್ಯೂತಾದಿಗಳಿಂದ ಅರ್ಥಗಳನ್ನು ಹೊಂದಲಿಚ್ಛೈಸಿದವನೂ, ಪಂಡಿತನಿಂದ ಮೂಢನೆಂದು ಹೇಳಲ್ಪಡುತ್ತಾರೆ.

ಯಾವ ಪುರುಷನು ಸ್ವಧರ್ಮವನ್ನು ತ್ಯಾಗಮಾಡಿ ಪರಧರ್ಮಗಳನ್ನು ಅನುಸರಿಸಿ ಮಿತ್ರರ ವಿಷಯವಾಗಿ ಸುಳ್ಳನ್ನು ಹೇಳುವನೋ ಅವನು ಮೂಢನೆಂದು ಹೇಳಲ್ಪಡುತ್ತಾನೆ. ಯಾವನು ಭಕ್ತಿಯಿಲ್ಲದವರನ್ನು ಇಚ್ಛೈಸುತ್ತಾ ಭಕ್ತಿವುಳ್ಳವನನ್ನು ತ್ಯಾಗಮಾಡಿ ಬಲವಂತನ ದ್ವೇಷಿಸುವ

ನೋ ಅವನು ಮೂಢನೆಂದು ಹೇಳುವರು. ಶತ್ರುವನ್ನು ಮಿತ್ರನನ್ನು ಮಾಡಿ ಮಿತ್ರನನ್ನು ದ್ವೇಷಿಸುತ್ತಾ ಅವನನ್ನು ತ್ಯಾಗಮಾಡುವದಕ್ಕೋಸ್ಕರ ದುಷ್ಕಾರ್ಯವನ್ನು ಆರಂಭಿಸುವವನು ಮೂಢಬುದ್ಧಿಯುಳ್ಳವನೆಂದು ಹೇಳುವರು. ತಾನು ಮಾಡತಕ್ಕ ಕಾರ್ಯಗಳನ್ನು ಸೇವಕನ ಮುಖಾಂತ್ರ ಮಾಡಿಸುತ್ತಾ ಆ ಕಾರ್ಯಗಳು ಆಗುವದೋ, ಆಗದೋ, ಎಂದು ಸರ್ವಥಾ ಸಂದೇಹ ಪಡುತ್ತಾ ಜಾಗ್ರತೆಯಿಂದ ಮಾಡತಕ್ಕ ಕಾರ್ಯವಿಷಯವಾಗಿ ಆಲಸ್ಯ ಮಾಡುತ್ತಾ ಇರುವವನು ಮೂಢನು. ತಂದೆಯನ್ನು ಉದ್ದೇಶಿಸಿ ಶ್ರಾದ್ಧವನು ಮಾಡದೇ, ದೇವತಾಪೂಜೆಯನ್ನು ಮಾಡದೇ, ಸ್ನೇಹಿತರನ್ನು ಪೊಂದದೆ, ಆಪತ್ಕಾಲದಲ್ಲಿ ಸಹಾಯವನ್ನು ಮಾಡುವವರನ್ನು ಹೊಂದದೆ ಇರುವವನು ಮೂಢಲಕ್ಷಣವುಳ್ಳವನೆಂದು ಹೇಳುವರು ಕರೆಯದೇ ಹೋಗುವವನೂ, ಕರೆಯದೇ ನುಡಿಯುವವನೂ, ವಿಶೇಷವಾಗಿ ನುಡಿಯುವವನೂ, ತನ್ನಲ್ಲಿ ವಿಶ್ವಾಸವಿಲ್ಲದವನಲ್ಲಿ ವಿಶ್ವಾಸಿಸುವವನೂ, ಇವರೆಲ್ಲಾ ಮೂಢಬುದ್ಧಿಯುಳ್ಳವರಾಗುವರು, ತಾನು ದೋಷವುಳ್ಳವನಾಗಿ ಅನ್ಯರಲ್ಲಿ ದೋಷವನ್ನು ಆರೋಪಣೆ ಮಾಡುವವನೂ, ತಾನು ಸ್ವತಂತ್ರನಲ್ಲದೆ ಕೋಪಮಾಡುವವನೂ ಮೂಢರಲ್ಲಿ ಮುಖ್ಯನು. ಧರ್ಮಾರ್ಥಗಳಿಂದ ರಹಿತವಾದ ತನ್ನ ಬಲವನ್ನು ತಿಳಿಯದೆ ಮಹತ್ತರವಾದ ಎತ್ತರಿಂದ ಸಾಧಿಸತಕ್ಕಂಥಾ ತನ್ನಿಂದಾ ಹೊಂದಕೂಡದಂಥಾದನ್ನು ಇಚ್ಛಿಸುವವನೇ ಮೂಢಬುದ್ಧಿಯುಳ್ಳವನೆಂದು ಹೇಳಲ್ಪಡುತ್ತಾನೆ. ಶಿಷ್ಯನಲ್ಲದವನನ್ನು ಶಿಕ್ಷಿಸುವವನು ಯಾವನೋ ದಾರಿದ್ರನನ್ನೂ ದಾತೃತ್ವವಿಲ್ಲದವನನ್ನೂ ಸೇವಿಸುವವನು ಯಾರೋ ಅವನ್ನ ಮೂಢಬುದ್ಧಿಯುಳ್ಳವನೆಂದು ನುಡಿಯುವರು. ಮಹತ್ತರವಾದ ಮೋಕ್ಷಾರ್ಥವನ್ನು ವೇದಾಂತವಿದ್ಯವನ್ನು ಹೊಂದಿ ಗರ್ವಿಷ್ಟನಾಗದವನು ಪಂಡಿತನೆಂದು ಹೇಳುವರು ಸದ್ರಸೋಪೇತ ಅನ್ನವನ್ನೂ ಸುಂದರವಾದ ವಸ್ತ್ರವನ್ನೂ ಸೇವಕರಿಗೆ ಭಾಗಮಾಡಿಕೊಡದೆ ತಾನು ಒಬ್ಬನೇ ಭೋಜನಮಾಡಿ ಧಾರಣೆಮಾಡುವವನಿಗಿಂತ

ಹೆಚ್ಚಾದ ನಾಲಕನ್ಯಾರು? ಪಾಪಮಾಡುವವನು, ಒಬ್ಬನು ಫಲವನ್ನು ಅನುಭವಿಸುವವರು ಬಹುಜನರು, ಆ ಬಹುಜನರು ಪಾಪದಿಂದವಿಮುಕ್ತರಾಗುತ್ತಾರೆ. ಆ ಪಾಪ ಮಾಡಿದವನು ಆ ಪಾಪಲೇಪನವುಳ್ಳವನಾಗುತ್ತಾನೆ. ಧನುರ್ಧಾರಿಯಿಂದ ಬಿಡುವ ಬಾಣವು ಒಬ್ಬನನ್ನು ಸಂಹಾರ ಮಾಡುವದುಂಟು ಮತ್ತು ತಪ್ಪಿಹೋಗುವದುಂಟು ಬುದ್ಧಿವಂತನ ಆಲೋಚನೆಯಿಂದ ಮಾಡಲ್ಪಡುವ ಊಹೆ ಅರಸಿನಸಂಗಡಕೂಡಿದ ರಾಷ್ಟ್ರವನ್ನು ನಾಶ ಮಾಡುವದು ಒಂದರಿಂದ ಎರಡನ್ನು ನಿಶ್ಚಯಿಸಿ ಮೂರನ್ನು ನಾಲ್ಕರಿಂದ ಸ್ವಾಧೀನಮಾಡಿಕೊಂಡು ಐದನ್ನು ಜಯಿಸಿ ಆರನ್ನು ತಿಳಿದು ಏಳನ್ನು ಬಿಟ್ಟು ಸುಖವಾಗಿರು ಅಂದರೆ ಬುದ್ಧಿಯಿಂದಲಾದರೂ, ವೇದದಿಂದಲಾದರೂ, ವಿದ್ಯಾವಿದ್ಯೆಗಳನ್ನು ನಿತ್ಯಾನಿತ್ಯಗಳನ್ನು ತಿಳಿದ ಧರ್ಮಾರ್ಥಕಾಮಗಳನ್ನು ಋಗ್ವಾದಿವೇದಗಳಿಂದಲಾದರೂ ಸಾಮಾದ್ಯುಪಾಯಗಳಿಂದಲಾದರೂ ಸ್ವಾಧೀನ ಮಾಡಿಕೊ. ಜ್ಞಾನೇಂದ್ರಿಯಗಳನ್ನಾದರೂ, ಪಂಚಪ್ರಾಣಗಳನ್ನಾದರೂ, ಜಯಿಸಿ ಕಾಮಕ್ರೋಧ ಲೋಭ ಮೋಹ ಮದ ಮತ್ಸರಗಳನ್ನಾದರೂ, ಸಂಧಿ, ವಿಗ್ರಹ, ಯಾನ, ಆಸನ, ದ್ವೈಧೀಭಾವಾಶ್ರಯಗಳನ್ನಾದರೂ, ತಿಳಿದು ಆಲಸ್ಯ, ಮದ, ಮೋಹ, ಚಾಪಲ್ಯ, ಅತಿಭಾಷೆ, ಸ್ತಂಭೀಭಾವ, ಅತ್ಯಹಂಕಾರಭಾವಗಳನ್ನು ಸ್ತ್ರೀಲಕ್ಷ್ಯ, ಮೃಗಯಾತ್ರೆ, ಪಾನ, ವಾಕ್ಪಾರುಷ್ಯ, ದಂಡ, ಪಾರುಷ್ಯ ಅರ್ಥದೂಷಣಗಳನ್ನು ಬಿಟ್ಟು ಸುಖವಾಗಿರು.

ವಿಷವನೊಬ್ಬನನ್ನು ಸಂಹಾರ ಮಾಡುವದು. ಶಸ್ತ್ರದಿಂದ ಒಬ್ಬನೇ ಕೊಲ್ಲಲ್ಪಡುವನು ಅರಸು ಮಾಡುವ ಆಲೋಚನೆ ಎರಡನೇಯವರಿಂದ ತಿಳಿಯಲ್ಪಟ್ಟದ್ದಾದರೆ ಪ್ರಜೆಗಳ ಸಂಗಡ ಕೂಡಿಕೊಂಡಿರುವ ರಾಷ್ಟ್ರವನ್ನೂ ಅರಸನನ್ನೂ ಸಂಹಾರಮಾಡುವದು.

ಸ್ವಾದುಪದಾರ್ಥವನ್ನು ಒಬ್ಬನು ಭೋಜನ ಮಾಡಬಾರದು. ತನಗೆ ಬೇಕಾದ ಪ್ರಯೋಜನಗಳನ್ನು ತಾನೊಬ್ಬನೇ ಯೋಚನೆಮಾಡಬಾರದು.

ಮಾರ್ಗದಲ್ಲಿ ತಾನೊಬ್ಬನೇ ನಡಿಯಬಾರದು. ಬಹುಜನರು ನಿದ್ರೆಹೋಗುತ್ತಿರುವಾಗ ತಾನು ಒಬ್ಬನಾತ್ರ ಎದ್ದಿರಬಾರದು. ಓ ಅರಸನೇ ಯಾವ ಸತ್ಯವು ತನ್ನಿಂದ ತಿಳಿಯಲ್ಪಡುವದೋ ಆ ಸತ್ಯ ಒಂದೇ. ಎರಡನೇದು ಇಲ್ಲದ್ದು ಸಮುದ್ರದಲ್ಲಿ ನಾವೆಯು ಹಾಗೆಯೇ ಸ್ವರ್ಗಕ್ಕೆ ಸೋಪಾನಭೂತವಾದಂಥಾದ್ದು ಕ್ಷಮಾಗುಣದಿಂದಯುಕ್ತವಾದ ಪುರುಷನನ್ನು ಜನರು ಅಶಕ್ತನಾಗಿ ತಿಳಿಯುತ್ತಾರೆ. ಈ ಅಶಕ್ತತೆ ಒಂದೇ ದೋಷ ಹೊರ್ತು ಕ್ಷಮಾವಂತರಲ್ಲಿ ಎರಡನೇ ದೋಷವು ಇಲ್ಲ. ಆದರೆ ಆ ಕ್ಷಮಾಗುಣವನ್ನು ದೋಷವಾಗಿ ತಿಳಿಯದೆ ಶ್ರೇಷ್ಠಧನವಾಗಿ ತಿಳಿಯಬೇಕು. ಅದಕಾರಣ ಅಶಕ್ತರಾದವರಿಗೆ ಕ್ಷಮೆಯೇ ಗುಣವು ಆಭರಣವು. ಲೋಕದಲ್ಲಿ ಆ ಕ್ಷಮೆಯು ಸಮಸ್ತಜನರನ್ನು ಸ್ವಾಧೀನವು ಮಾಡಿಕೊಳ್ಳುವದಾದ್ದರಿಂದ ಆ ಕ್ಷಮೆಯಿಂದ ಯಾವದು ತಾನೇ ಸಾಧ್ಯವಾಗುವದಿಲ್ಲ? ಈ ಕ್ಷಮೆಯೆಂಬ ಖಡ್ಗವು ಯಾವನ ಹಸ್ತದಲ್ಲಿ ಇರುತ್ತಾ ಇರುವದೋ ಅವನ ವಿಷಯವಾಗಿ ದುರ್ಜನರು ಏನುಮಾಡುವರು ?

ತೃಣವಿಲ್ಲದ ಪ್ರದೇಶದಲ್ಲಿ ಬಿದ್ದ ಅಗ್ನಿಯು ತನಗೆ ತಾನೇ ಶಾಂತವಾಗುವದು. ಕ್ಷಮೆಯಿಲ್ಲದ ಪುರುಷನು ಕೇವಲದೋಷಗಳಿಂದ ತನ್ನ ಕೆಡಿಸುವನಾಗುವನು. ಧರ್ಮವು ಒಂದೇ ಶ್ರೇಯಸ್ಕರವಾದದ್ದು. ಕ್ಷಮೆ ಒಂದೇ ಉಪಶಾಂತಿಕರವಾದದ್ದು. ತಿಳಿವಿಕೆ ಒಂದೇ ತೃಪ್ತಿಕರವಾದದ್ದು. ಅಹಿಂಸೆಯೊಂದೇ ಸುಖಸಂಪಾದಕವಾದದ್ದು. ಭೂಮಿಯು ಯುದ್ಧವು ಮಾಡದ ಅರಸನನ್ನು ಪ್ರವಾಸವು ಮಾಡದ ಬ್ರಾಹ್ಮಣನನ್ನು ಇವರಿಬ್ಬರನ್ನು ಬಿಲಗಳಲ್ಲಿರುವ ಸರ್ಪಗಳನ್ನು ಭೂಮಿಯು ಹ್ಯಾಗೆ ಒಳಗೆಯಿಟ್ಟುಕೊಂಡು ಇರುವದೋ ಹಾಗೆ ಗ್ರಾಸವು ಮಾಡುವದು.

ಪರುಷವಾದ ವಾಕ್ಯಗಳನ್ನು ನುಡಿಯದೆ ದುಷ್ಟರನ್ನು ಪೂಜಿಸದಿರುವ ಪುರುಷನು ಈ ಲೋಕದಲ್ಲಿ ಪ್ರಕಾಶಿಸುವನು. [illegible]

ಲ್ಲಿ ಕಾಮುಕರಾದ ಸ್ತ್ರೀಯರು ಮೂರ್ಖರಿಂದ ಪೂಜಮಾನನಾದ ಕೇಡವನ್ನು ಪ್ರಶಂಸೆ ಮಾಡುವವನು ಇವರಿಬ್ಬರು ಎರಡನೇಯವರ ವಿಶ್ವಾಸವನ್ನು ಮಾಡುವವರು. ತಾನು ದ್ರವ್ಯವಂತನಲ್ಲದೆ ಅಸಾಧ್ಯವಾದ ಕಾರ್ಯಗಳನ್ನು ಕೋರುವವನೂ ತಾನು ಅಧಿಪತಿ ಅಲ್ಲದಲೆ ಎರಡನೇಯವರ ಮೇಲೆ ಕೋಪಮಾಡುವವನೂ ಇವರಿಬ್ಬರೂ ಶರೀರಗಳನ್ನು ಶೋಷಣೆ ಮಾಡುವಂಥಾ ಕ್ರೂರವಾದ ಮುಳ್ಳುಗಳಂಥವರು. ಗೃಹಸ್ಥಾಶ್ರಮದಲ್ಲಿ ಇರುವವನಾಗಿ ನಿರುದ್ಯೋಗದಲ್ಲಿ ಇರುವ ಮನುಷ್ಯನು ಸರ್ವಸಂಪರಿತ್ಯಾಗಿಯಾದವನಾದರೂ ಅನೇಕ ಕೆಲಸಗಳನ್ನು ಮಾಡುವಂಥಾ ಸನ್ಯಾಸಿಯು. ಇವರಿಬ್ಬರೂ ತಮ್ಮ ಆಶ್ರಮಗಳಿಗೆ ವಿರೋಧವಾದ ಕರ್ಮದಿಂದ ಪ್ರಕಾಶಿಸುವದಿಲ್ಲ. ಕ್ಷಮಾಗುಣವುಳ್ಳ ಶಕ್ತನೂ ಬುದ್ಧಿಶಕ್ತಿ ದಾನಮಾಡುವ ದರಿದ್ರನೂ ಇವರಿಬ್ಬರೂ ಸ್ವರ್ಗಕ್ಕಿಂತಾ ಮೇಲಿರುವ ಲೋಕಗಳಲ್ಲಿ ಇರುವವರು. ನ್ಯಾಯಾರ್ಜಿತವಾದ ದ್ರವ್ಯವನ್ನು ಅಪಾತ್ರದಲ್ಲಿ ಕೊಡುವದೂ ಪಾತ್ರದಲ್ಲಿ ಕೊಡದೆಹೋಗುವದೂ ಈ ಎರಡೂ ವ್ಯತ್ಯಾಸವಾಗಿವೆ. ದಾನವು ಮಾಡುವ ದ್ರವ್ಯವಂತನೂ ತಪಸ್ಸುಮಾಡುವ ದರಿದ್ರನೂ ಇವರಿಬ್ಬರೂ ಕಂಠದಲ್ಲಿ ಅಧಿಕವಾದ ಶಿಲೆಯಿಂದ ಕಟ್ಟಲ್ಪಟ್ಟು ಉದಕದಲ್ಲಿ ಹಾಕಲ್ಪಡತಕ್ಕವರು. ಮನುಷ್ಯರಿಗೆ ಉತ್ತಮ, ಮಧ್ಯಮ, ಅಧಮಗಳೆಂಬ ಮೂರು ಉಪಾಯಗಳು ಉಂಟಾಗಬೇಕೆಂದ ಹೇಳಲ್ಪಡುತ್ತಾರೆ.

ಈ ಅರ್ಥವನ್ನು ಜ್ಞಾನವಂತರು ತಿಳಿಯುವರು. ಈ ಮೂರು ಉಪಾಯಗಳಲ್ಲಿ ಮಧ್ಯೋಪಾಯಕ್ಕೆ ಭೇದದಾನಗಳೆಂಬ ನಾಮಧೇಯವಾದ ಕಾರಣ ಈ ಮೂರೇ ಸಾಮ, ದಾನ, ಭೇದ, ದಂಡಗಳೆಂಬ ನಾಲ್ಕು ಉಪಾಯಗಳೆಂದು ತಿಳಿಯತಕ್ಕದು.

## ಉತ್ತಮವೇ ಸರ್ವೋಪಾಯವು, ದಂಡವು ಅಂತ್ಯದ್ದು.

ಉತ್ತಮ ಮಧ್ಯಮ ಅಧಮಗಳೆಂಬ ಮೂರು ವಿಧಗಳಾದ ಪುರುಷರನ್ನು ಉತ್ತಮ ಮಧ್ಯಮ ಅಧಮ ಕಾರ್ಯಗಳನ್ನು ಮಾಡುವ ನಿಮಿತ್ತವಾಗಿ ಕ್ರಮವಾಗಿ ಪ್ರೇರಣೆಮಾಡತಕ್ಕದ್ದು.

ಹೆಂಡತಿಯು, ಸೇವಕನು, ಮಗನು, ಇವರು ಮೂರು ಮಂದಿಯೂ ಧನಕ್ಕೆ ಸ್ವತಂತ್ರರಲ್ಲ. ಈ ಧನವನ್ನು ಯಾರು ಹೊಂದುತ್ತಾರೋ ಅವರೇ ಸ್ವತಂತ್ರರಾಗುತ್ತಾರೆ ಪರಸ್ವಾಪಹಾರವೂ, ಪರದಾರಾಗಮನವೂ ಸ್ನೇಹಿತರನ್ನು ಪರಿತ್ಯಾಗಮಾಡುವದೂ ಈ ಮೂರು ದೋಷಗಳು ಭಯವನ್ನು ಕೊಡುವಂಥವು. ಕಾಮ, ಕ್ರೋಧ, ಲೋಭಗಳು ಮೂರೂ ತನ್ನ ನರಕವನ್ನು ಹೊಂದಿಸುವದಕ್ಕೋಸ್ಕರ ದ್ವಾರದಂಥವುಗಳು. ಆದಕಾರಣ ಈ ಮೂರನ್ನು ತ್ಯಾಗಮಾಡತಕ್ಕದ್ದು.

ಭಕ್ತನಾದವನ್ನನ್ನು ಸೇವೆಮಾಡುತ್ತಾ ಇರುವವನನ್ನು ಯುದ್ಧಕಾಲದಲ್ಲಿ ನಿನ್ನ ಕಡೆಯವನೆಂದು ಹೇಳುತ್ತಾ ಇರುವವನ್ನೂ ಈ ಮೂರು ಮಂದಿಯನ್ನು ವಿಷಮಕಾಲದಲ್ಲಿ ತ್ಯಾಗಮಾಡಕೂಡದು.

ವರವನ್ನು ಕೊಟ್ಟು ರಕ್ಷಿಸುವದೂ ರಾಜ್ಯವನು ಕೊಟ್ಟು ರಕ್ಷಿಸುವದೂ ಪುತ್ರೋತ್ಪತ್ತಿಯೂ ಕಷ್ಟದಿಂದ ಶತ್ರುವನ್ನು ಬಿಡಿಸುವದೂ ಈ ನಾಲ್ಕು ಸಮವಾದ ಸುಖಗಳು.

ಬಲವಂತನಾದ ಅರಸು ಸ್ವಲ್ಪ ಪ್ರಜ್ಞೆವುಳ್ಳವರ ಸಂಗಡಲೂ ಶೀಘ್ರ ಕಾರ್ಯವನ್ನು ಸಾವಕಾಶವೆಂದು ಹೇಳುವವರ ಸಂಗಡಲೂ ಅತಿ ಕ್ರೂರವುಳ್ಳವರ ಸಂಗಡಲೂ ಚಾರರ ಸಂಗಡಲೂ ಆಲೋಚನೆ ಮಾಡುವದನ್ನು ವರ್ಜಿಸಬೇಕೆಂದು ಹೇಳುವರು. ಆದಕಾರಣ ಪಂಡಿತನು ಇದನ್ನು ತಿಳಿಯತಕ್ಕದ್ದು.

ಐಶ್ವರ್ಯಸಂಪನ್ನನಾಗಿ ಗೃಹಸ್ಥಾಶ್ರಮದಲ್ಲಿ ಇರುವ ನಿನ್ನ ಮನೆಯಲ್ಲಿ ವೃದ್ಧನಾದ ಜ್ಞಾತಿಯೂ ಧನರಹಿತನಾದ ಸತ್ಕುಲಪ್ರಸೂತನೂ ದರಿದ್ರನಾದ ಸ್ನೇಹಿತನೂ ಪತಿಪುತ್ರರಿಂದ ರಹಿತಳಾದ ಸಹೋದರಿಯೂ ಈ ನಾಲ್ಕುಮಂದಿಯೂ ಇರಲಿ.

ಪೂರ್ವದಲ್ಲಿ ತನ್ನ ಕುರಿತು ಪ್ರಶ್ನೆಮಾಡಿದಂಥಾ ಇಂದ್ರನಿಮಿತ್ತವಾಗಿ ತಕ್ಷಣದಲ್ಲಿ ಫಲಸಾಧಕಗಳಾದ ನಾಲ್ಕು ವ್ಯಾಪಾರಗಳನ್ನು ಬೃಹಸ್ಪತಿಹೇಳಿರುವದನ್ನು ನನ್ನಿಂದ ನೀನು ಕೇಳುವನಾಗು.

ದೇವತರ ಸಂಕಲ್ಪವೂ ಬುದ್ಧಿವಂತರ ಪ್ರಭಾವವೂ ವಿದ್ಯಾವಂತರ ವಿನಯವೂ ಪಾಪಿಷ್ಠರ ನಾಶನವೂ ಈ ನಾಲ್ಕು ಸದ್ಯಃ ಫಲಸಾಧಕಗಳು. ತಂದೆ, ತಾಯಿ, ಅಗ್ನಿ, ಪರಮಾತ್ಮ, ಗುರುವು, ಎಂಬ ಈ ಐದು ಅಗ್ನಿಗಳೂ ಪ್ರಯತ್ನಪೂರ್ವಕವಾಗಿ ಮನುಷ್ಯನಿಂದ ಸೇವಿಸತಕ್ಕವುಗಳು.

ದೇವತರನ್ನೂ ಪಿತೃಗಳನ್ನೂ ಮನುಷ್ಯರನ್ನೂ ಸನ್ಯಾಸಿಗಳನ್ನೂ ಅತಿಥಿಗಳನ್ನೂ ಈ ಐದು ಜನರನ್ನು ಈ ಲೋಕದಲ್ಲಿ ಪೂಜೆಮಾಡುವವನು ಕೇವಲ ಯಶಸ್ಸನ್ನು ಹೊಂದುವನು.

ಮಿತ್ರರು, ಅಮಿತ್ರರು, ಮಧ್ಯಮರು, ಉದಾಸೀನರು ಅನುಸರಣೆ ಮಾಡಿ ಜೀವನಮಾಡುವವರು, ಇವರು ಐದುಜನರೂ ನಿನ್ನನ್ನು ಅನುಸರಿಸಿ ಇರುವವರು. ಇವರಿಂದ ನೀನು ಬಿಡಲ್ಪಡತಕ್ಕವನಲ್ಲ

ಆದಕಾರಣ ಪಾಂಡವರಿಗೆ ರಾಜ್ಯವನ್ನು ಕೊಟ್ಟರಾದ್ದರೆ ನಿನಗೆ ವಿಶೇಷವಾಗಿ ಸಹಾಯಲಾಭವೂ ಧರ್ಮಕೀರ್ತಿಗಳೂ ಕೂಡ ಉಂಟಾಗುವವು. ಮುಖ್ಯಧರ್ಮವನ್ನು ಹೊಂದಿದ ಪುರುಷನು ಐದು ಇಂದ್ರಿಯಗಳೊಳಗೆ ಒಂದುಯಿಂದ್ರಿಯ ನಾಶವಾದ ಹಾಗಾದರೆ, ಆ ಪುರುಷನ ಪ್ರಜ್ಞೆಯು ಜಾರಿಹೋಗುವದು. ಹ್ಯಾಗಂದರೆ ಚರ್ಮಭಸ್ತ್ರಿಗಳ ಪಾದದಿಂದ ಉದಕವು ಜಾರಿಹೋಗುವಹಾಗೆ ಜಾರಿ ಹೋಗುವದು. ನಿದ್ರೆ, ತೂಕಡಿಕೆ, ಭಯ,

ಕ್ರೋಧ, ಆಲಸ್ಯ, ಚಿರಕ್ರಿಯತ್ವ ವೆಂಬುವ ಈ ಆರು ದೋಷಗಳೂ ಐಶ್ವರ್ಯಾಪೇಕ್ಷಿತನಾದ ಪುರುಷನಿಂದ ಹೊಡಿಯಪಡತಕ್ಕವುಗಳು. ಶಿಷ್ಯರನ್ನು ಕುರಿತು ರಹಸ್ಯವಿದ್ದದ್ದನ್ನು ಹೇಳದೆ ಇರುವ ಗುರುವು ಅಧ್ಯಯನವು ಬಾರದ ಋತ್ವಿಕ್ಕನೂ ಬಹುಭಕ್ಷನಾದ ವೇದಪಾಠಕನಾದ ಬ್ರಾಹ್ಮಣನೂ ಸಂಸಾರಾಪೇಕ್ಷಿತನಾದ ಸನ್ಯಾಸಿಯೂ ದುಷ್ಟನಿಗ್ರಹಶಿಷ್ಟಪರಿಪಾಲನೇ ಮಾಡದ ಅರಸನೂ ಪ್ರತಿಕೂಲವಾಕ್ಯಗಳನ್ನು ಹೇಳುವ ಹೆಂಡತಿಯೂ ಈ ಆರು ಮಂದಿಯನ್ನು ಭಿನ್ನವಾದ ನಾವೆಯನ್ನು ಸಮುದ್ರದಲ್ಲಿ ತ್ಯಾಗಮಾಡಿದ ಹಾಗೆ ತ್ಯಾಗಮಾಡತಕ್ಕದ್ದು.

ಸತ್ಯ, ದಾನ, ಅನಾಲಸ್ಯ, ಅನುಸೂಯೆ, ಕ್ಷಮೆ, ಧೈರ್ಯ, ವೆಂಬುವ ಈ ಆರು ಗುಣಗಳು ಪುರುಷನಿಂದ ಒಂದಾನೊಂದು ಕಾಲದಲ್ಲಾದರೂ ತ್ಯಾಗಮಾಡತಕ್ಕವುಗಳಲ್ಲ. ಗೋವು, ಸೇವೆ, ಕೃಷಿ, ಹೆಂಡತಿ, ವಿದ್ಯೆ ಈ ಐದು ಮುಹೂರ್ತ ಮಾತ್ರವಾದರೂ ನೋಡದೆ ಹೋದರೆ ನಾಶಿಸಿಹೋಗುವದು ಧನುರ್ದೂಷಕನಾದವನ ಸಂಗತಿಯೂ ಮುಹೂರ್ತ ಮಾತ್ರವಾದರೂ ನೋಡಿಕೊಳ್ಳದೆ ಹೋದರೆ ನಾಶಮಾಡುವದು. ಗುರುವಿನ ಬಳಿಯಲ್ಲಿ ಓದಿಕೊಂಡು ಬುದ್ಧಿವಂತನಾದ ಶಿಷ್ಯನು, ಗುರುವಿನನ್ನು ಕೃತಕೃತ್ಯರಾದ ಪುರುಷರು ಅರಸನನ್ನು ಕಾಮಬಂಗ ರಹಿತಳಾದ ಸ್ತ್ರೀಯನ್ನು ಕೃತಾರ್ಥರಾದವರು ಪ್ರಯೋಜನವನ್ನು ನಿಸ್ತಾರನಾದ ನದಿಗಳು ನಾವೆಯನ್ನು ಆತುರರಾದವರು ವೈದ್ಯರನ್ನು ಈ ಆರು ಮಂದಿ ಪೂರ್ವೋಪಕಾರಿಗಳಾದ ಈ ಆರು ಜನರನ್ನು ಅವಮಾನಮಾಡುವರು. ಆರೋಗ್ಯವು ಸಾಲವಿಲ್ಲದೇ ಇರುವದು. ವಿಶೇಷವಾಗಿ ಪ್ರವಾಸ ಮಾಡದೇ ಇರುವದು. ಸತ್ಪುರುಷಸಂಗವು ತನಗೆ ಅನುಕೂಲವಾದ ಜೀವನೋಪಾಯವು ತನಗೆ ಭಯವಿಲ್ಲದ ಸ್ಥಳಗಳಲ್ಲಿ ಇರುವದೂ ಈ ಆರೂ ಪ್ರಾಣಾಧಾರಂಗಳಿಗೆ ಸುಖಕರಗಳಾದವುಗಳು. ಕೊಂಡಿಗಳ ಕೋರುವವನ್ನು, ದಯಾಶಾಲಿಯಾದವನು, ಅಸಂತುಷ್ಟನು, ಕೋಪಿಷ್ಟನು. ಎರಡನೇ

ಯುಗಳಲ್ಲಿ ನಿತ್ಯವೂ ಸಂದೇಹಪಡುವವನು, ಎರಡನೇಯವರ ಆಶ್ರಯದಿಂದ ಜೀವನ ಮಾಡುವವನು ಈ ಆರು ಮಂದಿಯು ಪ್ರತಿದಿವಸದಲ್ಲೂ ದುಃಖಿತರು. ಇವರೊಳಗೆ ಧರ್ಮರಾಜನು ಶೋಕೆಯಾದವನು ಅರ್ಥಪ್ರಾಪ್ತಿಯು ಆರೋಗ್ಯವಾದವು ಪ್ರಿಯಕರಳಾದ ಹೆಂಡತಿಯೂ ಪ್ರಿಯೋಕ್ತಿಗಳನ್ನು ಹೇಳುವವನು ಸ್ವಾಧೀನನಾದ ಪುತ್ರನು ದ್ರವ್ಯಸಂಪಾದಕವಾದ ವಿದ್ಯೆ ಈ ಆರು ಮನುಷ್ಯರಿಗೆ ಸುಖಕರವಾದವುಗಳು

ಈ ಆರು ವ್ಯಾಪಾರಗಳೂ ತನ್ನಲ್ಲಿ ಉಳ್ಳ ಜಿತೇಂದ್ರಿಯರು ಪಾತಕಗಳಿಂದ ಅನರ್ಥಗಳಿಂದ ನೊಂದುಕೊಳ್ಳುವದಿಲ್ಲ. ಮತ್ತು ರಾಜರ ವಿಷಯಕವಾಗಿ ಚೋರರು ಜೀವನಮಾಡುತ್ತಾರೆ. ವ್ಯಾಧಿಗ್ರಸ್ತರ ವಿಷಯಕವಾಗಿ ಚಿಕಿತ್ಸಕರು ಜೀವನಮಾಡುತ್ತಾರೆ. ಕಾಮುಕರಲ್ಲಿ ಸ್ತ್ರೀಯರು ಜೀವನ ಮಾಡುತ್ತಾರೆ ಯಾಗವು ಮಾಡುವವರಲ್ಲಿ ಋತ್ವಿಕರು ಜೀವನ ಮಾಡುತ್ತಾರೆ. ಇಬ್ಬರ ವಿವಾದದಲ್ಲಿ ಅರಸು ಜೀವನಮಾಡುತ್ತಾನೆ ಮೂರ್ಖರಲ್ಲಿ ವಿದ್ವಾಂಸರು ಜೀವನಮಾಡುತ್ತಾರೆ. ಈ ಆರು ಜನರೂ ಈ ಆರು ವ್ಯಾಪಾರಗಳಲ್ಲಿ ಜೀವನ ಮಾಡುತ್ತಾರೆ. ಏಳನೇ ಜೀವನೋಪಾಯವೇ ಇಲ್ಲ. ಅಕ್ಷದ್ಯೂತವೂ ಬೇಟೆಯೂ ಮದ್ಯಪಾನವೂ ಕಠಿಣೋಕ್ತಿಗಳು ಹೇಳುವದೂ ಕಠಿಣವಾಗ ದಂಡನೆಮಾಡುವದೂ ಅನ್ಯಾಯವಾಗಿ ದ್ರವ್ಯವ್ಯಯಮಾಡುವದೂ ಈ ಏಳು ದೋಷಗಳೂ ವ್ಯಸನಗಳನ್ನು ಉಂಟುಮಾಡುವವು ಈ ಏಳು ದೋಷಗಳಿಂದ ದೃಢಮೂಲಕಗಳಾದ ಅರಸುಗಳಾದರೂ ಕೆಟ್ಟು ನಾಶಹೊಂದುವರು. ಆ ದೋಷಗಳು ತ್ಯಾಗಮಾಡತಕ್ಕವುಗಳು. ನಾಶನವನ್ನು ಹೊಂದಹೋಗುವ ಪುರುಷನಿಗೆ ಆದಿಯಲ್ಲಿ ಉಂಟಾಗುವ ನಿಮಿತ್ತ ಯಾವಂದರೆ ಬ್ರಹ್ಮದ್ವೇಷವೂ ಬ್ರಹ್ಮರು ತನ್ನಲ್ಲಿ ದ್ವೇಷಮಾಡುವಹಾಗೆ ಮಾಡಿಕೊಳ್ಳುವದೂ ಬ್ರಹ್ಮಸ್ವವನ್ನು ಅಪಹರಿಸುವದೂ ಬ್ರಹ್ಮರನ ಸಂಹಾರಮಾಡುವದು ಬ್ರಾಹ್ಮಣಪ್ರಶಂಸೆಯನ್ನು ಸಹಿಸದೆ ಹೋಗುವದು ನಿಂದೆಮಾಡುವದು ಕಾರ್ಯಗಳಲಿ ಬ್ರಾಹ್ಮ

ಾರನ್ನು ಸ್ಮರಣೆ ಮಾಡದೆ ಇರುವದೂ, ಬ್ರಾಹ್ಮರಿಂದ ಯಾಚಿಸಲ್ಪಟ್ಟು ಅಸೂಯೆ ಪಡುವದೂ ಈ ಎಂಟು ದೋಷಗಳನ್ನು ಬುದ್ಧಿಯಿಂದ ತಿಳಿದು ತ್ಯಾಗ ಮಾಡಬೇಕು.

ಸ್ನೇಹಿತನ ಸಂಗಡ ಸಮಾಗಮವೂ ಮಹತ್ತರವಾದ ಧನಪ್ರಾಪ್ತಿಯೂ ಪುತ್ರನ ಸಂಗಡ ಅಂಗ ಸಂಗಮವೂ ಪತಿಪತ್ನಿ ಭಾವದಲ್ಲಿ ಮಿಥುನ ಕಾರ್ಯವೂ ಸಮಯೋಚಿತವಾದ ಪ್ರಿಯಾಲಾಪವೂ ಸಜನದಲ್ಲಿ ಪ್ರೌಢ್ಯತೆಯೂ ತಾನು ಕೋರಿದ ವಸ್ತುಲಾಭವೂ ಸಭೆಗಳಲ್ಲಿ ಪ್ರೌಢ್ಯತೆಯೂ ಈ ಎಂಟೂ ಅಮೃತಪಾನದ ನಾಗೆ ಸಹಾಯ ಭೋಗಗಳಾಗಿ ಸುಖಕರವಾದವುಗಳು.

ಪ್ರಜ್ಞಾವಿಶೇಷವು ಭಗವಂತನಲ್ಲಿ ಮನಸ್ಸು ಅನುರಕ್ತವಾಗಿರುವದೂ ಬಾಹ್ಯೇಂದ್ರಿಯ ನಿಗ್ರಹವೂ ಬಹು ಶ್ರವಣವೂ ಪರಾಕ್ರಮವೂ ಮಿತಭಾಷಿಯಾಗಿರುವದೂ ಯಥಾಶಕ್ತಿ ದಾನ ಮಾಡುವದೂ ಮಾಡಿದ ಉಪಕಾರಗಳನ್ನು ನೆನಸಿಕೊಳ್ಳುವದೂ ಈ ಎಂಟೂ ಗುಣಗಳು ಪುರುಷನನ್ನು ಪ್ರಕಾಶಿಸುವವು. ಒಂಭತ್ತು ದ್ವಾರಗಳೆಂಬ ಘ್ರಾಣ, ರಸನ, ನೇತ್ರ, ಶ್ರೋತ್ರಪಾಯು ಸ್ತನಗಳೆಂಬ ನವದ್ವಾರಗಳೂ ವಾತ ಪಿತ್ತ ಶ್ಲೇಷ್ಮಗಳೆಂಬ ಮೂರು ಸ್ತಂಭಗಳುಳ್ಳ ಜೀವನೆಂಬ ಅಧಿಷ್ಠಾನ ಮಾಡಲ್ಪಟ್ಟಿರುವಂಥ ಮನೆಯೆಂಬುವ ಶರೀರವು ಅಶಾಶ್ವತವಾದದ್ದೆಂದು ಯಾವನು ತಿಳಕೊಳ್ಳುವನೋ ಅವನೇ ಬ್ರಹ್ಮಜ್ಞಾನಿ. ಮತ್ತನೂ ವಿಷಯಾಸಕ್ತನೂ ಅವಿವೇಕನೂ ಬಳಲಿದವನೂ ಕೋಪಿಷ್ಟನೂ ಸದಾ ಭುಬುಕ್ಷುವುಳ್ಳವನೂ ಕಾರ್ಯವಿಷಯಕ ತ್ವರೆ ಬೀಳುವವನೂ ಲುಬ್ಧನೂ ಭಯಪಡುವವನೂ ಕಾಮುಕನೂ ಈ ಹತ್ತು ಜನರು ಧರ್ಮವನ್ನು ತಿಳಿದವರಲ್ಲೆಂದು ತಿಳಿದುಕೊ.

ಆದಕಾರಣ ಪಂಡಿತನಾದವನು ಪೂರ್ವೋಕ್ತಗಳಾದ ದುರ್ವ್ಯಾಪಾರಗಳಲ್ಲಿ ತಗಲಕೂಡದು.

ಈ ವಿಷಯದಲ್ಲಿ ಸುಧನ್ವನೆಂಬ ಬ್ರಾಹ್ಮಣನಿಗೂ ವಿರೋಚನನಿಗೂ ಸ್ಪರ್ಧೆಬಂದಾಗ ಪುತ್ರನ ನಿಮಿತ್ತವಾಗಿ ಪ್ರಹ್ಲಾದನಿಂದ ಹೇಳಲ್ಪಟ್ಟಿರುವ ಇತಿಹಾಸವನ್ನು ಪೂರ್ವಿಕರು ಹೇಳುತ್ತಾ ಇದ್ದಾರೆ. ಯಾವ ಅರಸನು ಕಾಮ ಕ್ರೋಧಗಳನ್ನು ಬಿಟ್ಟು ಸತ್ಪಾತ್ರದಲ್ಲಿ ದ್ರವ್ಯವನ್ನು ಕೊಟ್ಟು ಜನರಲ್ಲಿರುವನು. ಗುಣ ದುರ್ಗುಣಗಳನ್ನು ತಿಳಿದು ಜಾಗರೂಕನಾದವನನ್ನು ಸಮಸ್ತರೂ ಪ್ರಮಾಣದ ಹಾಗೆ ತಿಳಿಯುವರು.

ಮನುಷ್ಯರ ಸಂಗಡ ವಿಶ್ವಾಸಿಸುವದಕ್ಕೆ ಯೋಗ್ಯನಾದವನಾಗಿ ದೋಷಗಳುಳ್ಳವರಲ್ಲಿ ದಂಡವನ್ನು ಕೊಡುತ್ತಾ ಇರುವಂಥಾ ಯಾವ ಪುರುಷನ ವಿಷಯಕವಾಗಿ ನನ್ನನ್ನು ಕುರಿತು ಎಲೈ ಸುಧನ್ವನೇ ಪ್ರಶ್ನೆ ಮಾಡಿದ್ದೀಯೋ—ಆ ಪುರುಷನನ್ನು ಪೂರ್ಣವಾದ ಲಕ್ಷ್ಮೀ ಹೊಂದುವಳು.

ಶತ್ರುವು ದುರ್ಬಲನಾಗಿದ್ದರೂ ಅವನಿಗೆ ಸ್ವಲ್ಪವಾದರು ಅವಮಾನವಮಾಡದವನು, ಶತ್ರುಗಳ ಛಿದ್ರವನ್ನು ತಿಳಿಯುವನಿಮಿತ್ತ ಬುದ್ಧಿಪೂರ್ವಕವಾಗಿ ಶತ್ರುವನ್ನು ಸೇರಿಸುವವನೂ ಬಲವಂತನ ಸಂಗಡ ವಿರೋಧ ಅಪೇಕ್ಷಿಸದವನೂ ಶತ್ರುಗಳ ಮರ್ಮಗಳನ್ನು ತಿಳಿದು ತಾನು ವಿಶೇಷವಾಗಿ ಬಲವಂತರಾದ ಶತ್ರುಗಳು ದುರ್ಬಲರಾದ ಕಾಲದಲ್ಲಿ ಪರಾಕ್ರಮವನ್ನು ಮಾಡುವವನು ಯಾರೋ ಅವನು ಧೀರನು.

ಆಪತ್ತನ್ನು ಹೊಂದಿ ಬಂದಾನೊಂದು ಕಾಲದಲ್ಲಾದರೂ ವ್ಯಥೆಪಡದೆ ಉತ್ತರೋತ್ತರ ಕಾರ್ಯಗಳನ್ನು ಮಾಡಲಿಚ್ಛಿಸುತ್ತಾ ಜಾಗ್ರತೆಯುಳ್ಳವನಾಗಿ ಸಂಭವಿಸಿದ ದುಃಖಗಳನ್ನು ಕಾಲ ಕಾಲದಲ್ಲಿ ಸಹಿಸುವಂಥಾ ಮಹಾ ಮನಸ್ವಿಯಾದವನು ಧುರಂಧರನು. ಇವನಿಂದ ಶತ್ರುಗಳೆಲ್ಲರು ಜಯಿಸಲ್ಪಡುವರು.

ನಿರರ್ಥಕವಾಗಿ ಮನೆಗಳನ್ನು ಬಿಟ್ಟು ಪ್ರವಾಸಮಾಡುವದು, ಪಾಪಿಷ್ಟರ ಸಂಗಡ ಸಂಬಂಧಮಾಡುವದು, ಪರದಾರಾಗಮನವು, ಡಾಂಭತನ

ವನ್ನು ಹೊಂದುವದೂ ಚೌರ್ಯವನ್ನು ಮಾಡುವದೂ ದೌರ್ಜನ್ಯವನ್ನು ಹೊಂದುವದೂ, ಮದ್ಯಪಾನವನ್ನು ಮಾಡುವದೂ, ಇವುಗಳನ್ನು ಯಾವನು ಬಿಡುವನೋ ಅವನು ನಿರಂತರದಲ್ಲಿಯೂ ಸುಖಿಯಾಗಿ ಧರ್ಮಾರ್ಥ ಕಾಮಗಳನ್ನು ತ್ವರೆಯಾಗಿ ಸಂಪಾದಿಸುವದಕ್ಕೋಸ್ಕರ ಆರಂಭಮಾಡುವವನು. ಸಾಕ್ಷಿಯಾಗಿ ಕರೆಯಲ್ಪಟ್ಟವನಾಗಿ ಯಥಾರ್ಥವನ್ನು ಹೇಳುವವನೂ ಸ್ವಲ್ಪ ಪ್ರಯೋಜನ ನಿಮಿತ್ತವಾಗಿ ವಿವಾದ ಮಾಡದವನು ಎರಡನೇಯವರ ಸಂಗದ ಪ್ರೀತಿಮಾಡದೆ ಹೋದರೂ ಕೋಪವು ಮಾಡದವನೂ. ಇವನು ಪಾಪ್ಯನಿಲ್ಲದವನು.

ಎರಡನೇಯವರ ಮೇಲೆ ಅಸೂಯೆಪಡದೆ ದಯೆ ಮಾಡುವವನು ದುರ್ಬಲನಾಗಿ ಶತ್ರುಗಳಿಗೆ ಪ್ರತಿಕೂಲವಾಗದ ಹಾಗೆ ಮಾಡದವನು ಅತಿ ಭಯಸಂಭವಿಸಿದ ಕಾಲದಲ್ಲಿ ವಿವಾದ ವಿಷಯಕನಾಗಿ ಕ್ಷಮೆಯುಳ್ಳವನು ಸರ್ವತ್ರ ಪ್ರಶಂಸೆಯನ್ನು ಹೊಂದುತ್ತಾನೆ

ಕೋಪಯುಕ್ತವಾದ ವೇಷವನ್ನು ಬಂದಾನೊಂದು ಕಾಲದಲ್ಲಾದರೂ ಧರಿಸದೆ ಪೌರುಷದಿಂದ ಎರಡನೇಯವರನ್ನು ತಿರಸ್ಕಾರಮಾಡಿ ಆತ್ಮಸ್ತುತ್ಯವನ್ನು ಮಾಡಿಕೊಳ್ಳದೆಯೂ ಧೃಢನಾದವನಾಗಿ ಕಠೋರೋಕ್ತಿಗಳನ್ನು ಹೇಳದೆ ಇರುವವನು ಯಾವನೋ ಅವನನ್ನು ನಿರಂತರದಲ್ಲಿ ಎಲ್ಲರೂ ಪ್ರಿಯನಾಗಿ ಮಾಡಿಕೊಳ್ಳುವರು.

ಯಾವನು ಶಾಂತವಾದ ವೈರವನ್ನು ಪ್ರಬಲಮಾಡದೆ ಹೋಗುವನೋ ಯಾವನು ಅಹಂಕಾರವನ್ನು ಹೊಂದದೆ ಇರುವನೋ ಯಾವನು ಅಪ್ರಸಿದ್ಧ ಭಾವವನ್ನು ಹೊಂದದೆ ಹೋಗುವನೋ ಯಾವನು ದರಿದ್ರನಾದನೆಂದು ದುಷ್ಟಕಾರ್ಯವನ್ನು ಮಾಡದೆ ಹೋಗುವನೋ ಅವನನ್ನು ಪುಣ್ಯರಿಂದ ಸ್ವಭಾವವುಳ್ಳವನಾಗಿ ಶ್ರೇಷ್ಠರು ಕೆಲವರು ನುಡಿಯುವರು.

ತಾನು ಸುಖಪಡುವದರಲ್ಲಿ ಅಸಂತೋಷ ಉಂಟಾಗದವನೂ ಪರಜನರಿಗೆ ದುಃಖ ಉಂಟಾದ ಕಾಲದಲ್ಲಿ ಸಂತೋಷಪಡದವನೂ ಪರಜನರಿಗೆ ತಾನು ಕೊಟ್ಟು ಅನಂತರದಲ್ಲಿ ಪಶ್ಚಾತ್ತಾಪಪಡದ ವನೂ ಪುರುಷಾರ್ಥಗಳಾದ ನಾಲ್ಕುಗಳನ್ನು ಅರಿದವನಾಗಿ ಒಳ್ಳೇ ಸ್ವಭಾ ವವುಳ್ಳವನೂ ಸತ್ಪುರುಷನೆನಿಸಿಕೊಳ್ಳುವನು.

ವೇದೋಕ್ತ ಕರ್ಮಗಳನ್ನು ತಿಳಿದವನಾಗಿ ದೇಶಾಚಾರಗಳನ್ನೂ ಕಾಲ ಗಳನ್ನೂ ಚಾತುರ್ವರ್ಣ ಧರ್ಮಗಳನ್ನೂ ಹೊಂದಲಿಚ್ಛಿಸುವವನಾದ ಪುರುಷನು ಯಾವ ಯಾವ ದೇಶವನ್ನು ಕುರಿತು ಹೋಗುವವನಾದರೂ ನಿರಂತರದಲ್ಲಿ ಅನೇಕ ಜನರಿಗೆ ಅಧಿಪತಿ ಯಾಗುವನು.

ಡಂಭ, ಮೋಹ, ಮತ್ಸರ, ಪಾಪಕಾರ್ಯ, ರಾಜದ್ವೇಷ, ದೌ ಷ್ಟ್ಯ, ಬಹು ಜನವಿರೋಧ, ಇವುಗಳನ್ನು ಸ್ವಭಾವತಃ ಮತ್ತರಸಂಗ ದಿಂದ ಸಾಧ್ಯವಾಗುವ ಮತ್ಸರಾದವರ ಸಂಗದಿಂದ ದುರ್ಜನರ ಸಂಗದಿಂದ ಅತಿನಿಂದ್ಯವಾದ ಸ್ವೇಚ್ಛಾಕಾರಿಯಾಗದವನಾಗಿ ವರ್ತಿಸುವವನು ಶ್ರೇಷ್ಠನು. ದಮ, ಶೌಚಧೈರ್ಯ, ದೇವತಾಪ್ರದಕ್ಷಿಣೆ, ಮಂಗಳವಸ್ತುಗ ಳು, ಪ್ರದಕ್ಷಿಣೆ, ಪ್ರಾಯಶ್ಚಿತ್ತಗಳ ಸ್ಮರಣೆ, ಹಿಂದಿನ ಜನರಾದವರ ವೃ ತ್ತಾಂತಗಳು, ಇವುಗಳನ್ನು ನಿತ್ಯಗಳಾಗಿ ತಿಳಿದಂಥವನ ಕೀರ್ತಿಯನ್ನು ದೇವತೆಗಳು ಶ್ರೇಷ್ಠವಾಗಿ ತಿಳಿಯುವರು.

ಸಮಾನರ ಸಂಗಡ ವಿವಾದವು ಮಾಡುತ್ತ ಹೀನರಸಂಗಡ ವಿಗ್ರಹವೂ ವ್ಯವಹಾರವೂ ವೃತ್ತಾಂತಗಳೂ ಮಾಡದೆ ಗುಣಶ್ರೇಷ್ಠರನ್ನು ಸಮೀಪದಲ್ಲಿಟ್ಟುಕೊಂಡಿರುವಂಥಾ ಪಂಡಿತನ ನೀತಿಗಳು ಸುಶಿ ಕ್ಷಿತಗಳಾದವುಗಳು.

ಮಿತಭುಕ್ತನಾಗಿ ಆಶ್ರಿತರಿಗೆ ದ್ರವ್ಯವನ್ನು ವಿಭಾಗವಾಗಿ ಮಾಡಿ ಕೊಟ್ಟು ಮಿತನಿದ್ರೆ ಉಂಟಾದವನಾಗಿ ಅಮಿತಕಾರ್ಯಗಳನ್ನು ಮಾ ಡುತ್ತಾ ಶತ್ರುಗಳಿಂದ ಯಾಚಿಸಲ್ಪಟ್ಟ ಸ್ವತ್ತುವನ್ನು ಶತ್ರುಗಳಿಗೆ ಕೊ ಡುತ್ತಾ ಇರುವ ಆತ್ಮಜ್ಞಾನಿಯನ್ನು ಅನರ್ಥಗಳು ಬಿಡುವವು.

ಯಾವನ ಮನಸ್ಸಿನಲ್ಲಿರುವಂಥಾ ಉಪಕಾರಾಪಕಾರಗಳನ್ನು ಪರರು ತಿಳಿಯರೋ, ಅವನ ಆಲೋಚನೆ ರಹಸ್ಯವಾದದ್ದಾಗಿ ಕಾರ್ಯಗಳನ್ನು ಮಾತ್ರ [illegible] ವಂಥಾದ್ದಾಗಿ ಕಾರಣ ಅವನ ಮನಸ್ಸಿನಲ್ಲಿರುವ ಇಷ್ಟಾರ್ಥವು ಸ್ವಲ್ಪವಾದದ್ದಾದರೂ ವ್ಯರ್ಥವಾಗುವದಿಲ್ಲ.

ಯಾವನು ಸಕಲ ಭೂತಗಳಿಗೂ ಕ್ಷೇಮವನ್ನಾಗುವವನಾಗಿ, ಉದ್ಯೋಗ್ಯನಾಗಿ, ಸತ್ಯಗುಣ ಸ್ವಭಾವನಾಗಿ, ಮೃದುಗುಣಯುಕ್ತನಾಗಿ, ಎರಡನೆ ಯವರಿಗೆ ಮಾನವನ್ನುಂಟುಮಾಡುವವನಾಗಿ, ಪರಿಶುದ್ಧವಾದ ಮನಸ್ಸುಳ್ಳ ವನಾಗುವನೋ, ಅವನು ಜ್ಯಾತಿಗಳ ಮಧ್ಯದಲ್ಲಿ ಗಣಿಯಲ್ಲಿ ಹುಟ್ಟುವ ಮಹಾ ಪ್ರಕಾಶವಾದ ರತ್ನದ ಹಾಗೆ ಬಹಳ [illegible] ಪ್ರಸಿದ್ಧಿಗೆ ಬರುವನು.

[illegible] ಸತ್ಕರ್ಮವನ್ನು ಮನಸ್ಸಿನಲ್ಲಿ [illegible] ನು ಸರ್ವ [illegible] ಹಾಗೆ ಪ್ರಕಾಶಿಸುತ್ತಾನೆ.

[illegible] ಇಂದ್ರನಿಗೆ ಸಮಾನರಾದ ಐದು ಮಂದಿ ಕುಮಾರರು ನಿನ್ನಿಂದಲೇ [illegible] ರುತ್ತಾರಲ್ಲ?

ಅವರಿಗೆ ಉಚಿತವಾದ ರಾಜ್ಯವನ್ನು ಕೊಟ್ಟು ನಿನ್ನ ಪುತ್ರರ ಸಂಗಡ ಸುಖವಾಗಿ ಸಂತೋಷಪಡುತ್ತಾಯಿದ್ದರೆ, ದೇವಮನುಷ್ಯರಿಗೆ ಶಂಕಾಸ್ಪದವಿಲ್ಲದವನಾಗಿ ಹೋಗುವಿ.

## ಎರಡನೆ ಅಧ್ಯಾಯವು.

ಧೃತರಾಷ್ಟ್ರನು ಪ್ರಶ್ನೆ ಮಾಡುವದೇನಂದರೆ - ಅಕ್ಷಯನಾದ ವಿದುರನೇ ಧರ್ಮಾರ್ಥಗಳನ್ನು ತಿಳಿದವನಾಗಿದ್ದೀ, ಆದಕಾರಣ ಚಿಂತೆಯಿಂದ

ಅಗ್ನಿಯಿಂದ ದಹಿಸಲ್ಪಡುತ್ತಾ ನಿದ್ರೆಯಿಲ್ಲದೆ ಇರುವಂಥವನಿಗೆ ಚಿಂತಾ ನಾಶಕನಾದ ಯಾವ ಕಾರ್ಯವನ್ನು ನೀನು ನೋಡಿದ್ದೀಯೋ, ಆ ಕಾರ್ಯವನ್ನು ನಮ್ಮಗೋಸ್ಕರ ಹೇಳು; ಎಲೈ ವಿದುರನೇ, ದೈನ್ಯಯುಕ್ತವಾಗದಂಥ ಬುದ್ಧಿಸಾಮರ್ಥ್ಯವುಳ್ಳವನೇ ಧರ್ಮರಾಯನಿಗೂ ಕೌರವರಿಗೂ ಶ್ರೇಯಸ್ಕರವಾದಂಥ ವಾಕ್ಯವನ್ನು ಪ್ರಿಯಪೂರ್ವಕವಾಗಿ ನನ್ನನ್ನು ಕುರಿತು ನೀನು ಹೇಳು.

ಪಾಂಡವರಿಗೆ ರಾಜ್ಯ ಕೊಡದ ಹಾಗಾದರೆ ಪಾಂಡವರೇ ಇರದೆ ಹೋಗುವರೆಂದು ಅಥವಾ ತನ್ನ ಮಕ್ಕಳನ್ನು ಪಾಂಡವರು ನಾಶವನ್ನು ಹೊಂದಿಸುವರೆಂದು ವ್ಯಾಕುಲವಾದ ಮನಸ್ಸಿನಿಂದ ನಾನು ನಿನ್ನನ್ನು ಕೇಳುತ್ತಿದ್ದೇನೆ. ಎಲೈ! ಸರ್ವಜ್ಞನಾದ ವಿದುರನೇ ಧರ್ಮರಾಯನ ಇಷ್ಟಾರ್ಥವನ್ನು ಅಂಗೀಕಾರನಾಗಿ ಮುಂದೆ ಹೇಳೆನ್ನಲು ವಿದುರನು ಹೇಳಿದ್ದೇನೆಂದರೆ:—

ಶುಭ ವಾಕ್ಯವನ್ನಾದರೂ ಪಾಪ ಸಂಪಾದಕ ವಾಕ್ಯವನ್ನಾದರೂ ದ್ವೇಷಿತರಕವಾಕ್ಯವನ್ನಾದರೂ ಪ್ರಿಯಕರವಾದ ವಾಕ್ಯವನ್ನಾದರೂ ಎರಡನೇಯವನಿಂದ ನಾನು ಕೇಳಲ್ಪಡದೆ, ಯಾವ ಪರಾಜಯವನ್ನು ತಾನು ಅಪೇಕ್ಷಿಸದೆ ಹೋಗುವನೋ ಅವನನ್ನು ಕುರಿತು ಹೇಳಕೂಡದು.

ಕುರುವಂಶಸ್ಥರನ್ನು ಕುರಿತು ಶುಭವನ್ನು ಅಪೇಕ್ಷಿಸುತ್ತಿರುವಂಥ, ತಿಳಿದಿರುವಂಥ, ನಾನು ಹೇಳುವಂಥ ಧರ್ಮ ಸಂಪಾದಕವಾದ ಶ್ರೇಯಸ್ಸಂಪಾದಕನಾದ ವಾಕ್ಯವನ್ನು ನೀನು ಕೇಳು.

ಉಪಾಯ ಸಾಧ್ಯಗಳಾದಂಥ ಅಸತ್ಯ ಮಿಶ್ರಗಳಾದಂಥ ಕಾರ್ಯಗಳು ಸಿದ್ಧಿಸುವದುಂಟು. ಭರತವಂಶಸ್ಥನೇ! ಅಂಥ ಕಾರ್ಯಗಳನ್ನು ಮಾಡುವದರಲ್ಲಿ ಮನಸ್ಸನ್ನು ಇಡಬೇಡ.

ಉಪಾಯಪೂರ್ವಕವಾಗಿ ಸಂಧಾನಮಾಡಿದರೂ ಆಗದೆ ಹೋದಂಥಾ ಕೆಲಸಗಳಲ್ಲಿ ಬುದ್ಧಿಶಾಲಿಯಾದವನು ಮನಸ್ಸನ್ನು ವ್ಯರ್ಥ ಇಡಬಾರದು.

ತಾನು ಮಾಡುವಂಥ ಕಾರ್ಯಗಳು ದೋಷ ಸಹಿತಗಳಾದಾಗ ಆ ದೋಷಗಳನ್ನು ಉಪೇಕ್ಷಿಸದೆ ನೆಟ್ಟಗೆ ಪರಿಶೋಧನೆಮಾಡಿ ಇವು ದೋಷಗಳೆಂದು ಮನಸ್ಸಿನಲ್ಲಿ ಇಡತಕ್ಕದು. ನಿಗ್ರಹಿಯಾಗಿ ಆ ದೋಷಯುಕ್ತಗಳಾದ ಕೆಲಸಗಳನ್ನು ಮಾಡಕೂಡದು.

ತಾನು ಮಾಡುವಂಥ ಕೆಲಸಗಳು ದೋಷಯುಕ್ತವಾದವುಗಳೆಂಬದನ್ನೂ, ಪೂರ್ತಿಯನ್ನು ಹೊಂದುವವುಗಳು ಅನುಕೂಲಗಳೆಂಬುದನ್ನೂ, ಅವುಗಳನ್ನು ಪೂರ್ತಿಮಾಡುವದರಲ್ಲಿ ತನ್ನ ಸಾಮರ್ಥ್ಯವನ್ನೂ ತಿಳಿದು ಧೀರನಾಗಿ ದೋಷ ರಹಿತಗಳಾದ ಕಾರ್ಯಗಳನ್ನು ಮಾಡತಕ್ಕದ್ದು. ದೋಷ ಸಹಿತವಾದ ಕಾರ್ಯಗಳನ್ನು ತ್ಯಾಗಮಾಡತಕ್ಕದ್ದು.

ಯಾವ ಅರಸನು ತನ್ನ ಅರಸುಕೆಯಲ್ಲಿ ತಾನು ಮಾಡತಕ್ಕ ಕಾರ್ಯಗಳಲ್ಲಿಯೂ ಅವನಿಗೆ ನಾಶ ಉಂಟಾಗದ ಹಾಗೆ ಇರುವದರಲ್ಲಿಯೂ, ಕೋಶಬಲವೆಂಬವುಗಳಲ್ಲಿಯೂ, ಬುದ್ಧಿಸಾಮರ್ಥ್ಯದಿಂದ ಪ್ರಮಾಣ್ಯವನ್ನು ತಿಳಿಯದವನು ರಾಜ್ಯದಲ್ಲಿ ಇರಬಾರದು.

ಈಗ ಹಿಂದೆ ಹೇಳಿದ ಕಾರ್ಯಗಳಲ್ಲಿ ಪ್ರಮಾಣ್ಯವನ್ನು ತಿಳಿದು ಧರ್ಮಾರ್ಥಗಳನ್ನು ತಿಳಿಯುವನವರಲ್ಲಿ ಯುಕ್ತನಾದಂಥವನು ರಾಜ್ಯವನ್ನು ಹೊಂದುವನು.

ರಾಜ್ಯವನ್ನು ಹೊಂದಿದನೆಂದು ಅಯೋಗ್ಯಮಾರ್ಗವನ್ನು ಅನುಸರಿಸಕೂಡದು; ಯಾಕಂದರೆ, ದುರ್ಮಾರ್ಗವನ್ನು ಅನುಸರಿಸಿ ವಿನಯತ್ಯಾಗ ಮಾಡುವದು ಶ್ರೇಷ್ಠವಾದ ವಸ್ತ್ರನಾಶವು ಅರಸನಿಂದ ಆದಹಾಗೆ ಸಂಪತ್ತನ್ನು ನಾಶಮಾಡುವದು.

ಜನ್ಮದಲ್ಲಿ ಅಭ್ಯಾಸಮುಂಟಾದ ಯೋಗ ಶ್ರೇಷ್ಠವಾದ ಭಕ್ತಿಯಿಂದ ಉತ್ಪಾದನೆಮಾಡಲ್ಪಟ್ಟಂಥ ಅವರ ನಿರ್ಮಿತವಾದ ಮಂತ್ರಶಕ್ತಿಯನ್ನು ಗ್ರಹವು ನಂಬುತ್ತಾ ಇರುತ್ತದೆಯೋ ಹೊರತು ಬದಲ್ಲಿದವ ಅನುಗ್ರಹವನ್ನು ನೋಡುವುದಿಲ್ಲ.

ಆರೋಗ್ಯವನ್ನು ಅಪೇಕ್ಷಿಸುವಂಥ ಮನುಷ್ಯನಿಂದ ಯಾವದು ಸೇವಿಸಲ್ಪಡುತ್ತದೆ, ಯಾವನು ಔಷಧವನ್ನು ಹೊಂದುತ್ತಾನೆ, ಯಾವನು ಗ್ರಹ ಪೀಡಿತನಾದವನೋ, ಆ ಮನುಷ್ಯನು ಗ್ರಹವಶನಾಗುತ್ತಾನೆ.

ಯಾವ ಮನುಷ್ಯನು ಪಕ್ಷಿಗಳಿಗೆ ಧಾನ್ಯಗಳನ್ನು ಕೊಡುತ್ತಾನೆಯೋ ಆ ಮನುಷ್ಯನು ಆ ಪಕ್ಷಿಗಳ ರಸವನ್ನು ಹೊಂದ ಹೊಂದುವದರಿಂದ ಆ ಧಾನ್ಯಗಳ ಬೀಜಗಳು ಬೇಗ ಹೋಗುವವು.

ಯಾವ ಮನುಷ್ಯನು ಭೂಮಿಯಲ್ಲಿ ಶ್ರೇಷ್ಠವಾದ ಧಾನ್ಯವನ್ನು ಕೊಡುತ್ತಾನೋ ಆ ಮನುಷ್ಯನು ಆ ಧಾನ್ಯದ ರಸವನ್ನು ಹೊಂದುವನು, ಆ ಧಾನ್ಯದ ಬೀಜಗಳು ಬೆಳೆಯುವವು.

ಭ್ರಮರಗಳು ಪುಷ್ಪಗಳನ್ನು ಪರೀಕ್ಷಿಸುತ್ತ ಹೇಗೆ ಮಕರಂದವನ್ನು ಹೊಂದುತ್ತವೆಯೋ ಹಾಗೆಯೇ ಮನುಷ್ಯನಿಗೆ ಹಿಂಸೆ ಇಲ್ಲದವನಾಗಿ ಅರ್ಥವನ್ನು ಹೊಂದಬೇಕು.

ಗೋಪಾಲಕನು ಗೋವುಗಳ ಕ್ಷೀರವನ್ನು ಕರುಗಳಿಗೆ ಬಿಟ್ಟು ಒಂದೊಂದೆ ಪುಷ್ಟವನ್ನೇ ಕೊಡುವ ಗೋವನ್ನು ಹೊಂದಿಸುವನೋ ಹಾಗೆಯೇ ಇರತಕ್ಕದ್ದೇ ಹೊರತು, ಇನ್ನು ಗೋವುಗಳು ಅಪೇಕ್ಷಿತನಾದವನ ಹಾಗೆ ವೃಕ್ಷಮೂಲಛೇದನ ಮಾಡಕೂಡದು.

ಈ ಕೆಲಸ ನಾನು ಮಾಡಿದವನಾಗಿದ್ದರೆ ನನಗೆ ಈ ಕೆಲಸ ಆಗದೆ ಹೋಗುವದು. ಈ ಕೆಲಸ ನಾನು ಮಾಡದೆ ಹೋದೆನಾದರೆ

ಈ ಕೆಲಸ ನನಗೆ ಆಗುವದೆಂದು ಹೇಳಿ, ಆ ಕೆಲಸಗಳನ್ನು ಆಲೋಚಿಸಿ ಯಾವ ಕೆಲಸಮಾಡಿದರೆ ಯಾವ ಕಾರ್ಯ ತನಗೆ ಆಗದೆ ಹೋಗುವದೋ ಅದನ್ನು ತ್ಯಾಗಮಾಡಬೇಕು. ಯಾವ ಕೆಲಸದಿಂದ ಯಾವ ಕೆಲಸವಾಗುವದೋ ಅದನ್ನು ಅಂಗೀಕರಿಸಬೇಕು.

ಆರಂಭ ಮಾಡದೆಲೇ ಕೆಲವು ಕಾರ್ಯಗಳು ಕೂಡಿಬರುವದುಂಟು. ಆ ಕಾರ್ಯಗಳ ಸಾಂಗಸಾಧನವಾಗಿ ಮಾಡಲ್ಪಟ್ಟಂಥ ಪುರುಷ ಪ್ರಯತ್ನವು ಸಾರ್ಥಕವಾದದ್ದೇ. ಷಂಡನಾದ ಪತಿಯನ್ನು ಸ್ತ್ರೀಯರು ಹ್ಯಾಗೆ ಇಚ್ಛೈಸರೋ ಹಾಗೆ ಅನರ್ಥ ಸಾಧಕಗಳಾದ ಕಾರ್ಯಗಳಲ್ಲಿ ನಿರತನಾದ ಅರ್ಥಸಾಧಕಗಳಾದ ಕಾರ್ಯಗಳಲ್ಲಿ ಪರಾಙ್ಮುಖನಾದ ಅರಸನನ್ನು ಪ್ರಜೆಗಳು ತಮಗೆ ಅಧಿಪತಿಯಾಗಿ ಇಚ್ಛಿಸರು.

ಯಾವನ ಅನುಗ್ರಹವೂ ಕ್ರೋಧವೂ ನಿರರ್ಥಕವಾಗಿರುವದೋ ಅವನನ್ನು ಸ್ತ್ರೀಯರು ಷಂಡನನ್ನು ಅಪೇಕ್ಷಿಸದ ಹಾಗೆ ಪ್ರಜೆಗಳು ಅಪೇಕ್ಷಿಸರು.

ಪ್ರಜ್ಞಾಶಾಲಿಯಾದ ಮನುಷ್ಯನು ಅಲ್ಪ ಪ್ರಯತ್ನದಿಂದ ಸಾಧ್ಯಗಳಾದ ಮಹಾಫಲಪ್ರದಗಳಾದ ಕೆಲವು ಕಾರ್ಯಗಳನ್ನು ಮಾಡುವದಕ್ಕೆ ಜಾಗ್ರತೆಮಾಡುತ್ತಾನೆ ಹೊತ್ತು ಸಾವಕಾಶಮಾಡುವದಿಲ್ಲ.

ನೋಡುವ ಮಾತ್ರದಿಂದಲೇ ಸಮಸ್ತ ದುಷ್ಕಾರ್ಯ ಸುಕಾರ್ಯಗಳನ್ನು ತಿಳಿದವನಾದರೂ ಭೂದೃಷ್ಟಿವೃಕ್ಷದಹಾಗೆ ಜನರಿಗೆ ತೋರಲ್ಪಡುತ್ತಾ ಸುಮ್ಮನೆ ಕೂತುಕೊಂಡಿರುವ ಅರಸನನ್ನು ಕುರಿತು ಪ್ರಜೆಗಳು ಅನುರಕ್ತರಾಗುವರು.

ವೃಕ್ಷವು ಪುಷ್ಪಿಸಿದ್ದಾದರೂ ಫಲವಿಲ್ಲದ್ದಾಗಿ ತದನಂತರದಲ್ಲಿ ಫಲಿಸಿದರೂ ಹತ್ತಕೂಡದಾಗಿ ಪಕ್ವಫಲಗಳುಳ್ಳದ್ದಾಗಿ ತೋರಲ್ಪಡುವದಾದರೂ ಅಪಕ್ವ ಫಲಗಳುಳ್ಳಂಥಾದ್ದಾದರ ಒಂದಾನೊಂದು ಕಾಲದಲ್ಲಾದರೂ ನಾಶವನ್ನು ಹೊಂದುವದು. ಅರಸು ಹಾಗೆ ಇರಬೇಕು.

ಬ್ಯಾಗಾರನ ಹೆಶೆಯಿಂದ ಮೃಗಗಳ ಹಾಗೆಯೇ ಯಾವ ಅರಸಿನಿಂದ ಪ್ರಜೆಗಳು ಭಯ ಪಡುವರೋ ಆ ಅರಸು ಚತುಃಸಮುದ್ರಾಂತ ಮಧ್ಯದಲ್ಲಿರುವ ಭೂಮಿಯನ್ನು ಹೊಂದಿದವನಾದರೂ ನಾಶವನ್ನು ಹೊಂದುವನು.

ಯಾವ ಪುರುಷನು ಕಣ್ಣು, ಮನಸ್ಸು, ವಾಕ್ಕು, ಇವುಗಳಿಂದ ಪ್ರಜೆಗಳನ್ನು ಅನುಗ್ರಹಿಸುವನೋ ಅವನಲ್ಲಿ ಪ್ರಜೆಗಳು ಅನುರಕ್ತರಾದಂಥವರಾಗುವರು.

ಕುಲಕ್ರಮವಾಗಿ ಬಂದ ರಾಜ್ಯವನ್ನು ತನ್ನ ಪರಾಕ್ರಮದಿಂದ ಹೊಂದಿದಂಥಾ ಅರಸು ದುರ್ಮಾರ್ಗನಾದ ಹಾಗಾದರೆ ಮೇಘವನ್ನು ಹೊಂದಿದ ವಾಯುವು ಮೇಘಗಳನ್ನು ಹ್ಯಾಗೆ ಚಲನಮಾಡುತ್ತದೋ ಹಾಗೆಯೇ ಪ್ರಜೆಗಳನ್ನು ಭ್ರಮಣಮಾಡುವದು.

ತನ್ನ ಪೂರ್ವಿಕರಾದ ಸತ್ಪುರುಷರಿಂದ ಮಾಡಲ್ಪಟ್ಟಂಥ ಧರ್ಮವನ್ನು ಮಾಡುತ್ತಿರುವ ಅರಸಿನ ಭೂಮಿಯು ದ್ರವ್ಯಧಾನ್ಯಗಳಿಂದ ಸಂಪೂರ್ಣವಾದದ್ದಾಗಿ ಅರಸಿಗೆ ಸಂಪತ್ತನ್ನು ವೃದ್ಧಿಮಾಡುವದಾಗಿ ಪ್ರವರ್ಧಮಾನವಾಗುವದು.

ಧರ್ಮವನ್ನು ತ್ಯಾಗಮಾಡಿ ಅಧರ್ಮಪ್ರವಿಷ್ಟನಾದ ಅರಸಿನ ಭೂಮಿಯನ್ನು ಯಜ್ಞೇಶ್ವರನಲ್ಲಿ ಚರ್ಮವು ಬಿಂಕೊಂಡ ಹಾಗೆ ದಸ್ಯುಗಳಿಂದ ವಿಕಸಿತನಾಗಿ ಫಲಪ್ರದಾಯಕವಾದದ್ದಾಗಿ ಆಗದೆ ಹೋಗುವದು.

ಶತ್ರುಗಳ ರಾಷ್ಟ್ರಸಾಧನದಲ್ಲಿ ಮಾಡಲ್ಪಡುವ ಪ್ರಯತ್ನವೇ ಸ್ವರಾಷ್ಟ್ರಪರಿಪಾಲನಾರ್ಥವಾಗಿಯೂ ಮಾಡತಕ್ಕದ್ದು.

ಧರ್ಮದಿಂದಲೇ ರಾಜ್ಯವನ್ನು ಹೊಂದಿ ಧರ್ಮದಿಂದಲೇ ಪರಿಪಾಲನೆಮಾಡಿದ ಹಾಗಾದರೆ ಧರ್ಮಮೂಲಕವಾದ ಸಂಪತ್ತನ್ನು ಹೊಂದಿ

ದವನಾದ್ದರಿಂದ ರಾಜ್ಯಚ್ಯುತನಾಗದೆ ನಾಶವನ್ನು ಹೊಂದಬಿರುವನು.

ಉನ್ಮತ್ತ ಪ್ರಲಾಪವನ್ನು ಮಾಡುವವನಿಂದಲೂ ಅಮಿತಭಾಷಿಯಾದ ಬಾಲನಿಂದಲೂ ಪಾಷಾಣಗಳಿಂದ ಸುವರ್ಣವನ್ನು ಹೊಂದುವ ಹಾಗೆ ಸಾರಭೂತಗಳಾದ ವಾಕ್ಯಗಳನ್ನು ಗ್ರಹಿಸತಕ್ಕದ್ದು.

ಶಿಲಾವೃತ್ತಿಯಿಂದ ಜೀವನ ಮಾಡುವ ಪುರುಷನು ಉಗುರುಗಳಿಂದ ಕಾಳುಗಳನ್ನು ಆರಿಸಿದ ಹಾಗೆ ಆಯಾಯ ದೇಶಗಳಲ್ಲಿರುವಂಥಾ ಜನರಿಂದ ಹೇಳಲ್ಪಡುವಂಥ ಶುಭಕರಗಳಾದ ಚನ್ನಾಗಿ ಹೇಳಲ್ಪಡುತ್ತಿರುವ ಮಾತುಗಳನ್ನು ಹುಡುಕಿ ಗ್ರಹಿಸುತ್ತಾ ಧೀರನಾಗಿರತಕ್ಕದ್ದು. ಗೋವುಗಳು ದೃಷ್ಟಿಗೋಚರವಾಗದ ವಸ್ತುಗಳನ್ನು ವಾಸನೆಯಿಂದ ನೋಡುತ್ತವೆ. ಬ್ರಾಹ್ಮಣರು ವೇದಗಳಿಂದ ದೃಷ್ಟಿಗೋಚರವಾಗದ ವಸ್ತುವಿನನ್ನು ನೋಡುತ್ತಾರೆ. ಅರಸರು ಚಾರರ ಮುಖಾಂತರವಾಗಿ ದೂರಸ್ಥವಾದ ವೃತ್ತಾಂತಗಳನ್ನು ನೋಡುತ್ತಾರೆ. ಸಾಧಾರಣ ಜನರು ಕಣ್ಣುಗಳಿಂದ ನೋಡುತ್ತಾರೆ.

ಯಾವ ಗೋವು ದುಃಖದಿಂದ ಹಿಂಡುವದಕ್ಕೆ ಯೋಗ್ಯವಾದದ್ದೋ ಅದು ಅಧಿಕವಾದ ಕ್ಲೇಶವನ್ನು ಹೊಂದುತ್ತದೆ. ಸುಖದಿಂದ ಹಿಂಡುವದಕ್ಕೆ ಯೋಗ್ಯವಾದ ಅದೇ ಗೋವಿಗೆ ಜನರು ಕ್ಲೇಶ ಕೊಡುವದಿಲ್ಲ.

ಯಾವದು ತಪ್ಪಿಸಲ್ಪಡದೇ ನಂಬ್ರಭಾವವನ್ನು ಹೊಂದುವದೋ ಅದು ತಪ್ಪಿಸಲ್ಪಡುವದಿಲ್ಲ. ಯಾವ ದಂಡು ಸ್ವತಂತ್ರವಾಗಿ ನಮ್ರವಾಗದೋ ಅದು ಬೊಗ್ಗನಡಿಯುವದಿಲ್ಲ.

ಪಶುಗಗಳಿಗೆ ಪರ್ಜನ್ಯನೇ ಸಾಧನಾಗಿವುಳ್ಳವಗಳು. ಅರಸಂಗೆ ಮಂತ್ರಿಗಳೇ ಬಂಧುಗಳು. ಸ್ತ್ರೀಯರಿಗೆ ಪತಿಗಳೇ ಬಂಧುಗಳು. ಬ್ರಾಹ್ಮಣಂಗೆ ವೇದಗಳೇ ಬಂಧುಗಳು.

ಸತ್ಯದಿಂದ ಧರ್ಮವೂ, ಆವರ್ತಿಯಿಂದ ವಿದ್ಯೆಯೂ, ಬಾಹ್ಯಶುದ್ಧಿ ತನ್ನಿಂದ ಸ್ವರೂಪವೂ, ಸದ್ವೃತ್ತಿಯಿಂದ ಕುಲವೂ, ಅಳವಿಕೆಯಿಂದ ಧಾನ್ಯವೂ, ಪ್ರತಿದಿನವೂ ಸಂಚಾರವಮಾಡುವದರಿಂದ ಅಶ್ವಗಳೂ, ನಿರಂತರ ದರ್ಶನದಿಂದ ಗೋವುಗಳೂ, ಕುತ್ಸಿತವಾದ ವಸ್ತ್ರಗಳಿಂದ ಸ್ತ್ರೀಯರೂ, ರಕ್ಷಣೆ ಹೊಂದತಕ್ಕದ್ದು.

ಸದ್ವೃತ್ತಿಯಿಂದ ರಹಿತನಾದ ಪುರುಷನಿಗೆ ಕುಲ ಧರ್ಮವು ಪ್ರಾಮಾಣ್ಯವಾದದ್ದಲ್ಲವೆಂದು ನನ್ನ ಬುದ್ಧಿಗೆ ತೋರುತ್ತಲಿದೆ. ಇದ ಕಾರಣ ಅಂತ್ಯವರ್ಣದಲ್ಲಿ ಹುಟ್ಟಿದವನಾದರೂ ಸ್ವಚಾರಿತ್ರನು ಶ್ರೇಷ್ಠನಾಗಿರುತ್ತದೆ.

ಪರದ್ರವ್ಯದಲ್ಲೂ, ಪರರಪರಾಕ್ರಮದಲ್ಲೂ, ಪರಕುಲದಲ್ಲೂ, ಪರವಂಶದಲ್ಲೂ, ಪರ ಸೌಖ್ಯ ಸೌಭಾಗ್ಯ ಸತ್ಕಾರ್ಯಗಳಲ್ಲೂ, ಯಾವನು ಈರ್ಷ್ಯವುಳ್ಳವನೋ ಅವನ ಮನೋವ್ಯಾಧಿ ಅಡಗಿಹೋಗದು.

ಅಕಾಲದಲ್ಲಿ ಕಾರ್ಯಗಳನ್ನು ಮಾಡುವಿಕೆಯಿಂದಲೂ, ಮಾಡದೆ ಹೋಗುವದರಿಂದಲೂ ಮಿತ್ರಭೇದದಿಂದಲೂ, ಭಯಪಡುವವನಾಗಬೇಕು.

ಯಾವ ವಿಷಯಾಸಕ್ತಿಯಿಂದ ಮದಯುಕ್ತನಾಗುವನೋ ಆ ವಿಷಯಗಳನ್ನು ಆಶ್ರಯಿಸಬಾರದು.

ವಿದ್ಯಾಮದ, ಧನಮದ, ಜನಸಹಾಯಮದ, ಈ ಮೂರು ಗರ್ವಿಷ್ಠರಿಗೆ ಮದಕಾರಕಗಳು, ಈ ಮೂರೆ ಸತ್ಪುರುಷರಿಗೆ ಇಂದ್ರಿಯನಿಗ್ರಹಕರಗಳಾದ ಸಾಧನಗಳು.

ಸತ್ಪುರುಷರಿಂದ ಸ್ವಲ್ಪ ಕಾರ್ಯ ವಿಷಯವಾಗಿ ಒಂದಾನೊಂದು ಕಾಲದಲ್ಲಿ ಪೂಜೆಮಾಡಲ್ಪಡುವ ದುಷ್ಟರು ಅಸತ್ಪುರುಷರು. ಆ ಸ್ವಲ್ಪ ಕಾರ್ಯವನ್ನು ಮಾಡಿಕೊಡದೆ ಹೋಗುವದರಿಂದ ತಾವು

ದುಷ್ಟರೆಂದು ಪ್ರಸಿದ್ಧಿಯನ್ನು ಹೊಂದಿದವರಾದರೂ ತಮ್ಮಲ್ಲಿ ತಾವು ಸಜ್ಜನರೆಂದು ತಿಳುಕೊಳ್ಳುವರು. ಸತ್ಪುರುಷರಾದವರಾದರೆ ತಮ್ಮನ್ನು ತಾವು ದುಷ್ಟರಾದೆನಲ್ಲಾ ಎಂದು ಅತಿಶಯ ಸಂಪಾದನಾರ್ಥವಾಗಿ ಯಾವ ಸತ್ಪುರುಷರ ಕಾರ್ಯಗಳು ಭಂಗವಾಗಿರುವವೋ ಅವರನ್ನು ಬಹುಮಾನ ಮಾಡುವರು.

ಆತ್ಮವೇತ್ತರಾದವರು ಸತ್ಪುರುಷರೇ ಗತಿಯಾಗುಳ್ಳ ಸತ್ಪುರುಷರು. ದುಷ್ಟರು ಗತಿಯಾಗುಳ್ಳವರಲ್ಲ.

ವಸ್ತ್ರವುಳ್ಳವನಿಂದ ಸಭೆಯೊಂದೇ ಜಯಿಸಲ್ಪಡುವದು. ಗೋವುಗಳುಳ್ಳವನಿಂದ ಸ್ವಾದು ಪದಾರ್ಥ ಭೋಜನದಾಶೆ ಒಂದೇ ಜಯಿಸಲ್ಪಡುವದು. ವಾಹನವುಳ್ಳವನಿಂದ ಮಾರ್ಗ ಒಂದೇ ಜಯಿಸಲ್ಪಡುವದು. ಸತ್ಸ್ವಭಾವವುಳ್ಳವನಿಂದ ಸರ್ವವೂ ಜಯಿಸಲ್ಪಡುವದು.

ಪುರುಷನಲ್ಲಿ ಶೀಲವೇ ಮುಖ್ಯವಾದದ್ದು. ಆ ಶೀಲವು ಯಾವನ ವಿಷಯಕವಾಗಿ ನಾಶವಾಗುವದೋ ಅವನ ಬದುಕುವಿಕೆಯಿಂದಲೂ, ಅವನ ಧನದಿಂದಲೂ, ಅವನ ಬಂಧುಗಳಿಂದಲೂ, ಪ್ರಯೋಜನವಿಲ್ಲ.

ಎಲೈ, ಭರತಕುಲ ಶ್ರೇಷ್ಠನೇ ಉತ್ತಮರ ಭೋಜನಕ್ಕೆ ಮಾಂಸವೇ ಮುಖ್ಯವಾದದ್ದು. ಮಧ್ಯಮರ ಭೋಜನಕ್ಕೆ ಗೋಕ್ಷೀರಭಕ್ಷ್ಯಗಳೇ ಮುಖ್ಯವಾದದ್ದು. ದರಿದ್ರರ ಭೋಜನಕ್ಕೆ ತೈಲವೇ ಮುಖ್ಯವಾದದ್ದು.

ಆದ ಕಾರಣ ಉತ್ತಮ ಭೋಜನವನ್ನು ಹೊಂದಿ, ದರಿದ್ರನಾಗುವದು ಸತ್ಸ್ವಭಾವವುಳ್ಳವನಾಗುವದರಿಂದ ಶ್ರೇಯಸ್ಕರವಾದದ್ದರ ಕಾರಣ ಶೀಲವಂತನಾಗು.

ದರಿದ್ರರು ನಿರಂತರದಲ್ಲೂ ಷಡ್ರಸೋಪೇತವಾದ ಅನ್ನವನ್ನೇ ಭೋಜನಮಾಡುತ್ತಾರೆ ಯಾಕೆಂದರೆ ಹಸಿವೆಯೇ ಸ್ವಾದುತ್ವವನ್ನುಂಟು ಮಾಡುವದು. ಆ ಹಸಿವೆ ಆಢ್ಯರಿಂದ ದುಃಖದಿಂದಾದರೂ ಹೊಂದ ಕೂಡದು.

ಐಶ್ವರ್ಯವಂತರಿಗೆ ಒಳ್ಳೆ ಭೋಜನಮಾಡುವ ಶಕ್ತಿಯಿರುವುದಿಲ್ಲ. ಎಷ್ಟು ಬಡವರು ಅವರಿಗೆ ಕಾಷ್ಠಭೂತಗಳಾದ ಭೋಜನದ್ರವ್ಯಗಳೂ ಜೀರ್ಣವಪ್ಪುದನ್ನು ಹೊಂದುವವು.

ನೀಚರಿಗೆ ಗ್ರಾಸವಿಲ್ಲದೆ ಹೋಗುವದರಿಂದ ಮರಣ ಭಯವೇ ಭಯವು. ಶ್ರೇಷ್ಠ ಕ್ಷತ್ರಿಯರಿಗೆ ಸಮುದ್ರ ಯಾನ ಯುದ್ಧಪ್ರಯುಕ್ತವಾದ ಮರಣದಿಂದಲೇ ಭಯವು. ಬ್ರಾಹ್ಮಣರಿಗೆ ಸನ್ಮಾನಾಭಾವರೂಪವಾದ ಮರಣದಿಂದಲೇ ಭಯವು.

ಮದಾದಿಗಳಿಂದಾಗುವ ಪಾಪಗಳಿಗಿಂತಲು ಐಶ್ವರ್ಯಮದದಿಂದಾಗುವ ಪಾಪ ಕೇವಲ ನಿಂದಾರ್ಹವಾದದ್ದು. ಹ್ಯಾಗಂದರೆ ಐಶ್ವರ್ಯಮದದಿಂದ ಮತ್ತನಾಗಿ ಅಂಥ ಮನುಷ್ಯನು ಬಿದ್ದು ಅವನು ತಿಳಿವಿಕೆಯುಳ್ಳವನಾಗುವದಿಲ್ಲ.

ವಿಷಯಗಳಲ್ಲಿ ಸಂಚರಿಸುವವುಗಳಾಗಿ ನಿಗ್ರಹಿಸದಂಥಾ ಇಂದ್ರಿಯಗಳಿಂದ ಈ ಭೂಲೋಕದಲ್ಲಿರುವ ಜನ, ಸೂರ್ಯಾದಿ ಗ್ರಹಗಳಿಂದ ಅಶ್ವಿನ್ಯಾದಿ ನಕ್ಷತ್ರಗಳ ಹಾಗೆಯೇ ಪ್ರಪೀಡಿಸಲ್ಪಡುವದು.

ತನ್ನ ಶರೀರದಲ್ಲಿ ಹುಟ್ಟಿದಂಥಾ ಶರೀರನಾಶಕವಾದಂಥಾ ಇಂದ್ರಿಯ ಪಂಚಕದಿಂದ ಯಾವ ಪುರುಷನು ಜಯಿಸಲ್ಪಡುವನೋ ಆ ಪುರುಷನಿಗೆ ಶುಕ್ಲಪಕ್ಷದಲ್ಲಿ ಚಂದ್ರನು ವೃದ್ಧಿಹೊಂದುವ ಹಾಗೆ ಆ ಸಂಪತ್ತುಗಳು ವೃದ್ಧಿಹೊಂದುವವು.

ಯಾವ ಪುರುಷನು ಮನಸ್ಸನ್ನೂ ಪುತ್ರ ಮಿತ್ರ ಕಳತ್ರಾದಿಗಳನ್ನೂ ಸ್ವಾಧೀನ ಮಾಡಿಕೊಳ್ಳದೆ ಸ್ವಾಧೀನ ಮಾಡಿಕೊಳ್ಳಲ್ಪಡದ ಮಂತ್ರಿಗಳುಳ್ಳವನಾಗಿ ಶತ್ರು ಜಯಾಪೇಕ್ಷೆಯುಳ್ಳವನಾಗುವನೋ ಆ ಪುರುಷನು ಸ್ವಾಧೀನವಿಲ್ಲದವನಾಗಿ ಸರ್ವಾಂಶಗಳಲ್ಲೂ ನಾಶವನ್ನು ಹೊಂದುವನು.

ಆದಿಯಲ್ಲಿ ತನ್ನ ಮನಸ್ಸನ್ನು ದ್ವೇಷಿಯೆಂದು ತಿಳಿದವನಾಗಿ ಯಾವ ಪುರುಷನು ಜಯಿಸುವನೋ ಆ ಪುರುಷನು ಅನಂತರದಲ್ಲಿ ಪುತ್ರ ಮಿತ್ರ ಕಳತ್ರಾದಿಗಳನ್ನೂ ಮಂತ್ರಿಗಳನ್ನೂ ಶತ್ರುಗಳನ್ನೂ ನಿರರ್ಥಕವಾದ ಹಾಗೆ ಸ್ವಾಧೀನಮಾಡಿಕೊಳ್ಳುವದಕ್ಕೋಸ್ಕರ ಇಚ್ಛಿಸುವವನಾಗುವನಲ್ಲ.

ಸ್ವಾಧೀನನಾದ ಪಂಚೇಂದ್ರಿಯಗಳುಳ್ಳವನಾಗಿ ಮನೋನಿಗ್ರಹವುಳ್ಳವನಾಗಿ ಅಪರಾಧಿಗಳಲ್ಲಿ ಉಚಿತವಾದ ದಂಡನೆಯನ್ನು ಮಾಡುತ್ತಾ ಪರೀಕ್ಷೆಮಾಡುತ್ತಾ ಕಾರ್ಯಗಳನ್ನು ಮಾಡುತ್ತಾಯಿರುವಂಥ ಧೀರ ಪುರುಷನನ್ನು ಕೇವಲ ಲಕ್ಷ್ಮೀ ಸೇವಿಸುವಳು.

ಎಲೈ! ಅರಸನೇ ಪುರುಷನಿಗೆ ಶರೀರವೇ ರಥವು ಮನಸ್ಸೇ ಸಾರಥಿ ಇಂದ್ರಿಯಗಳೇ ಅಶ್ವಗಳು ಈ ಇಂದ್ರಿಯಗಳೆಂಬ ಶಿಕ್ಷಿತಾಶ್ವಗಳಾದ ಅಶ್ವಗಳಿಂದ ನಡೆಸಲ್ಪಡುವವನಾದ ಧೀರನು ಸುಖವಾಗಿ ನಡೆಯುವವನು

ಈ ಇಂದ್ರಿಯಗಳೇ ನಿಗ್ರಹಿಸದ ಪಳಗದವುಗಳಾದ ಹಾಗಾದರೆ ಶಿಕ್ಷಿತಗಳಾಗದೆ ಪರವಶಗಳಾದ ಅಶ್ವಗಳು ಮಾರ್ಗದಲ್ಲಿ ಕುತ್ಸಿತನಾದ ಸಾರಥಿಯೋಪಾದಿಯಲ್ಲಿ ಪುರುಷನನ್ನು ವಿಪತ್ತುಪೊಂದಿಸುವದಕ್ಕೋಸ್ಕರ ಸಾಕು.

ನಿಗ್ರಹಿಸಲ್ಪಡದಂಥಾ ಇಂದ್ರಿಯಗಳುಳ್ಳಂಥಾ ಯುಕ್ತಾಯುಕ್ತ ವಿವೇಕರಹಿತನು ತನ್ನ ಪ್ರಯೋಜನವನ್ನು ಪ್ರಯೋಜನಾಭಾವವನ್ನು ವ್ಯತ್ಯಾಸವಾದ ಹಾಗೆ ತಿಳಿಯುವವನು ದುಃಖದಹಾಗೆ ತಿಳಿಯದೇ ಸುಖದಹಾಗೆ ತಿಳಿಯುತ್ತಾನೆ.

ಯಾವ ಪುರುಷನು ಧರ್ಮಾರ್ಥಗಳನ್ನು ತ್ಯಾಗಮಾಡಿ ಇಂದ್ರಿಯ ಸ್ವಾಧೀನನಾಗುವನೋ ಆ ಪುರುಷನು ಸಂಪತ್ತು, ಪ್ರಾಣ, ಧನ ಸ್ತ್ರೀಯರು ಇವರುಗಳಿಂದ ಜಾಗ್ರತೆಯಾಗಿ ರಹಿತನಾಗುತ್ತಾನೆ.

ಸಂಕಲ್ಪಾತ್ಮಕವಾದ ಮನಸ್ಸಿನ ಬುದ್ಧಿಗೆ ಮೂಲವಾದಂಥಾ ಕಾಮುಕ ಇಂದ್ರಿಯಗಳ ನಿಗ್ರಹದಿಂದಲೂ ಬುದ್ಧಿಯಿಂದಲೂ ಪರಮಾತ್ಮನನ್ನು ತಿಳಿಯಬೇಕು. ತನ್ನ ಉದ್ಧಾರಮಾಡುವದಕ್ಕೂ ಬದ್ಧನನ್ನು ಮಾಡುವದಕ್ಕೂ ಬುದ್ಧಿಯೇ ಬಂಧುವೂ ಶತ್ರುವು.

ಯಾವ ಪುರುಷನು ದ್ರವ್ಯಗಳಿಗೆ ಅಧಿಪತಿಯಾದವನಾದರೂ ಇಂದ್ರಿಯ ಸ್ವಾಧೀನವಿಲ್ಲದವನೋ ಆ ಪುರುಷನು ಇಂದ್ರಿಯ ಸ್ವಾಧೀನವಿಲ್ಲದವನಾದದ್ದರಿಂದ ಐಶ್ವರ್ಯದಿಂದ ಭ್ರಷ್ಟನಾಗುವನು.

ಯಾವಬುದ್ಧಿಯಿಂದ ಯಾವನವಿಷಯವಾಗಿ ಆತ್ಮ ತಿಳಿಯಲ್ಪಡುವದೋ ಅವನಿಗೆ ಆ ಬುದ್ಧಿಯೇ ಬಂಧುವು. ಯಾವ ಬುದ್ಧಿಯಿಂದ ಆತ್ಮತಿಳಿಯಲ್ಪಡುವದಿಲ್ಲವೊ ಅ ಬುದ್ಧಿಯೇ ಅವನಿಗೆ ಶತ್ರುವು.

ಸೂಕ್ಷ್ಮ ಛಿದ್ರಗಳುಳ್ಳ ಬಲೆಯಿಂದ ಮುಚ್ಚಲ್ಪಟ್ಟ ಮಹತ್ತರಗಳಾದ ಎರಡು ಮೀನಗಳು ಪರಸ್ಪರ ದ್ವೇಷವುಳ್ಳವಗಳಾದರೂ ಬಲೆಯನ್ನು ಛೇದಿಸುವ ನಿಮಿತ್ತ ಮಿತ್ರತ್ವವನ್ನು ಹೊಂದಿ ಬಲೆಯನ್ನು ಛೇದಿಸಿದ ಹಾಗೆ ಕಾಮಕ್ರೋಧಗಳೆರಡೂ ಪ್ರಜ್ಞಾಂತರ್ಗತಗಳಾಗಿ ಪ್ರಜ್ಞಾಛೇದನವನ್ನು ಮಾಡುವದು. ಆದಕಾರಣ ಕಾಮಕ್ರೋಧರಹಿತವಾದ ಬುದ್ಧಿಯೇ ತನಗೆ ಮುಖ್ಯ ಬಂಧುವಾಗುತ್ತದೆ.

ಈ ಕಾಲದಲ್ಲಿ ಧರ್ಮಾರ್ಥಗಳನ್ನು ತಿಳಿದು ಅರಿಷಡ್ವರ್ಗ ಜಯವೆಂಬುವ ಸಾಮಗ್ರಿವುಳ್ಳವನು ಮೋಕ್ಷವನ್ನು ಹೊಂದುತ್ತಿದ್ದಾನೆ.

ಮನೋವಿಕಾರಭೂತಗಳಾದ ತನ್ನಲ್ಲಿರುವ ಶ್ರೋತ್ರಾದಿಸಂಜ್ಞೇಂದ್ರಿಯಗಳನ್ನು ಜಯಿಸದೇ ಶತ್ರುಗಳನ್ನು ಯಾವನು ಜಯಿಸುವದಕ್ಕೆ ಇಚ್ಛೆವುಳ್ಳವನೋ ಅವನನ್ನು ಶತ್ರುಗಳು ತಿರಸ್ಕಾರಮಾಡುವರು.

ಇಂದ್ರಿಯ ನಿಗ್ರಹವಿಲ್ಲದವರಾಗಿ ಸೀತಾ ಪಹರಣರೂಪ ದುಷ್ಕರ್ಮಗಳಿಂದ ಕೊಲ್ಲಲ್ಪಟ್ಟ ರಾಜ್ಯ ಭ್ರಷ್ಟರಾದ ದುಷ್ಟಮನಸ್ಸುಗಳುಳ್ಳ ರಾವಣಾಸುರ ಮೊದಲಾದ ಅರಸುಗಳು ನೋಡಲ್ಪಡುತ್ತಿದ್ದಾರಲ್ಲಾ.

ಪಾಪಿಷ್ಠರನ್ನು ತ್ಯಾಗಮಾಡದೆ ಪುಣ್ಯವಂತರಸಂಗಡ ಮಿತ್ರತ್ವ ದಿಂದ ಸಮಾನವಾದ ದಂಡನೆಗೊಳಿಸುವದು ಹ್ಯಾಗಂದರೆ ಶುಷ್ಕದ ಸಂಗಡ ಅರಿದ್ರಮಿಶ್ರವಾಗಿ ದಹಿಸಲ್ಪಡುವದು. ಆದಕಾರಣ ಪಾಪಿ ಷ್ಠರ ಸಂಗಡ ಸಂಧಿಯನ್ನು ಮಾಡಬಾರದು.

ರೂಪ ರಸ ಗಂಧ ಸ್ಪರ್ಶ ಶಬ್ದಗಳೆಂಬ ಐದು ವಿಷಯುಗಳನ್ನನು ಭವಿಸುವ ನಿಮಿತ್ತವಾಗಿ ಉದ್ಯುಕ್ತಗಳಾದ ತನ್ನ ಪಂಚೇಂದ್ರಿಯುಗಳನ್ನು ಯವನು ಮೋಹದಿಂದ ನಿಗ್ರಹಿಸದೆ ಹೋಗುವನೋ ಅವನನ್ನು ಆಪ ತ್ತು ಗ್ರಾಸಮಾಡುವದು.

ಅಸೂಯೆ ಇಲ್ಲದೆ ಹೋಗುವದು ರುಜು ಮಾರ್ಗ ಶುಚಿತ್ವ ಸಂತೋಷಪ್ರಿಯ ವಕ್ತೃತ್ವ ಮನೋತಾಳ್ಮೆ ಸತ್ಯ ಅಚಾಂಚಲ್ಯ ಇವು ದುಷ್ಟರಿಗೆ ಉಂಟಾಗುವದಿಲ್ಲ.

ಎಲೈ! ಭರತವಂಶಸ್ಥನೇ ಆತ್ಮವಿಷಯುಕಜ್ಞಾನವು ಪರಸಂತೋಷ ಸಹನವು ಇಂದ್ರಿಯ ನಿಗ್ರಹವು ಧರ್ಮನಿರತತ್ವಸ್ವಭಾವವು ಗೋಪ್ಯ ವಾದ ವಾಕ್ಯಗಳುಳ್ಳವನಾಗುವದು ದಾನವು ನೀಚರಲ್ಲಿಲ್ಲ.

ಪಂಡಿತನಾಗುವನು ಆಕ್ರೋಶ ತಿರಸ್ಕಾರ ವಾಕ್ಯಗಳನ್ನು ಹೇ ಳುವ ಆ ಅಬುದ್ಧನು ಪಾಪವನ್ನು ಹೊಂದುವನು ಆ ವಾಕ್ಯಗಳನ್ನು ಕ್ಷಮಿಸದ ಪಂಡಿತನು ಆ ಪಾಪದಿಂದ ಬಿಡಲ್ಪಡುವನು.

ದುಷ್ಟರಿಗೆ ಹಿಂಸೆಯೂ ಅರಸುಗಳಿಗೆ ದಂಡವಿಧಾನವೂ ಸ್ತ್ರೀಯ ರಿಗೆ ಗುರುಜನ ಶುಶ್ರೂಷೆಯೂ ಗುಣವಂತರಿಗೆ ಕ್ಷಮೆಯೂ ಬಲಸಾ ಧಕವಾದವುಗಳು.

ಎಲೈ! ಅರಸೇ ವಾಂಗ್ನೇಮವು ಕೇವಲ ಮಾಡುವದಕ್ಕೆ ಅಶಕ್ಯವಾ ದದ್ದೆಂದು ಸಂಮತವಾದದ್ದು ಆ ವಾಂಗ್ನೇಮವು ಅರ್ಥಯುಕ್ತವಾದ ರೂ ವಿಚಿತ್ರಾರ್ಥವಾದದ್ದೂ ಸತ್ಯವಾಕ್ಯ ಅಂಥಾದ್ದಲ್ಲ.

ಅನೇಕಾರ್ಥವಾಗುವ ಹಾಗೆ ನೆಟ್ಟಗೆ ಆಡುವಂಥಾ ಮಾತು ಶುಭವನ್ನುಂಟು ಮಾಡುವದು. ಅದೇ ಮಾತೇ ದುಷ್ಟವಾಗುವ ಹಾಗೆ ಹೇಳಲ್ಪಟ್ಟ ಹಾಗಾದರೆ ಅನರ್ಥ ಸಂಪಾದನೆಯಲ್ಲಿ ಉದ್ಯುಕ್ತವಾಗುತ್ತದೆ.

ಬಾಣಗಳಿಂದ ಹೊಡೆಯಲ್ಪಟ್ಟ ಘಾಯವು ಮಾಯುತ್ತದೆ. ಕೊಡ್ಲಿಯಿಂದ ಕಡೆಯಲ್ಪಟ್ಟ ಮರ ಬೆಳೆಯುತ್ತದೆ. ದುಷ್ಟಮಾತುಗಳಿಂದ ಉಂಟಾಗುವ ಘಾಯವು ಮಾಯದು.

ಪುರುಷನ ಶರೀರದಲ್ಲಿ ತಗಲಿದಂಥಾ ಕರ್ಣಿನಾಳಿಕ ನಾರಾಚಗಳೆಂಬ ಬಾಣಗಳು ತೆಗೆಯಲ್ಪಡುತ್ತವೆ. ಮಾತುಗಳೆಂಬ ಶಲ್ಯವು ಯಾವಕಾರಣದಿಂದ ಹೃದಯಲ್ಲಿ ಆಗುವದೋ ಆಕಾರಣದಿಂದ ತೆಗೆಯಲಿಕ್ಕೆ ಶಕ್ಯವಾಗುವದಿಲ್ಲ.

ಯಾವ ಬಾಣಗಳು ಮುಖದಿಂದಾ ಹೊರಟು ಪೂರಾ ಆ ಮರ್ಮಸ್ಥಾನಗಳಲ್ಲಿ ಬೀಳದೆ ಮರ್ಮಸ್ಥಾನಗಳನ್ನು ತಗಲಿ ಹಗಲುರಾತ್ರಿಗಳಲ್ಲಿ ವ್ಯಸನಪಡಮಾಡುವದೋ ಆ ವಾಗ್ಬಾಣಗಳನ್ನು ಪಂಡಿತನಾದವನು ಪರರಿಗೋಸ್ಕರ ಬಿಡಬಾರದು.

ದೇವತೆಗಳು ಯಾರಿಗೋಸ್ಕರ ಪರಾಭವವನ್ನು ಕೊಡಹೋಗುತ್ತಾರೋ ಅವರ ಬುದ್ಧಿಯನ್ನು ಆಕರ್ಷಿಸುವರು. ಆನಂತರದಲ್ಲಿ ಆ ಪುರುಷನು ನಾಶಕಾರಣಗಳನ್ನು ಹೊಂದುವನು.

ಬುದ್ಧಿಯು ಪಾಪಯುಕ್ತವಾದದ್ದಾಗುತ್ತಿರುವಾಗ ನಾಶವು ಸಮೀಪಿಸಿದ ಕಾಲದಲ್ಲಿ ತನಗೆ ಸತ್ಯವಾಗಿ ಕಾಣಲ್ಪಡುತ್ತಿರುವ ತನ್ನಲ್ಲಿರುವ ಅವಶ್ಯಕವು ಮನಸ್ಸಿನಿಂದ ಈಚೆಗೆ ಹೊರಡದು.

ಎತ್ತೈ! ಭರತವಂಶಸ್ಥನೇ ನಿಂನ ಪುತ್ರರಿಗೆ ಪಾಂಡವರೊಡನೆ ವಿರೋಧದಿಂದ ಬುದ್ಧಿಯಿಲ್ಲವೆಂದು ನೀನರಿಯಾ?

ಮೂರು ಲೋಕಗಳಲ್ಲೂ ರಾಜ ಲಕ್ಷಣಗಳಿಂದ ಸಂಪನ್ನನಾದ ಧರ್ಮರಾಯನು ನಿನಗೆ ಶಿಷ್ಯನಾಗಿ ಸಂರಕ್ಷಕನಾಗಲಿ. ಧರ್ಮಾರ್ಥ ತತ್ವಗಳನ್ನು ತಿಳಿದ ಆ ಧರ್ಮರಾಯನು ತೇಜಸ್ಸಿನಿಂದಲೂ ಪ್ರಜ್ಞೆಯಿಂದಲೂ ನಿನ್ನ ಮಕ್ಕಳಿಗಿಂತ ಅಧಿಕವಾದ ಹಾಗೆ ಭಾಗ್ಯದಿಂದ ಮುಖ್ಯವಾಗಿ ತಿಳಿಯತಕ್ಕವನು.

ಧರ್ಮಿಷ್ಟರಲ್ಲಿ ಶ್ರೇಷ್ಟನಾದ ಧರ್ಮರಾಯನು ದಯದಿಂದಲೂ ಘಾತಕ ಕೃತ್ಯಾಭಾವದಿಂದಲೂ ನಿನ್ನಲ್ಲಿ ಗೌರವದಿಂದಲೂ ರಾಜಾಧಿರಾಜನೇ ಅನೇಕಗಳಾದ ಕ್ಲೇಶಗಳನ್ನು ಸಹಿಸುತ್ತಾನೆ.

---

## ಮೂರನೆ ಅಧ್ಯಾಯ.

ಸಕಲತೀರ್ಥಸ್ನಾನವೂ ಸಕಲಭೂತಗಳಲ್ಲಿ ಸಮದೃಷ್ಟಿಯುಂಟಾಗಿ ಋಜುಮಾರ್ಗವಾಗಿರುವದೂ ಇವು ಎರಡು ಸಮವಾಗಿದ್ದಾದರೂ ಋಜುಮಾರ್ಗವೇ ಶ್ರೇಷ್ಠವು.

ಪತಿ ಸಾಮೀಪ್ಯ ರಹಿತಳಾಗಿ ಪ್ರತ್ಯೇಕ ಹಾಸಿಕೆಯಲ್ಲಿರುವ ಸ್ತ್ರೀಯಳಿಗೂ ಅಕ್ಷದ್ಯೂತದಲ್ಲಿ ಪರಾಜಿತನಾದ ಪುರುಷನಿಗೂ ಭಾರದಿಂದ ಪೀಡಿತವಾದ ಎತ್ತಿಗೂ ಉಂಟಾಗುವ ಅವಸ್ಥೆಗೆ ಸಮವಾದ ಅವಸ್ಥೆಯು ಸುಳ್ಳು ಹೇಳುವಂಥವನಿಗಾಗುವದು.

ಪಟ್ಟಣದ ಬಹಿದ್ವಾರದಲ್ಲಿ ರಾಜಭಟರಿಂದ ಅಡಗಿಸಲ್ಪಟ್ಟು ಬಹು ಹಸಿವೇಯುಳ್ಳವನಿಗೆ ಅನೇಕರಾದ ಶತ್ರುಗಳ ದರ್ಶನಕಾಲದಲ್ಲಿ ಉಂಟಾಗುವ ಅವಸ್ಥೆಯಾವದೋ ಆ ಅವಸ್ಥೆಯನ್ನು ಸಾಕ್ಷಿವಿಷಯದಲ್ಲಿ ಸುಳ್ಳುಹೇಳುವವನು ಹೊಂದುವನು.

ಪ್ರಾಣಿಮಾತ್ರವಿಷಯಕವಾಗಿ ಸುಳ್ಳುಹೇಳಿದಹಾಗಾದರೆ ಐದು ಗೋಹತ್ಯದ ದೋಷ ಪ್ರಾಪ್ತಿಯಾಗುವದು. ಅಥವಾ ನಾಲ್ಕುಕಾಲು

ಗಳುಳ್ಳ ಪಶುವಿಷಯುಕವಾಗಿ ಸುಳ್ಳನ್ನು ಹೇಳಿದರೆ ತನ್ನ ತಂದೆಮೊದಲುಗೊಂಡು ತನ್ನವಂಶಸ್ಥರಾದ ಪೂರ್ವಿಕರಾದ ಐದುಜನ ಪುರುಷರನ್ನು ಸಂಹಾರಮಾಡಿದ್ದರಿಂದ ಉಂಟಾಗುವ ನರಕಯಾತನೆಯುನ್ನು ಹೊಂದುವನು. ಗೋವಿಷಯುಕವಾಗಿ ಸುಳ್ಳುನ್ನು ಹೇಳಿದರೂ ಹತ್ತು ಗೋಹತ್ಯಜನ್ಯ ನರಕಯಾತನೆಯುನ್ನು ಹೊಂದುವನು.

ಕುದುರೆಯು ವಿಷಯುಕವಾಗಿ ಸುಳ್ಳುಹೇಳುವವನು ನೂರು ಅಶ್ವಗಳಹತ್ಯಜನ್ಯ ನರಕಯಾತನೆಯುನ್ನು ಹೊಂದುವನು.

ಪುರುಷವಿಯುಕವಾಗಿ ಸುಳ್ಳು ಹೇಳುವವನು ಸಹಶ್ರ ಪುರುಷ ಹತ್ಯ ಜನ್ಯ ನರಕಯಾತನೆಯುನ್ನು ಹೊಂದುವನು.

ಸುವರ್ಣವಿಷಯುಕವಾಗಿ ಸುಳ್ಳು ಹೇಳುವವನು ಹುಟ್ಟದವರನ್ನೂ ಹುಟ್ಟುವವರನ್ನೂ ಸಂಹಾರಮಾಡುವದರಿಂದ ಉಂಟಾಗುವ ನರಕ ಯಾತನೆಯುನ್ನು ಹೊಂದುವನು.

ಭೂಮಿಯು ವಿಷಯುಕವಾಗಿ ಸುಳ್ಳು ಹೇಳುವವನು ಪೂರ್ವ ಜನ್ಮದಲ್ಲಿಯೂ, ಈ ಜನ್ಮದಲ್ಲಿಯೂ ಮಾಡಿದ ಸುಕೃತಮೊದಲುಗೊಂಡು ಸಮಸ್ತವನ್ನೂ ನಾಶಮಾಡಿಕಳೆಕೊಂಡು ಯಾವ ನರಕವನ್ನು ಹೊಂದುವನೋ ಅಂಥಾ ನರಕಯಾತನೆಯುನ್ನು ಹೊಂದುವನು. ಆದ ಕಾರಣ ಭೂವಿಷಯುಕವಾಗಿ ಸುಳ್ಳನ್ನುಹೇಳಬೇಡವೆಂದು ಪ್ರಹ್ಲಾದನನ್ನು ಕುರಿತು ಸುಧನ್ವನು ಹೇಳಿದ್ದಾನೆ.

ಆದ್ದರಿಂದ ಎಲೈ ಧೃತರಾಷ್ಟ್ರನೇ ಭೂ ವಿಷಯುವಾಗಿ ಸುಳ್ಳನ್ನು ಹೇಳುವದಕ್ಕೆ ನೀನು ಯೊಗ್ಯನಲ್ಲ. ಯಾಕಂದರೆ ಪುತ್ರನ ನಿಮಿತ್ತವಾಗಿ ಅಸದ್ಧವನ್ನು ಹೇಳುತಾ ಮಂತ್ರಿ ಪುತ್ರರ ಸಂಗಡ ಕೂಡಾ ನಾಶವನ್ನು ಹೊಂದದಿರು.

ದೇವತೆಗಳು ಪಶುಪಾಲಕರಹಾಗೆ ದಂಡವನ್ನು ಕೈಗೆ ತಕ್ಕೊಂಡು ಪುರುಷರನ್ನು ರಕ್ಷಿಸುವದಿಲ್ಲ. ಹ್ಯಾಗೆ ರಕ್ಷಿಸುವರೆಂದರೆ ಯಾರನ್ನು ರಕ್ಷಿಸ ಇಚ್ಛೈಸುವರೋ ಅವರನ್ನು ಬುದ್ಧಿಯಿಂದ ಕೂಡಿಸುವರು.

ಯಾವ ಯಾವ ವಿಧವಾಗಿ ಪುರುಷನು ಶುಭಕಾರ್ಯಕರಣದಲ್ಲಿ ಮನಸ್ಸನ್ನು ಮಾಡುವನೋ ಅಯಾವಿಧವಾಗಿ ಆ ಪುರುಷನ ಸಮಸ್ತ ಇಷ್ಟಾರ್ಥಗಳೂ ಸಿದ್ಧಿಸುವದು ಸಂದೇಹವಿಲ್ಲ.

ಮಾಯಗಳುಂಟಾಗಿ ಮಾಯಗಳಿಂದಲೇ ಜೀವನ ಮಾಡುತ್ತಿರುವಂಥ ಪುರುಷನನ್ನು ವೇದಗಳು ಪಾಪಗಳಿಂದ ಉದ್ಧಾರಮಾಡವು.

ಹುಟ್ಟಿದಂಥಾ ರೆಕ್ಕೆಗಳುಳ್ಳ ಪಕ್ಷಿಗಳು ಗೂಡಿನ ಹಾಗೆ ಈ ಪುರುಷನನ್ನು ವೇದಗಳು ಅಂತ್ಯಕಾಲದಲ್ಲಿ ತ್ಯಾಗಮಾಡುವವು.

ಮದ್ಯಪಾನವೂ ಕಲಹವೂ ಬಹುಜನ ವಿರೋಧವೂ ಸತಿಪತಿಗಳಿಗೆ ಭೇದವುಂಟು ಮಾಡುವದೂ ಜ್ಯಾತಿಭೇದವೂ ರಾಜ್ಯದ್ವೇಷವೂ ಸ್ತ್ರೀಪುರುಷರಿಗೆ ವಿವಾದ ಉಂಟು ಮಾಡುವದೂ ಈ ಮಾರ್ಗಗಳು ದುಷ್ಟಗಳಾದ ಕಾರಣ ತ್ಯಾಗಮಾಡತಕ್ಕವುಗಳೆಂದು ಹಿರಿಯರು ಹೇಳುವರು.

ಸಮುದ್ರದಲ್ಲಿ ಹಡಗಿನಿಂದ ಮೇಲ್ಗಂಥರಗೂಡ ಸಮುದ್ರಮಧ್ಯದಲ್ಲಿ ಮಲಮೂತ್ರೋತ್ಸರ್ಜನೆ ಮಾಡುವದರಿಂದ ಅಧರ್ಮ ಭಯವಿಲ್ಲದವನನ್ನೂ ಸಾಮುದ್ರಿಕಾ ಲಕ್ಷಣ ತಿಳದವನನ್ನೂ ಪೂರ್ವದಲ್ಲಿ ಚೋರನಾಗಿ ಅನಂತರದಲ್ಲಿ ವ್ಯಾಪಾರ ಮಾಡುವವನನ್ನೂ ಮನುಷ್ಯರ ಅಸ್ಥಿಗಳಿಂದ ಮಾಡಲ್ಪಟ್ಟ ಚಿತ್ರಗಳಿಂದ ಶಕುನಗಳನ್ನು ಹೇಳಿ ಎರಡನೆಯವರನ್ನು ವಂಚನೆ ಮಾಡುವವನನ್ನೂ ವೈದ್ಯನನ್ನೂ ಶತ್ರುವನ್ನೂ ಮಿತ್ರನನ್ನೂ ನಟನನ್ನೂ ಇವರನ್ನೂ ಸಾಕ್ಷಿಯಾಗುವದಕ್ಕೆ ನುಡಿಯಕೂಡದು.

ಕಾಲದಲ್ಲಿ ಅಗ್ನಿಹೋತ್ರ ಮಾಡುವದೂ, ಮಾನವೂ, ವೇದಾಧ್ಯಯನಮಾಡುವದೂ: ಯಜ್ಞಮಾಡುವದೂ: ಈ ನಾಲ್ಕು ಯಥಾಯೋಗ್ಯವಾಗಿ ಮಾಡಿದ ಹಾಗಾದರೆ ಭಯಹರಗಳಾಗವು. ವಿರುದ್ಧವಾಗಿ ಮಾಡಿದ ಹಾಗಾದರೆ ಭಯಕರಗಳಾಗುವವು.

ಮನೆಯನ್ನು ಸುಟ್ಟವನೂ, ವಿಷವನ್ನಿಟ್ಟವನೂ, ಬಹು ಭೋಕ್ತನಾದ ಸೂತನೂ, ತಂದೆಯು ಬದುಕಿರುವಾಗ ತಾಯಿಯು ಜಾರತ್ವದಿಂದ ಹುಟ್ಟಿದವನೂ, ಕೆಟ್ಟ ಅನ್ನವನ್ನು ಭೋಜನ ಮಾಡುವವನೂ, ಸೋಮವನ್ನು ವಿಕ್ರಯ ಮಾಡಿದವನೂ, ಪರ್ವಕಾಲದಲ್ಲಿ ಮಾಲ್ಯದಾನೆಗಳಿಂದ ಕರ್ಮಗಳನ್ನು ಮಾಡಿಸುವವನೂ, ಮತ್ತು ಆಯುಧಗಳನ್ನು ಮಾಡುವವನೂ, ನಕ್ಷತ್ರಗತಿಗಳನ್ನೂ ತೋರಿಸುವಂಥ ಜೋತಿಷ್ಯನೂ, ಸುರುನೂ: ದುರ್ಜನನೂ, ಮಿತ್ರದ್ರೋಹ ಮಾಡಿದವನೂ, ಪರದಾರಾಗಮನ ಮಾಡಿದವನೂ, ಗರ್ಭಭೇದನ ಮಾಡಿದವನೂ, ಶಿಶು ಹತ್ಯಮಾಡಿದವನೂ, ಮದ್ಯಪಾನ ಮಾಡಿದ ಬ್ರಾಹ್ಮಣನೂ, ಅತ್ಯಂತ ಕ್ರೂರ ಸ್ವಭಾವವುಳ್ಳವನೂ, ಘಾಯವನ್ನು ಪ್ರಬಲ ಮಾಡುವ ಕಾಗೆಯ ಹಾಗೆ ಮಚ್ಛಿತನಾದವನೂ ಮತ್ತು ದುಃಖವನ್ನು ವೃದ್ಧಿಮಾಡುವವನೂ, ಪರಲೋಕವೇ ಇಲ್ಲವೆಂದು ದ್ವೇಷಿಸುವವನೂ, ವೇದನಿಂದಕನೂ, ಗ್ರಾಮಪುರೋಹಿತನೂ, ಕಾಲಾತೀಕವಾದ ತರುವಾಯ ಉಪನಯನವಾದವನೂ, ದ್ರವ್ಯವುಳ್ಳವನಾದರೂ ದೇವತೆಗಳನ್ನೂ ಪಿತ್ರಗಳನ್ನೂ ಅತಿಥಿಗಳನ್ನೂ ಬಿಟ್ಟು ಭೋಜನ ಮಾಡುವವನೂ, ಕೃಷಿಯಿಂದ ಜೀವನಮಾಡುವವನೂ, ಸಂರಕ್ಷಣೆಮಾಡುವ ಸಾಮರ್ಥ್ಯವಿದ್ದೂ ಸಂರಕ್ಷಣೆಮಾಡದವನೂ, ಅತ್ಮಹತ್ಯಮಾಡಿಕೊಂಡವನೂ, ಇವರೆಲ್ಲರೂ ಬ್ರಹ್ಮಹತ್ಯಮಾಡಿದವರ ಸಂಗಡ ಸಮರು. ಇವರಲ್ಲಿಮೊದಲಿನ ಎರಡು ನಿನ್ನ ಮಕ್ಕಳಲ್ಲಿ ನೋಡಲ್ಪಟ್ಟವೆ.

ರಾತ್ರಿವೇಳೆಯುಲ್ಲಿ ತೃಣ ಜ್ಯೋತಿಯಿಂದ ರೂಪವುಳ್ಳ ವಸ್ತುವು ತಿಳಿಯಲ್ಪಡುತ್ತದೆ. ಶೀಲದಿಂದ ಪುರುಷನಲ್ಲಿಧರ್ಮವುಂಟು. ಇಲ್ಲವೆಂದು ಅಹಿಂಸಾದಿ ಪ್ರಧಾನವಾದ ಕಾರ್ಯಗಳಿನ್ನು ಸಾಧುತ್ವವೂ ಭಯಸಂಭವಿಸಿದ ಕಾಲದಲ್ಲಿ ಶೂರನೆಂದು ದ್ರವ್ಯವೂ ಸಮಸ್ತವಾದ ಆಪತ್ಕಾಲದಲ್ಲಿ ಧೈರ್ಯವೂ ಶತ್ರುತ್ವವೂ ತಿಳಿಯಲ್ಪಡುವಂತೆ ಭಿನ್ನ ಮಕ್ಕಳಲ್ಲಿ ಧರ್ಮವು ಸಾಧುತ್ವವೂ ಇಲ್ಲಾ. ವಾರ್ಧಿಕ್ಯವು ಪ್ರಾಣವನ್ನೂ, ಅಸೂಯೆ ಧರ್ಮನನ್ನೂ, ಕ್ರೋಧವು ಸಂಪತ್ತನ್ನೂ, ದುಷ್ಟಜನ ಸೇವೆ ಸತ್ಸ್ವಭಾವನನ್ನೂ, ತೋರಿಕೆ ಲಜ್ಜೆಯನ್ನೂ, ಅಹಂಕಾರ ಸಮಸ್ತವನ್ನೂ ಅಪಹರಿಸುತ್ತದೆ.

ಬ್ರಾಮ್ಹಣಾದಿ ಸೇವಾರೂಪವಾದ ಶುಭದಿಂದ ಸಂಪತ್ತು ವೃದ್ಧಿಹೊಂದುತ್ತದೆ. ಪೂರ್ವಜನ್ಮ ಸಂಸ್ಕಾರದಿಂದ ಸಂಪತ್ತು ಇವನ್ನು ಹೊಂದುತ್ತದೆ. ಶೀಸ್ರಕಾರಿತ್ವದಿಂದ ಸಂಪತ್ತು ದೃಢವಾಗುತ್ತದೆ. ಅಪಾತ್ರ ವ್ರಯುವ ಡುವದರಿಂದ ಸಂಪತ್ತು ಸ್ಥಿರವಾಗಿರುತ್ತದೆ.

ಎಂಟು ಗುಣಗಳು ಪುರುಷನನ್ನು ಪ್ರಕಾಶನಾಡುತ್ತವೆ. ಅವು ಯಾವಂದರೆ ಪ್ರಜ್ಞೆ, ಆಸಕ್ತಿ, ಮನೋನಿಗ್ರಹ, ಶಾಸ್ತ್ರಾಭ್ಯಾಸ, ಪರಾಕ್ರಮ, ಮಿತಭಾಷಿತ್ವ, ಯಥಾಶಕ್ತಿ ದಾನಮಾಡುವದು, ಕೃತಜ್ಞತೆ, ಇವೇ ಎಂಟು ಗುಣಗಳು.

ಮಹಾಪ್ರಭಾವವುಳ್ಳ ಈ ಗುಣಗಳಲ್ಲಿ ಒಂದು ಗುಣ ಬಲಾತ್ಕಾರದಿಂದ ಆಶ್ರಯಿಸಿ ಪ್ರಕಾಶಿಸುತ್ತದೆ. ಈ ಪರುಷನು ಅರಸಿನಿಂದ ಸತ್ಕಾರಮಾಡಲ್ಪಟ್ಟದ್ದರಿಂದ ಆ ರಾಜಸತ್ಕಾರ ರೂಪ ಗುಣವು ಈ ಪೂರ್ವೋಕ್ತಗಳಾದ ಎಂಟು ಗುಣಗಳನ್ನು ಬಲಾತ್ಕಾರದಿಂದ ಉಂಟುಮಾಡಿ ಪ್ರಕಾಶಿಸುತ್ತವೆ.

ಮುಂದೆ ಹೇಳುವ ಎಂಟು ಗುಣಗಳು ಸ್ವರ್ಗಲೋಕವನ್ನು ತೋರಿಸುವಂಥವು. ಆ ಎಂಟು ಗುಣಗಳಲ್ಲಿ ಮೊದಲಿನ ನಾಲ್ಕು ಗುಣಗಳೂ ಪರುಷನ ಸಂಗಡ ಇರುವಂಥವ್ರ. ಮಿಕ್ಕ ನಾಲ್ಕು ಗುಣಗಳು ಯತ್ನದಿಂದ ಪುರುಷನನ್ನು ಹೊಂದುವಂಥವು.

ಯಜ್ಞ, ಅಧ್ಯಯನ, ದಾನ, ತಪಸ್ಸು, ಸತ್ಯ, ಕ್ಷಮೆ, ದಯ, ಆತ್ಮಾಸಕ್ತಿಯಿಲ್ಲದೆ ಹೊಗುವದು. ಇವು ಎಂಟು ಧರ್ಮದ ಮಾರ್ಗಗಳಾಗಿವೆ.

ಅವುಗಳಲ್ಲಿ ಮೊದಲಿನ ನಾಲ್ಕು ಧರ್ಮದಲ್ಲಿ ಡಂಭಾರ್ಥವಾಗಿಯು ಸೇವಿಸಲ್ಪಡುತ್ತವೆ. ಎರಡನೆ ನಾಲ್ಕು ಧರ್ಮಗಳುಮಹಾತ್ಮರಲ್ಲದವರಲ್ಲಿರುವದಿಲ್ಲ.

ಯಾವ ಸಭೆಯಲ್ಲಿ ವೃದ್ಧರು ಇಲ್ಲವೋ ಅದು ಸಭೆಯಲ್ಲ. ಯಾರು ಧರ್ಮವನ್ನು ಹೇಳದವರೊ ಅವರು ವೃದ್ಧರಲ್ಲ. ಯಾವ ಧರ್ಮದಲ್ಲಿ ಸತ್ಯವಿಲ್ಲವೊ ಅದು ಧರ್ಮವಲ್ಲ. ಸತ್ಯವ್ರು ಕಪಟದಿಂದ ಯುಕ್ತವಾದದ್ದದೊ ಅದು ಸತ್ಯವಲ್ಲ.

ಸತ್ಯವಕ್ತೃತ್ವ, ಸದ್ವೃತ್ತಿ, ಸತ್ಸ್ವಭಾವ, ಶಾಸ್ತ್ರಾಭ್ಯಾಸ, ದೇವತಾಪ್ರುಪಾಸನೆ, ಯುಕ್ತಾಯುಕ್ತವಾಗಿಮಾತಾಡುವದು ಸತ್ಕುಲ ಪ್ರಸೂತತ್ವ, ಬಲವುಂಟಾಗಿರುವದು ಧನವಂತನಾಗುವದು ಶೂರಭಾವವು ಇವು ಹತ್ತು ಸತ್ಸಂಗದಿಂದುಂಟಾಗುವಂಥವು.

ಪಾಪವನ್ನು ಮಾಡಿದಂಥ ಪುರುಷನು ಪಾಪಿಷ್ಟವಾದ ಕೀರ್ತಿಯುಂಟಾದವನಾಗಿ ಪಾಪಜನ್ಯವಾದ ಫಲವನ್ನನುಭವಿಸುವನು. ಪುಣ್ಯವನ್ನು ಮಾಡಿದ ಪುರುಷನು ಪವಿತ್ರವಾದ ಕೀರ್ತಿಯುಳ್ಳವನಾಗಿ ಪುಣ್ಯಜನ್ಯವಾದ ಫಲವನ್ನು ಕೇವಲವಾಗಿ ಅನುಭವಿಸುವನು.

ಆದಕಾರಣ ಪುರುಷನು ಕ್ರೂರಗಳಾದ ವ್ರತಗಳನ್ನು ಮಾಡಿ ಇರುವವನಾಗಿ ಪಾಪಗಳನ್ನು ಮಾಡದೆ ಇರತಕ್ಕದ್ದು.

ಆಗ ಮಾಡಲ್ಪಡುವ ಪಾಪವನ್ನು ಪ್ರಜ್ಞೆಯು ನಾಶಮಾಡುತ್ತದೆ.

ಪ್ರಜ್ಞಾಶೂನ್ಯನಾದ ಪುರುಷನು ಪ್ರತಿದಿನದಲ್ಲೂ ಪಾಪವನ್ನೇ ಆರಂಭಿಸುತಲ್ಲಾನೆ. ಆಗ ಮಾಡಲ್ಪಡುವ ಪುಣ್ಯವು ಪ್ರಜ್ಞೆಯನ್ನು ಹೊಂದಿಸುತ್ತದೆ.

ಪ್ರವರ್ಧಮಾನವಾದ ಪ್ರಜ್ಞೆಯುಳ್ಳ ಪುರುಷನು ನಿರಂತರದಲ್ಲೂ ಪುಣ್ಯವನ್ನು ಮಾಡುದಕ್ಕೋಸ್ಕರ ಆರಂಭಿಸುತಾನೆ. ಪುಣ್ಯವನ್ನು ಮಾಡುತಾ ಪವಿತ್ರವಾದ ತೀರ್ಥವುಂಟಾದವನಾಗಿ ಪವಿತ್ರವಾದ ಸ್ಥಾನವನ್ನು ಹೊಂದುತ್ತಿದ್ದಾನೆ.

ಆದ್ದರಿಂದ ಪುರುಷನು ಇಂದ್ರಿಯ ನಿಗ್ರಹವುಂಟಾದವನಾಗಿ ಪುಣ್ಯವನ್ನು ಸೇವಿಸಬೇಕು.

ಯಾವನು ಅಸೂಯೆವುಳ್ಳವನೋ, ಮರ್ಮ ಭೇದಕನೋ, ನಿಷ್ಠೂರವಕ್ತನೋ, ವಿರೋಧ ಮಾಡುವವನೋ, ಗೋಪ್ಯವಾದ ಹಾಗೆ ಅಪಕಾರಮಾಡುವವನೋ, ಆ ಪುರುಷನು ಪಾಪವನ್ನು ಮಾಡುತಾ ಜಾಗ್ರತೆಯಾಗಿ ಮಹತ್ತರವಾದ ಕಷ್ಟವನ್ನು ಹೊಂದುವನು.

ಅಸೂಯೆ ಇಲ್ಲದೆ ಪ್ರಜ್ಞಾಶಾಲಿಯಾಗಿ ಶುಭ ಕಾರ್ಯಗಳನ್ನೇ ನಿರಂತರದಲ್ಲೂ ಮಾಡುತಾ ಮಹತ್ತರವಾದ ಕಷ್ಟವನ್ನು ಹೊಂದದೆ ಸಕಲ ವಿಷಯದಲ್ಲೂ ಪ್ರಕಾಶಿಸುವನು.

ಯಾವ ಪುರುಷನು ಪ್ರಾಜ್ಞರಿಂದ ಪ್ರಜ್ಞೆಯನ್ನು ಹೊಂದುವನೋ ಆ ಪುರುಷನು ಪಂಡಿತನು.

ಪ್ರಾಜ್ಞನು ಧರ್ಮಾರ್ಥಗಳನ್ನು ಹೊಂದಿ ಸುಖವನ್ನು ಹೊಂದುವದಕೋಸ್ಕರ ಸಮರ್ಥನಾಗುತಾ ಇದ್ದಾನೆ. ಯಾವ ಕಾರ್ಯದಿಂದ

ರಾತ್ರಿ ಸುಖವಾಗಿರುವನೋ ಆ ಕಾರ್ಯವನ್ನು ಹಗಲಿನಲ್ಲೇ ಮಾಡತಕ್ಕದ್ದು. ಯಾವ ಕಾರ್ಯದಿಂದ ಸಂವತ್ಸರಾಂತ ಪರಿಯಂತರ ಸುಖಿಯಾಗಿರುವನೋ ಆ ಕಾರ್ಯ ಎಂಟು ತಿಂಗಳಿಂದ ಮಾಡತಕ್ಕದ್ದು. ಯಾವ ಕಾರ್ಯದಿಂದ ವೃಧಾಪ್ಯ ಕಾಲದಲ್ಲಿ ಸುಖವಾಗಿರುವನೋ ಆ ಕಾರ್ಯ ಪೂರ್ವ ವಯಸ್ಸಿನಲ್ಲೇ ಮಾಡತಕ್ಕದ್ದು.

ಯಾವ ಕೆಲಸದಿಂದ ಇಹಪರ ಲೋಕಗಳಲ್ಲಿ ಸುಖವಾಗಿರುವದೋ ಆ ಕೆಲಸವು ಯಾವಜ್ಜೀವವೂ ಮಾಡತಕ್ಕದ್ದು.

ಜೀರ್ಣವಾದ ಅನ್ನವನ್ನೇ ಪ್ರಶಂಸೆ ಮಾಡುತ್ತಾರೆ. ಯೌವನಾನಂತರದಲ್ಲಿ ವೃದ್ಧಳಾದ ಹೆಂಡತಿಯನ್ನೇ ಪ್ರಶಂಸಿಸುತ್ತಾರೆ. ಯುದ್ಧದಲ್ಲಿ ಜಯವನ್ನು ಹೊಂದಿದ ಶೂರನನ್ನು ಪ್ರಶಂಸೆ ಮಾಡುತ್ತಾರೆ. ಕಾರ್ಯಗಳಲ್ಲಿ ಪಾರಹೊಂದಿದವನನ್ನೇ ಪ್ರಶಂಸೆ ಮಾಡುತ್ತಾರೆ. ಸಮರ್ಥರ ತಿರಸ್ಕಾರದಲ್ಲಿ ಸಹಿಷ್ಣುಯಿಲ್ಲದವನನ್ನ ಪ್ರಶಂಸೆ ಮಾಡುತ್ತಾರೆ.

ಧರ್ಮಲಬ್ಧವಾದ ದ್ರವ್ಯದಿಂದ ಯಾವ ಪಾಪರೂಪವಾದ ಛಿದ್ರವು ಮುಚಲ್ಪಡುವದಿಲ್ಲವೊ ಆ ಛಿದ್ರವು ಮುಚಲ್ಪಡುವದಾದರೆ ಎರಡನೇ ಛಿದ್ರವನ್ನುಂಟು ಮಾಡುವದು.

ಮನೋನಿಗ್ರಹವುಂಟಾದವರಿಗೆ ಗುರುವೇ ಶಿಕ್ಷಕನು. ದುಷ್ಟಮನಸಿನವರಗೆ ಅರಸನೇ ಶಿಕ್ಷಕನು. ಈ ಲೋಕದಲ್ಲಿ ಪ್ರಚ್ಛಿನ್ನವಾದ ಪಾಪಗಳುಳ್ಳವರಿಗೆ ಸೂರ್ಯಪುತ್ರನಾದ ಯಮನೇ ಶಿಕ್ಷಕನು.

ಋಷಿಗಳ, ನದಿಗಳ, ಮೂಲ್ಯಗಳನ್ನೂ, ಮಹಾತ್ಮರ ಸ್ತ್ರೀಯರ ಪ್ರಭಾವವು ತಿಳಿಯಕೂಡುವದಿಲ್ಲವು. ದುಶ್ಚರಿತ್ರೆಯ ಪ್ರಭಾವವೂ ತಿಳಿಯಕೂಡದು.

ಬ್ರಾಹ್ಮಣ ಪೂಜೆಯಲ್ಲಿ ಆಸಕ್ತಿಯುಂಟಾಗಿ ನಿಗ್ರಹಿತ ಮನಸ್ಕನಾಗಿ ಜ್ಞಾತಿಗಳ ವಿಷಯದಲ್ಲಿ ರುಜುಮಾರ್ಗವುಂಟಾಗಿ ಸತ್ಸ್ವ

ಭಾವವುಂಟಾದವನಾದಂಥ ಕ್ಷತ್ರಿಯನಾದ ಅರಸನು ಬಹು ಕಾಲ ಪರಿ ಯಂತರವೂ ಭೂ ಪರಿಪಾಲನೆಯನ್ನು ಮಾಡುವನು.

ಶೂರನೂ, ವಿದ್ಯಾವಂತನೂ ಭೂ ಸಂರಕ್ಷಣೆಯನ್ನು ಮಾಡಿ, ಅದರಿಂದುಂಟಾಗುವ ದ್ರವ್ಯವನ್ನು ಸದ್ವ್ಯಯವು ಮಾಡುವದರಿಂದುಂಟಾ ಗುವ ಸುಖವನ್ನು ಸೇವಿಸುವನು. ಈ ಮೂರು ಮಂದಿಯೂ ದ್ರ ವ್ಯದಿಂದ ಸಂಪೂರ್ಣವಾದ ಭೂಮಿಯನ್ನು ಹೊಂದುತ್ತಾಯಿದ್ದಾರೆ.

ಬುದ್ಧಿಯಿಂದ ಆಗುವ ಕೆಲಸಗಳು ಶ್ರೇಷ್ಠಗಳು. ಭುಜ ಪರಾಕ್ರ ಮದಿಂದ ಆಗುವ ಕೆಲಸಗಳು ಮಧ್ಯಮಗಳು. ಪಾದಸಂಚಾರಪೂರ್ವ ಕವಾಗಿ ಆಗುವ ಕೆಲಸಗಳು ನಿಷ್ಠುರಗಳು. ಭಾರವಹದಿಂದ ಆಗುವ ಕೆಲಸಗಳು ಅತಿ ನೀಚಗಳು.

ದುರ್ಯೋಧನನೂ, ಶಕುನಿಯೂ, ದುಶ್ಯಾಸನನೂ, ಇವರಲ್ಲಿ ಐಶ್ವರ್ಯವನ್ನು ಇರಿಸಿ ಹ್ಯಾಗೆ ನೀನು ಐಶ್ವರ್ಯನ್ನು ಇಚ್ಛಿಸುತ್ತೀ?

ಸಕಲ ಗುಣಗಳಿಂದ ಯುಕ್ತವಾದ ಪಾಂಡವರು ನಿನ್ನಲ್ಲಿ ಪಿತೃ ವಾಂಛಲ್ಯವುಂಟಾಗಿದ್ದಾರಾದದರಿಂದ ಅವರ ವಿಷಯವಾಗಿ ನೀನು ಪುತ್ರವಾಂಛಲ್ಯವುಂಟಾದವನಾಗು.

---

## ನಾಲ್ಕನೇ ಅಧ್ಯಾಯವು.

ಪರಮ ಹಂಸರೂಪರಾದ ಆತ್ರೇಯರು ಸಾಧ್ಯರನ್ನು ಕುರಿತು ಮಾಡಿದ ಉಪದೇಶವೆನಂದರೆ:—

ಎಲೈ, ಸಾಧ್ಯರುಗಳಿರಾ! ದುಃಖಗಳಿಂದ ಹೊಡೆಯಲ್ಪಟ್ಟವನಾ ದಾಗ್ಯೂ ನೈಕಲ್ಯ ಮನಸ್ಸು ಹೊಂದದೆ ಸರ್ವೇಂದ್ರಿಯ ನಿಗ್ರಹ

ಉಂಟಾಗಿ ಬ್ರಹ್ಮ ಸಾಧಕಗಳಾದ ಅಧ್ಯಯನ, ಧಾರಣ, ಸಮಾಧಿಗಳನ್ನು ಅನುಸರಿಸುವದರಿಂದ ಅಹಂಕಾರ ಮಮಕಾರಗಳನ್ನು ತ್ಯಾಗ ಮಾಡಿ ಜಡಾತ್ಮಕಗಳಾದ ಬುದ್ಧಿ ಮನಸ್ಸಿನ ಐಕ್ಯಭಾವವನ್ನು ಭೇದಿಸಿ ಸುಖ ದುಃಖಗಳನ್ನು ಸಮಭಾಗವಾಗಿ ಹೊಂದಿಸಿ ಪ್ರಿಯಾಪ್ರಿಯಯ ಧರ್ಮಗಳುಳ್ಳ ಮನಸ್ಸನ್ನು ಬುದ್ಧಿಯಲ್ಲಿ ಲಯವನ್ನು ಹೊಂದಿಸಿದ ತರುವಾಯ ಆ ಬುದ್ಧಿಯಲ್ಲಿ ಮನಸ್ಸುಗಳೆರಡು ಆಂತ್ಯದಲ್ಲಿ ಲಯವಾಗುವದು ಹ್ಯಾಗೆಂದರೆ, ರಜ್ಜುವಿನಲ್ಲಿ ಸರ್ಪಜ್ಞಾನಾಭಾವಾನಂತರ ಆ ಸರ್ಪಜ್ಞಾನಾಭಾವದೊಡನೆ ಭಯಾದಿಗಳು ಲಯವಾದ ಹಾಗೆಯೆಂದು ಗುರುಮುಖದಿಂದಾ ಕೇಳಿದ್ದೆನೆ.

ಎರಡನೆಯವರಿಂದ ತಾನು ಕೋಪವುಳ್ಳವನಾಗಿ ಮಾಡಲ್ಪಟ್ಟ ಕೋಪವು ಮಾಡದವನ ಕೋಪವು ಆ ಕೋಪವುಂಟಾಗುವ ಹಾಗೆ ಮಾಡಿದವನನ್ನು ದಹಿಸುವದಲ್ಲದೆ ಅವನ ಸುಕೃತವನ್ನು ಕೋಪವುಳ್ಳವನಾಗಿ ಮಾಡುಲ್ಪಟ್ಟವನು ಹೊಂದುವನು.

ಆಕ್ರೋಶವುಂಟಾದವನಾಗದೆ ಎರಡನೆಯವರಿಗೆ ಅವಮಾನ ಮಾಡದೆ ಮಿತ್ರದ್ರೋಹ ಮಾಡದವನಾಗಿ, ನೀಚಸೇವೆಮಾಡದೆ ಅಭಿಮಾನ ಶೂನ್ಯನಾಗಿ ನಿಂದಿತವೃತ್ತಿ ಯಿಂದ ಜೀವನವನ್ನು ಮಾಡದೆ, ಮರ್ಮಸ್ಪೃಕ್ಕುಗಳಾದ ಅಮಂಗಳಕರವಾಕ್ಕುಗಳನ್ನು ವರ್ಜಿಸಿ ಇರತಕ್ಕದ್ದು.

ಯಾವ ಕಾರಣದೆಶೆಯಿಂದ ಮರ್ಮಭೇದಕಗಳಾದ ವಾಕ್ಕುಗಳು ಈ ಲೋಕದಲ್ಲಿ ಪುರುಷರ ಮರ್ಮಸ್ಥಾನಗಳನ್ನೂ ಅಸ್ಥಿಗಳನ್ನೂ ಮನಸ್ಸನ್ನೂ ಪ್ರಾಣಗಳನ್ನೂ ಕೇವಲ ದಹಿಸುತ್ತವೆಯೋ ಆ ಕಾರಣದದೆಶೆಯಿಂದ ಮರ್ಮ ಸ್ಪೃಕ್ಕಾದ ಅಮಂಗಳಕರವಾದ ವಾಕ್ಯವನ್ನು ಧರ್ಮದಲ್ಲಿ ಅಭಿರುಚಿ ಉಂಟಾದ ಪುರುಷನು ನಿರಂತರದಲ್ಲಿ ವರ್ಜಿಸ ಬೇಕು.

ಮಾತುಗಳೆಂಬ ಮುಳ್ಳುಗಳಿಂದ ಮನುಷರನ್ನು ತಿವಿಯುತ್ತಿರುವ ಮರ್ಮಭೇದಿಯಾದ ಕಠಿಣವಾದ ಕಠಿಣೋಕ್ತಿಗಳುಳ್ಳ ಪುರುಷನನ್ನು ಜನರಮಧ್ಯದಲ್ಲಿ ಭಾಗ್ಯ ರಹಿತನಾಗಿ ತಿಳಿಯಬೇಕು. ಕೆಟ್ಟ ಮಾತುಗಳ ರೂಪವಾಗಿ ಅವನ ಮುಖದಲ್ಲಿ ಕಟ್ಟಲ್ಪಟ್ಟಂಥಾ ಮೃತ್ಯುವೇ ಅವನನ್ನು ಸಂಹರಿಸುವದು. ಸೂರ್ಯಾಗ್ನಿಗಳ ಹಾಗೆಯೇ ಪ್ರಜ್ವಲಿಸುತ್ತಿರುವ ಕೇವಲ ಕ್ರೂರಗಳಾದ ಬಾಣಗಳಿಂದ ಪುರುಷನನ್ನು ಅಧಿಕವಾಗುವ ಹಾಗೆ ಎರಡನೆಯವರು ಛೇದಿಸಿದರೂ ತಾನು ಹೊಡಿಯಲ್ಪಟ್ಟವನಾದರೂ ಎರಡನೆಯವರನ್ನು ತಾನು ದಹನ ಮಾಡದೆ ತಿಳಿದವನಾಗಿ ತನನ್ನು ದಹಿಸಿದಂಥಾ ಪುರುಷನು ತನಗೆ ಸುಕೃತವನ್ನು ಕೊಡುವವನೆಂದು ತಿಳಿದವನು ವಿದ್ವಾಂಸನು.

ಯಾವಾಗ ಸತ್ಪುರುಷನನ್ನು ಸೇವಿಸುವನೋ, ಯಾವಾಗ ದುಷ್ಟನನ್ನು ಸೇವಿಸುವನೋ, ಯಾವಾಗ ತಪೋವಂತನನ್ನು ಸೇವಿಸುವನೋ ಯಾವಾಗ ಚೋರನನ್ನು ಸೇವಿಸುವನೋ, ಆಯಾಯ ಕಾಲಗಳಲ್ಲಿ ವಸ್ತ್ರವು ಯಾವ ರೀತಿಯಾಗಿ ನೀಲಾದಿ ವರ್ಣಗಳನ್ನು ಹೊಂದುವದೊ ಹಾಗೆ ಆಯಾ ಪುರುಷರಲ್ಲಿ ಉಂಟಾದ ಸುಗುಣ ದುರ್ಗುಣಗಳನ್ನು ಹೊಂದುವನು.

ಯಾವ ಪುರುಷನು ತಾನೊಬ್ಬ ಆಡಿದರೂ ಅತಿಭಾಷೆಯನ್ನು ತಾನು ಆಡದೆ ಎರಡನೆಯವನಿಂದ ಆಡಿಸದೆ, ಒಬ್ಬನು ತನ್ನನ್ನು ಹೊಡಿದರೂ ತಿರಿಗಿ ಅವನನ್ನು ಹೊಡಿಯದೆ ಹೊಡಿಸದೆ ಆ ಪಾಪಿಷ್ಠನನ್ನು ಸಂಹಾರ ಮಾಡುವದಕ್ಕೋಸ್ಕರ ಇಚ್ಛೈಸನೋ ಅವನಿಗೋಸ್ಕರ ದೇವತೆಗಳು ಸನ್ಮಾನವು ಮಾಡುವದಕ್ಕೆ ಇಚ್ಛೆವುಳ್ಳವರಾಗುತ್ತಾರೆ.

ಮಾತುಗಳಾಡುವ ವಿಷಯದಲ್ಲಿ ಸತ್ಯಯುಕ್ತವಾದ ಮಾತುಗಳಾಡುವದು ಅದಕ್ಕಿಂತ ಶ್ರೇಯಸ್ಕರವಾದದ್ದು. ಸತ್ಯಯುಕ್ತವಾದ

ಪ್ರಿಯೋಕ್ತಿಗಳನ್ನು ಹೇಳುವದು ಅದಕ್ಕಿಂತಲೂ ಉತ್ತಮವಾದದ್ದು. ಸತ್ಯಯುಕ್ತವಾಗಿ ಧರ್ಮ ಸಂಪಾದಕವಾದ ಪ್ರಿಯ ಮಾತನ್ನು ಹೇಳುವದು ಮೊದಲು ಹೇಳಿದ ಮಾತಿನಕಿಂತ ಶ್ರೇಷ್ಠವಾದದ್ದು ಈ ನಾಲ್ಕೂ ಒಂದಕ್ಕಿಂತ ಒಂದು ಶ್ರೇಷ್ಟವಾದ ಮಾರ್ಗಗಳು.

ಪುರುಷನು ಎಂಥಾ ಗುಣವುಳ್ಳ ಪುರುಷರ ಸಂಗಡ ಸಹವಾಸ ಮಾಡುವನೋ, ಎಂಥವನನ್ನು ಸೇವಿಸುವನೋ, ಎಂಥವನನ್ನು ತಾನಾಗ ಬೇಕೆಂದು ಇಚ್ಛೈಸುವನೋ, ಅಂಥವನು ತಾನು ಆಗುವನು. ಆದಕಾರಣ ಸತ್ಸಂಗವೇ ಬೇಕಾದದ್ದು.

ಯಾವಯಾವ ವಸ್ತುವಿನಿಂದ ಹಿಂದಕ್ಕೆ ತಿರಗುವನೋ ಆಯಾ ವಸ್ತುಗಳನ್ನು ಬಿಡಲ್ಪಡುವನು. ಸಕಲ ವಿಷಯದಲ್ಲೂ ದೂರಸ್ತನಾದ್ದರಿಂದ ಸಲ್ಪವಾದ ದುಃಖವನ್ನಾದರೂ ಹೊಂದುವನು.

ಎರಡನೆಯವರಿಂದ ತಾನು ಜಯಸಲ್ಪಡದೆ ಒಂದು ವೇಳೆ ತಾನು ಜಯಸಲ್ಪಟ್ಟರೂ ಎರಡನೆಯವರನ್ನು ತಾನು ಜಯಿಸಲಿಚ್ಛಿಸದೆ ವೈರವನ್ನು ಮಾಡದೆ ಎರಡನೆಯವರು ವೈರಮಾಡಿದರೂ ಅವರನ್ನು ಹೊಡಿಯದೆ ನಿಂದಾ ಪ್ರಶಂಸೆಗಳಲ್ಲಿ, ಸಮುಷ್ಟಭಾವವುಳ್ಳವನು ವ್ಯಸನ ಸಂತೋಷಗಳೆರಡೂ ಉಳ್ಳವನಾಗುವದಿಲ್ಲ.

ಯಾವ ಪುರುಷನು ಸತ್ಯ ವಾಕ್ಯವು ಆರ್ದ್ರವಪುಯೆಕಾದಶೇಂದ್ರಿಯ ನಿಗ್ರಹವು ಉಂಟಾಗಿ ಸಮುಸ್ತ ಜನರಿಗೂ ನಾಶವನ್ನು ಅಪೇಕ್ಷಿಸದೆ ಒಳ್ಳೇದನ್ನು ಅಪೇಕ್ಷಿಸುವನೋ ಅವನು ಉತ್ತಮನು.

ಕಪಟಯುಕ್ತವಾದ ಸಮಾಧಾನವನ್ನು ಎರಡನೆಯವರಿಗೆ ಹೇಳಿದೆ ತಾನು ಕೊಡುತ್ತೇನೆಂದು ಹೇಳಿದ ಮೇಲೆ ಕೊಡುತ್ತಾ ಎರಡನೆಯವರ ಮರ್ಮಗಳನ್ನು ತಿಳಿದು ಉದ್ಘಾಟನೆ ಮಾಡದಂಥಾ ಪುರುಷನು ಮಧ್ಯಮನು.

ಗದೆಯಿಂದ ಹೊಡೆಯಲ್ಪಟ್ಟು, ಶಸ್ತ್ರಗಳಿಂದ ಶೀಳಲ್ಪಟ್ಟು, ಕೋಪ ಸ್ವಾಧೀನವನ್ನು ಹೊಂದಿ, ಒಬ್ಬನಿಗೂ ಮಿತ್ರನಾಗದೆ ದುಷ್ಟ ಮನಸುಳ್ಳವನಾಗಿ, ಕೃತಘ್ನನಾದ ಅಧಮ ಪುರುಷನು ದುಶ್ಯಾಪನು.

ಮನಸ್ಸಿನಲ್ಲಿ ವಿಶ್ವಾಸವಿಲ್ಲದವನಾಗಿ ಗುರುಜನಕ್ಕೊಳ್ಳಿಸ್ಕರ ಶುಭವನ್ನಾಪೇಕ್ಷಿಸದೆ ಮಿತ್ರಜನವನ್ನು ನಿರಾಕರಿಸುವ ಪುರುಷನು ಅಧಮನು.

ಯಾವ ಪುರುಷನು ಕೀರ್ತಿಯಲ್ಲಿ ಆಪೇಕ್ಷೆಯುಳ್ಳವನೋ ಅವನು ಉತ್ತಮ ಗುಣವುಳ್ಳ ಪುರುಷನನ್ನೇ ಸೇವಿಸಬೇಕು. ಕಾರ್ಯಸಾಧನಾರ್ಥವಾಗಿ ಒಂದಾನೊಂದು ಕಾಲದಲ್ಲಿ ಮಧ್ಯಮ ಗುಣವುಳ್ಳ ಪುರುಷರನ್ನು ಸೇವಿಸಬೇಕೇ ಹೊರ್ತು ಅಧಮ ಪುರುಷನನ್ನು ಸೇವಿಸಕೂಡದು.

ಯತ್ನಪೂರ್ವಕವಾಗಿ ಪ್ರಜ್ಞೆ ಪುರುಷಪ್ರಯತ್ನ ಸಹಾಯಗಳುಂಟಾದವನಾದರೂ ಕಪಟದಿಂದ ದ್ರವ್ಯವನ್ನು ಹೊಂದಿದ ಪುರುಷನು ಪ್ರಶಂಸೆಯನ್ನು ಹೊಂದದೇ ಸತ್ಕುಲೋಚಿತವಾದ ಜೀವನವನ್ನು ಹೊಂದದೆ ಹೋಗುವನು.

ತಪಸ್ಸು, ಇಂದ್ರಿಯನಿಗ್ರಹ, ಬ್ರಾಹ್ಮಣರಿಗೆ ದ್ರವ್ಯವಾದವೇದಾಧ್ಯಯನ, ಕ್ರತುಪುಗಳು, ಪುಣ್ಯಗಳು, ವಿವಾಹಗಳು, ನಿರಂತರಾನ್ನದಾನ ಈ ಏಳುಗುಣಗಳು ಯಾರಲ್ಲುಂಟೋ ಅವರ ಕುಲಗಳೇ ಮಹಾಕುಲಗಳು.

ಯಾಗ ಮಾಡದೆ ಹೋಗುವದರಿಂದಲೂ ಅವಿಧಿಯಾಗಿ ವಿವಾಹವು ಮಾಡಿಕೊಳ್ಳುವದರಿಂದಲೂ ದುಷ್ಕುಲಸ್ತ್ರೀ ವಿವಾಹವು ಮಾಡಿಕೊಳ್ಳುವದರಿಂದಲೂ ವೇದಾಧ್ಯಯನ ತ್ಯಾಗದಿಂದಲೂ ಬ್ರಾಹ್ಮಣ ತಿರಸ್ಕಾರದಿಂದಲೂ ಧರ್ಮಾತಿಕ್ರಮದಿಂದಲೂ ದೇವತಾ ದ್ರವ್ಯವಿಷಯಕವಾಗಿ ಅಪಲಾಪ ಮಾಡುವದರಿಂದಲೂ ಬ್ರಹ್ಮಸ್ವರೂಪದಿಂದಲೂ ಎರಡನೇಯವನು ತನ್ನಲ್ಲಿ ನಂಬಿಕೆಯಿಂದಿಟ್ಟ ವಸ್ತುವನನ್ನು ಅಪಹರಿಸುವದರಿಂದಲೂ ಸತ್ಕುಲಗಳೇ ದುಷ್ಕುಲಗಳಾಗುವವು.

ಸತ್ಯವಾಕ್ಯರೂಪವಾದ ವೇದಾಂಗ ವಿದ್ಯೆದಿಂದಲೂ ಸತ್ಪುಗು ಷರಿಗೇ ಯೋಗ್ಯವಾದ ಸುಗುಣಗಳಿಂದಲೂ ವಿಹಿತದಿಂದ ಸಂಪಾದಿಸಿದ ದ್ರವ್ಯದಿಂದಲೂ ಆ ಮೊದಲು ಹೇಳಿದ ಏಳು ಗುಣಗಳಿಂದಲೂ ಯುಕ್ತವಾದವುಗಳು ಸತ್ಕುಲಗಳು.

ಸದ್ವೃತ್ತಿಯಿಂದ ರಹಿತವಾಗಿ ದ್ರವ್ಯದಿಂದ ಸಂಪೂರ್ಣವಾದ ಕುಲಗಳು ಸತ್ಕುಲಗಳಲ್ಲ. ಸದ್ವೃತ್ತಿಯಿಂದ ಸಹಿತವಾಗಿ ಸಲ್ಪಧನವುಳ್ಳ ಕುಲಗಳೇ ಸತ್ಕುಲಗಳೆಂದೆನಿಸಿಕೊಂಡ ಮಹತ್ತರವಾದ ಯಶಸ್ಸನ್ನು ಸಂಪಾದಿಸುತ್ತಾ ಇವೆ. ಸದ್ವೃತ್ತಿಯನ್ನು ಯತ್ನದಿಂದ ರಕ್ಷಿಸಿದ ಹಾಗಾದರೆ ಹೋದಂಥಾ ದ್ರವ್ಯಗಳನ್ನು ಪುರುಷನು ಹೊಂದುತ್ತಾ ಇದ್ದಾನೆ.

ವಿದ್ಯೆಗಳಿಂದಲೂ ಪಶುಗಳಿಂದಲೂ ಅಶ್ವಗಳಿಂದಲೂ ಸಮೃದ್ಧಿಯಾದ ಕೃಷಿಯಿಂದಲೂ ದ್ರವ್ಯದಿಂದಲೂ ರಹಿತವಾದ ಕುಲದವರೂ ರಹಿತವಾದದ್ದಲ್ಲ ಹ್ಯಾಗಂದರೆ ಸದಾಚಾರದಿಂದ ರಹಿತವಾದದ್ದಲ್ಲವಾದ್ದರಿಂದ ಮೊದಲು ಹೇಳಿದವಗಳಾದ ಸಮೃದ್ಧಿಗಳಿಂದ ಸಮೃದ್ಧಿಯಾದವುಗಳು.

ಯಾವ ಕುಲಗಳು ಸತ್ಕ್ರಿಯೆಗಳಿಂದ ರಹಿತವಾದವಗಳೋ ಆ ಕುಲಗಳು ಅಭಿವೃದ್ಧಿಯಾಗವು.

ನಮ್ಮ ಕುಲದಲ್ಲಿ ವೈರವನ್ನು ಮಾಡುತ್ತಾ ಪರಸ್ವಾಪಹಾರವನ್ನು ಮಿತ್ರದ್ರೋಹವನ್ನು ವಂಚನೆಯನ್ನು ಮಾಡುತ್ತ ಸುಳ್ಳುಹೇಳುವವನಾಗಿ ಪಿತೃ ದೇವ ಅಥಿತಿ ಸತ್ಕಾರ ಮಾಡುವದಕ್ಕಿಂತ ಆದಿಯಲ್ಲಿ ತಾನೇ ಭೋಜನಮಾಡುವಂಥ ಅರಸನಾದರೂ ಮಂತ್ರಿಯಾದರೂ ಉಂಟಾಗಬೇಡ.

ನಮ್ಮ ಬ್ರಾಹ್ಮಣರನ್ನು ಯಾರು ಹೊಡಿಯುವರೋ ಯಾರು ದ್ವೇಷಿಸುವರೋ ನಮ್ಮ ಕೃಷಿಯನ್ನು ಯಾವನು ಛೇದಿಸುವನೋ ಅವನ ಸಭೆಯನ್ನು ಕುರಿತು ಹೋಗತಕ್ಕದ್ದಲ್ಲ.

ಹುಲ್ಲುಗಳೂ ಆ ವಾಸಾರ್ಥ ಮನೆಗಳೂ ಉದಕವೂ ಸತ್ಯವಾ ಕ್ಯ ಇವು ಸತ್ಪುರುಷರ ಗೃಹಗಳಲ್ಲಿ ಒಂದಾನೊಂದು ಕಾಲದಲ್ಯಾ ದರೂ ಇಲ್ಲದವಗಳಾಗುವದಿಲ್ಲ.

ಎಲೈ! ಪ್ರಜ್ಞಾಶಾಲಿಯಾದ ಧೃತರಾಷ್ಟ್ರನೇ, ಪೂರ್ವಪುಣ್ಯಾ ದಿಂದ ಧರ್ಮಿಷ್ಟರಾದವರ ಮನೆಗಳಲ್ಲಿ ಮೊದಲು ಹೇಳಿದವುಗಳಾದ ಆ ವಸ್ತುಗಳು ಸತ್ಪುರುಷ ಸತ್ಕಾರಾರ್ಥವಾಗಿ ಅಧಿಕವಾದ ಶ್ರದ್ಧೆ ಯಿಂದ ಇರಿಸಲ್ಪಡುತ್ತವೆ.

ಎಲೈ! ಅರಸೇ ರಥಾಧಾರಭೂತವಾದ ಅಚ್ಚು ಸೂಕ್ಷ್ಮವಾದ ದ್ದಾದರೂ ರಥಭಾರಧಾರಣದಲ್ಲಿ ಸಮರ್ಥವಾದ ಹಾಗೆ ಆ ರಥದ ಲ್ಲಿ ತಗಲಿದ ಕಡಿಮೆ ಮರಗಳು ಸಮರ್ಥವಾದವಗಳು ಹ್ಯಾಗೆ ಆಗ ವೊ ಹಾಗೆ ಧರ್ಮಿಷ್ಠರಾದ ಸತ್ಕುಲ ಪ್ರಸೂತರು ಧರ್ಮಧಾರಣದ ಲ್ಲಿ ಭಾರವಾಹಕವಾದವಗಳ ಹಾಗೆ ಪ್ರಾಕೃತ ಜನರು ಆಗಲಾರರು.

ಯಾರ ಕೋಪದಿಂದ ತಾನು ಭಯಪಡುವನೋ ಅವನು ಮಿತ್ರ ನು. ಶಂಕಾಸ್ಪದನಾದವನನ್ನು ಉಪಚಾರಿಸುವವನು ಮಿತ್ರನು.

ಯಾವ ಮಿತ್ರನನ್ನು ಹೊಂದಿ ತಂದೆಯಿಂದ ಉಂಟಾಗುವ ಸು ಖವನ್ನು ಪುರುಷನು ಹೊಂದುವನೋ ಅವನೇ ಮಿತ್ರನು. ಕಡಿಮೆ ಮಿತ್ರತ್ವಗಳು ಸ್ತ್ರೀ ಧನ ಸಂಬಂಧಗಳಿಂದುಂಟಾಗುವಂಥವು.

ಸ್ತ್ರೀ ಧನ ಸಂಬಂಧಗಳಿಲ್ಲದೆ ಯಾವ ಪುರುಷನು ಮಿತ್ರಭಾ ವದಿಂದಿರುವನೋ ಆ ಪುರುಷನು ಬಂಧುವೂ ಮಿತ್ರನೂ ಪರಲೋಕ ಸಂಪಾದನೆಗೆ ಸಾಧಕನೂ ಆಗುತ್ತಾನೆ.

ವೃದ್ಧರ ಸೇವೆಯಾಗದೇ ಚಲಚಿತ್ತನಾಗಿ ಸ್ಥೂಲಬುದ್ಧಿಯುಳ್ಳವ ನ ಸಂಗಡ ಮಿತ್ರತ್ವವು ಧೃಡವಾದದ್ದಲ್ಲ.

ಚಲಚಿತ್ತನಾಗಿ ಸ್ವಾಧಿನ ಮನಸ್ಕನಾಗದೆ ದಶೇಂದ್ರಿಯ ಸ್ವಾ

ಧೀನವನ್ನು ಹೊಂದಿದವನನ್ನು ಅವನ ಸಮೀಪದಲ್ಲಿ ಪರಿಶುದ್ಧವಾದ ಸರಸ್ಸಿನ ತೀರದಲಿ ಹಂಸ ಪಕ್ಷಿಗಳು ನಿಂತ ಹಾಗೆ ಪ್ರಯೋಜನಗಳು ನಿಲ್ಲುವದೇ ಹೊರ್ತು ಹೊಂದದು.

ವಾಯು ಸಾಮರ್ಥ್ಯದಿಂದ ಚಂಚಲವಾದ ಮೇಘದ ಹಾಗೆ ನಿರ್ನಿಮಿತ್ತವಾಗಿ ಕೋಪವನ್ನೂ ಅನುಗ್ರಹವನ್ನೂ ಮಾಡುವದು ದುಷ್ಟ ಪುರುಷರ ಸ್ವಭಾವವು.

ಕೆಲವರಿಂದ ತಾವು ಸತ್ಕೃತರಾಗಲಿಲ್ಲವೆಂದು ಜನರಿಗೆ ತಿಳಿಸುತ್ತಾ ಆ ಕೆಲವರಾದವರಿಗೆ ಉಪಕಾರವನ್ನು ಮಾಡದವರಾದ ಕೃತಘ್ನರನ್ನು ಮೃಗಗಳು ಭಕ್ಷಣೆ ಮಾಡವು.

ತನಗೆ ದ್ರವ್ಯವುಂಟಾದರೂ ಉಂಟಾಗದೆ ಹೋದರೂ ಮಿತ್ರರ ಪೂಜೆಮಾಡತಕ್ಕದ್ದೇ ಮಿತ್ರರಲ್ಲಿ ಮಿತ್ರತ್ವವುಂಟಾಗಿಯಿಲ್ಲವೆಂದು ತಿಳಿಯ ಬೇಕಾದರೆ ತಾನು ಪ್ರಾರ್ಥನೆಮಾಡದೆ ತಿಳಿಯುತ್ತಾನೆ.

ಪುರುಷನ ಸಂತಾಪದಿಂದ ಸೌಂದರ್ಯವೂ ಬಲವೂ ಜ್ಞಾನವೂ ನಶಿಸಿಹೋಗುವದಲ್ಲದೇ ಪುರುಷನು ವ್ಯಾಧಿಯನ್ನು ಹೊಂದುವನು.

ತಾನು ಹೊಂದುವದಕ್ಕೋಸ್ಕರ ಅಶಕ್ಯವಾದ ವಸ್ತು ವಿಷಯಕ ಶೋಕದಿಂದ ಶರೀರ ಸಂತಪ್ತವಾಗುವದಲ್ಲದೆ ತನ್ನ ಶತ್ರುಗಳು ಸಂತೋಷಿಸುವರು, ಆದಕಾರಣ ಆ ಅಲಭ್ಯವಸ್ತು ವಿಷಯಕ ಶೋಕದಲ್ಲಿ ಮನಸ್ಸನ್ನಿಡಬೇಡ.

ಪುರುಷನು ಉತ್ಪತ್ತಿಲಯಗಳನ್ನು ಹೊಂದುತ್ತಾ ಹಾನಿ ವೃದ್ಧಿಗಳುಂಟಾಗಿ ಪುನ: ಯಾಚಿಸುತ್ತಾ, ಯಾಚಿಸ ಹೋಗುತ್ತಾ, ಶೋಕಪಡುತ್ತಾ, ಶೋಕಪಡುಹೋಗುತ್ತಾ, ಪುರುಷನನ್ನು ಸುಖದು:ಖಗಳೂ ಭಾಗ್ಯಬಡತನಗಳೂ ಲಾಭಾಲಾಭಗಳೂ ಮರಣಜೀವಿತಗಳೂ ಕ್ರಮವಾಗಿ ಇವು ಸ್ಪರ್ಶಿಸುತ್ತಿವೆಯಾಗಿ ಪುರುಷನು ಸಂತೋಷವನ್ನೂ ದು:ಖವನ್ನೂ ಅನುಭವಿಸಬಾರದು.

ಛಿದ್ರವಾದ ಉದಕಕುಂಭದದೆಶೆಯಿಂದ ನಿರಂತರದಲ್ಲಿ ಉದಕವು ಶ್ರವಿಸಿದ ಹಾಗೆ ಷಡೇಂದ್ರಿಯುಗಳೂ ಷಡ್ವಿಷಯುಗಳಲ್ಲಿ ಪ್ರವರ್ತಿಸಿದ ಹಾಗಾದರೆ ಆ ಪ್ರವರ್ತನೆದ್ವಾರದಿಂದಲೇ ಬುದ್ಧಿಚಾಂಚಲ್ಯ ಹೊಂದುವದು.

ವೇದಾಧ್ಯಯುನ ತಪಸ್ಸು ಇಂದ್ರಿಯುನಿಗ್ರಹ ಪರದ್ರವ್ಯಾಸಕ್ತಿ ಇವುಗಳನ್ನು ತ್ಯಾಗವಾಡದಲೇ ನಿನಗೆ ಶಾಂತ ಗುಣ ಉಂಟಾಗ ದೆಂದು ನಿಶ್ಚಯುಸಿದ್ದೇನೆ.

ಪುರುಷನಿಗೆ ಬುದ್ಧಿಯಿಂದ ಜನನಮರಣ ರೂಪಕವಾದ ಸಂಸಾರವು ಹೋಗಲಾಡಪಡುತ್ತದೆ. ತಪಸ್ಸಿನಿಂದ ಭಗವತಸ್ವರೂಪ ಸಾಧಕವಾದ ಶಾಸ್ತ್ರವೂ ಗುರುವೂ ಗುರು ಶಿಶ್ರೂಷೆಯಿಂದ ಜ್ಞಾನವೂ ಧ್ಯಾನದಿಂದ ಶಾಂತಗುಣವೂ ಉಂಟಾಗುತ್ತದೆ.

ಈ ಲೋಕದಲ್ಲಿ ದಾನಜನ್ಯ ಪುಣ್ಯಫಲವನ್ನು ವೇದಾಧ್ಯಯುನ ಜನ್ಯ ಪುಣ್ಯಫಲವನ್ನು ಅಪೇಕ್ಷಿಸದೆ ರಾಗ ದ್ವೇಷಗಳಿಂದ ರಹಿತರಾಗಿ ಜೀವನ್ಮುಕ್ತರು ಸಂಚರಿಸುತಾತ್ತರೆ.

ಅಧ್ಯಯುನ ಜನ್ಯಫಲರೂಪ ಕರ್ಮ ಸುಕೃತಜನ್ಯ ಫಲರೂಪ ಕರ್ಮ, ತಪೋಜನ್ಯ ಫಲರೂಪ ಕರ್ಮ, ಈ ಕರ್ಮಗಳ ನಾಶಾನಂತರದಲ್ಲಿ ಸುಖರೂಪವಾದ ದೋಷವನ್ನು ಹೊಂದುತಾತ್ತ ಇದ್ದಾನೆ.

ಸರ್ವವ್ಯಾಪಿಯಾದ ಭಗವತ್ಸ್ವರೂಪವನ್ನು ತಿಳಿದ ಪುರುಷರು ಭೇದಬುದ್ಧಿ ಉಂಟಾದವರಲ್ಲದೆ ಶಾಂತಗುಣಪ್ರಧಾನರಾಗಿ ಸ್ತ್ರೀ ವಿಷಯಾಸಕ್ತಿಯಿಲ್ಲದವರಾಗಿ ಸ್ತುತಿಪಾಠಕರಿಂದಲೂ ವಂಶಶಂಸಕರಿಂದಲೂ ಸ್ತೋತ್ರವಾಡಲ್ಪಡದೇ ಇರುವರು.

ಭೇದಬುದ್ಧಿಯುಳ್ಳವರು ಧರ್ಮವನ್ನು ವಾಡುವದಿಲ್ಲ. ಸುಖವನ್ನೂ ಕ್ರೋಧಭಾವವನ್ನೂ ಹೊಂದುವದಿಲ್ಲ.

ಭೇದಬುದ್ಧಿಯುಳ್ಳವರನ್ನು ಕುರಿತು ಹೇಳಲ್ಪಡುವ ಹಿತವಾಕ್ಯ ಗಳು ರುಚಿಕರವಾಗುವದಿಲ್ಲ.

ಅಭೇದಬುದ್ಧಿಯುಳ್ಳವರ ವಿಷಯಕವಾಗಿ ಉಂಟುಮಾಡುವ ಯೋಗಕ್ಷೇಮಗಳು ಸಮರ್ಥಗಳಾಗಿ ಸಫಲಗಳಾಗಲಾರವು.

ಭೇದಬುದ್ಧಿ ಉಂಟಾದ ಪುರುಷರಿಗೆ ಮರಣಕ್ಕಿಂತಾ ಎರಡನೇ ಸ್ಥಾನವಿರದು.

ಗೋವುಗಳಲ್ಲಿ ಕ್ಷೀರಗಳೂ, ಬ್ರಾಹ್ಮಣರಲ್ಲಿ ತಪಸ್ಸೂ, ಸ್ತ್ರೀಯು ರಲ್ಲಿ ಚಾಪಲ್ಯವೂ, ಜ್ಞಾತಿಗಳಿಂದ ಭಯವೂ ಉಂಟೆಂದುಹಿಸತಕ್ಕದ್ದು.

ಯಾಕಂದರೆ ಪಾಂಡವರು ಕುಲಕ್ಕಂತು ಭೂತವಾದವರು ನಿನ್ನಿಂದ ಪ್ರವರ್ಧಮಾನ ಮಾಡಲ್ಪಟ್ಟವರು ಅನೇಕ ಸಂವತ್ಸರಗಳ ಪರಿಯಂತರ ಬಹು ಜನ ಸಂರಕ್ಷಣೆಮಾಡಿ, ಅರಣ್ಯದಲ್ಲಿ ಆಯಾಸಗ ಳನ್ನು ಸತ್ಪುರುಷರ ಹಾಗೆ ಸಹಿಸಿದವರೂ ಆದ್ದರಿಂದ ನಿನಗೆ ಜ್ಞಾ ತಿಗಳಾದರೂ ಅವರಲ್ಲಿ ದೋಷವಿದ್ದೀತೋ ಇರದೋ ಎಂದು ತಿಳಿದು ದೋಷಗಳುಂಟಾದ ಹಾಗಾದರೆ ವಂಚನೆಮಾಡತಕ್ಕದ್ದು.

ಎರಡು ಕೊಳ್ಳಿಗಳು ಬೇರೆ ಬೇರೆ ಇದ್ದಹಾಗಾದರೆ ಹೊಗೆಯಾ ಗುವದು ಕೂಡಿದಹಾಗಾದರೆ ಪ್ರಜ್ವಲಿಸಿದಹಾಗೆ ಜ್ಞಾತಿಗಳೂ ಕೂಡಿ ದಹಾಗಾದರೆ ನಶಿಸಿಹೋಗರು.

ಬ್ರಾಹ್ಮಣರೂ, ಸ್ತ್ರೀಯರೂ, ಜ್ಞಾತಿಗಳೂ, ಗೋವುಗಳೂ, ಇವರವಿಷಯುವಾಗಿ ಶೌರ್ಯವನ್ನು ಮಾಡುವ ಪುರುಷರು ವೃಕ್ಷದ ದೆಶೆಯಿಂದ ಪಕ್ವವಾದ ಫಲಗಳು ಬಿದ್ದ ಹಾಗೆ ಬಿದ್ದು ಹೋಗುವರು.

ಮಹತ್ತರವಾದ ಒಂದು ವೃಕ್ಷವು ಬಲವತ್ತರವಾಗುವಹಾಗೆ ನಾ ಟಕೊಂಡಿರುವದಾದರೂ ತನ್ನ ಕೊಂಬೆಗಳಲ್ಲಿ ವಾಯುವಿನಿಂದ ಹೊ ಡೆಯಲ್ಪಟ್ಟು ಕ್ಷಣದಲ್ಲಿ ನಾಶವಾಗುತ್ತದೆ.

ಯಾವ ಅನೇಕ ವೃಕ್ಷಗಳು ಬಲವತ್ತರವಾಗುವ ಹಾಗೆ ನಾಟಲ್ಪಟ್ಟಂಥವಾಗುವವೊ ಅವು ಪರಸ್ಪರಾಶ್ರಯದಿಂದ ನಿರ್ಘಾತ ವಾಯು ಪ್ರಹರಣವನ್ನು ಸಹಿಸಿ ನಿಲ್ಲುವದು. ಹಿಗೆಯೇ ಅನೇಕ ಗುಣಗಳುಳ್ಳವನಾದರೂ ಒಬ್ಬ ಪುರುಷನನ್ನು ಶತ್ರುಗಳು ಜಯಿಸುವದಕ್ಕೋಸ್ಕರ ಯೋಗ್ಯನಾಗಿ ತಿಳಿಯುತ್ತಾರೆ.

ಜ್ಞಾತಿಗಳಾದವರು ಪರಸ್ಪರ ಅನ್ಯೋನ್ಯವನ್ನು ಹೊಂದಿ ಅನ್ಯೋನ್ಯ ಸೈನ್ಯಗಳಿಂದ ಯುಕ್ತರಾಗಿ ಸರಸಿನಲ್ಲಿರುವ ನೈದಲೆಗಳ ಹಾಗೆ ದಿನೇದಿನೇ ಪ್ರವರ್ಧಮಾನರಾಗುತಾರೆ.

ಬ್ರಾಹ್ಮಣರೂ, ಗೋವುಗಳೂ, ಜ್ಞಾತಿಗಳೂ, ಶಿಶುವುಗಳೂ ಸ್ತ್ರಿಯರೂ ಯಾರ ಧನವನ್ನು ಯಾರು ಅನುಭವಿಸುವರೋ ಆ ದ್ರವ್ಯದಿಂದ ಅನುಭವಮಾಡಿಸುವವರೂ ಶರಣಾಗತರೂ ಇವರು ವಧಾರ್ಹರಲ್ಲ.

ಎಲೈ! ಅರಸೇ, ಧನವಂತರಿಗೆ ಆತುರವಿಲ್ಲದೇ ಹೋಗುವದೇ ಸುಖಸಂಪಾದಕ ಹೊರ್ತು ಎರಡನೆ ಗುಣ ಸುಖಸಂಪಾದಕವಾಗುವದಿಲ್ಲ. ಈ ಪ್ರಕಾರ ಆತುರವುಳ್ಳವರು ರೋಗಿಷ್ಟರಾಗಿ ಮೃತರಾಗುವರೇ ಸರೀ.

ಎಲೈ! ಮಹಾರಾಯನೇ, ವ್ಯಾಧಿಯಿಂದ ಹುಟ್ಟದಂಥ ರುಚಿಕರವಾಗದಂಥ ಶಿರೋರೋಗಸಂಪಾದಕವಾದ, ಕಠಿಣವಾದ, ಕ್ರೂರವಾದ, ದಾಹಕವಾದ ಸತ್ಪುರುಷರಿಗೆ ಪಾನಯೋಗ್ಯವಾದಂಥ ಯಾವ ಕೋಪವುಂಟೋ ಆ ಕೋಪವನ್ನು ದುಷ್ಟರು ಪಾನಾಮಾಡರು. ಆದಕಾರಣ ನೀನು ನಿಗ್ರಹಿಸಿಕೊಂಡು ಶಾಂತಿಯನ್ನು ಹೊಂದು.

ರೋಗದಿಂದ ಪೀಡಿತರಾದ ಜನರು ಫಲಗಳಲ್ಲಿ ವಿಶ್ವಾಸವಿಲ್ಲದೆ ವಿಷಯಗಳಲ್ಲಿ ಅಪೇಕ್ಷೆಯಿಲ್ಲದೆ ದುಃಖದಿಂದ ಯುಕ್ತರಾಗಿ ಸೌಖ್ಯವನ್ನು ಹ್ಯಾಗೆ ತಿಳಿಯರೋ ಅದೇಪ್ರಕಾರ ಧನಲೋಭದಿಂದ ಸೌಖ್ಯವನ್ನು ಪುರುಷರು ತಿಳಿಯರು.

ಎಲೈ! ಅರಸೇ, ದ್ಯೂತದದಲ್ಲಿ ದ್ರೌಪದಿಯನ್ನು ಜಯಿಸುವ ದುರ್ಯೋಧನನನ್ನು ಅಂಗೀಕರಿಸು ಎಂಬುವ ಹಾಗೆ ನನ್ನಿಂದ ಹೇಳಲ್ಪಟ್ಟವನಾದರೂ ನೀನು ಅಂಗೀಕರಿಸದೆ ಹೋದಿ. ಪಂಡಿತರಾದವರು ಅಕ್ಷದ್ಯೂತವನ್ನು ವರ್ಜಿಸುತ್ತಾರೆ.

ಮೃದುಗುಣವುಳ್ಳವನ ಸಂಗಡ ವಿರೋಧಮಾಡುವ ಬಲವು ಬಲವಲ್ಲ. ದಾಯವಿಭಾಗವು ಸೂಕ್ಷ್ಮವಾದದ್ದು. ಆದಕಾರಣ ಬುದ್ಧಿಯಿಂದ ತಿಳಿಯ ತಕ್ಕದ್ದು. ಕ್ರೂರ ಬುದ್ಧಿಯುಳ್ಳವನಲ್ಲಿಡಲ್ಪಟ್ಟ ಸಂಪತ್ತು ಕೃಶವಾಗುವದು. ಮೃದು ಸ್ವಭಾವವುಳ್ಳವನಲ್ಲಿಡಲ್ಪಟ್ಟ ಸಂಪತ್ತು ಪುತ್ರಪೌತ್ರ ಪರಿಯಂತರ ಹೊಂದುತ್ತಿದೆ.

---

## ಐದನೆ ಅಧ್ಯಾಯ.

ಎಲೈ ಅರಸೇ, ಪೂರ್ವದಲ್ಲಿ ಮನು ಚಕ್ರವರ್ತಿಯು ಆಕಾಶವನ್ನು ಮುಷ್ಟಿಯಿಂದ ಹೊಡಿಯುವಂಥ ಇಂದ್ರಧನುಸ್ಸನ್ನು ಬೊಗ್ಗಿಸುವಂಥ ಸೂರ್ಯಕಿರಣಗಳನ್ನು ಕೈಯಿಂದ ಹಿಡಿಯಲಿಚ್ಛೈಸುವಂಥ ೧೭ ಜನರನ್ನು ಹೇಳಿದ್ದಾನೆ. ಅವರು ಯಾರೆಂದರೆ:—ಶಿಷ್ಯನಲ್ಲದವನನ್ನು ಶಿಕ್ಷಿಸುವವನೂ ಸಲ್ಪ ಪ್ರಯೋಜನದಿಂದ ಸಂತೋಷಿಸುವ ಅರಸೂ, ತನನ್ನು ದ್ವೇಷಿಸುವವನನ್ನು ಕೇವಲವಾಗಿ ಸೇವಿಸುವವನೂ, ಸ್ತ್ರೀಯರನು ರಕ್ಷಿಸಯಿಚ್ಛೈಸವವನೂ, ಲೋಭಿಯನ್ನು ಯಾಚಿಸುವವನೂ, ದ್ರವ್ಯವಿಲ್ಲದವನನ್ನು ಯಾಚಿಸುವವನೂ, ಸತ್ಕುಲಪ್ರಸೂತನಾಗಿ ದುಸ್ಕಾರ್ಯವನ್ನು ಮಾಡುವವನೂ, ಬಲವಂತನ ಸಂಗಡ ನಿತ್ಯವೂ ವೈರಮಾಡುವವನೂ, ವಿಶ್ವಾಸವಿಲ್ಲದವನನ್ನು ಕುರಿತು ಮಾತುಗಳನು ಹೇಳುವವನೂ, ತಾ ಅಪೇಕ್ಷಿಸುವದಕ್ಕೆ ಅಶಕ್ಯವಾದ ವಸ್ತುವಿನನು ಅಪೇಕ್ಷಿಸುವವನೂ, ಸೊಸೆಯ ಸಂಗಡ ಹಾಸ್ಯಮಾಡು

ವವನೂ, ಸೊಸೆಗೆ ತಂದೆಯಾದವನಿಂದ ತಾನು ಪ್ರಬಲೋಪದ್ರಗಳಿಂದ ಬಿಡಿಸಲ್ಪವನಾದೆನೆಂದು ಸೊಸೆಗೆ ಭಯವಿಡದೆ ಉಪಚಾರಮಾಡುತ್ತಾ ಬರುವವನೂ ಸೊಸೆಯ ಸಂಗಡ ತಾನು ರತಿಮಾಡಿ ಎಲ್ಲಾ ಸನ್ಮಾನಗಳನ್ನು ಕೋರುವವನೂ, ಎರಡನೇಯವರ ಕ್ಷೇತ್ರದಲ್ಲಿ ಬೀಜವನ್ನು ಬಿತ್ತಿ ಆ ಕ್ಷೇತ್ರವನ್ನು ಗ್ರಹಿಸಬೇಕೆಂದು ಇಚ್ಛೈಸುವವನೂ, ಕೇವಲ ಸ್ತ್ರೀಯರೊಡನೆ ಸಂಭಾಷಣೆಮಾಡುವವನೂ, ಪುರುಷನ ಮುಖಾಂತರವಾಗಿ ತಾನು ಮಹತ್ತರವಾದ ಸಂಪತ್ತನ್ನು ಹೊಂದಿ ಆನಂತರದಲ್ಲಿ ಆ ಪುರುಷನಿಂದ ತಾನು ಹೊಂದಿದಂಥಾ ಸಂಪತ್ತನ್ನು ಸ್ಮರಿಸದೇ ಇರುವವನೂ, ವಾಗ್ದಾನಮಾಡಿ ಅನಂತರದಲ್ಲಿ ವಾಗ್ದಾನ ಮಾಡಲಿಲ್ಲವೆಂದು ಯೋಚಿಸುವವನನ್ನು ನಿಗ್ರಹಿಸುವವನೂ, ದುಷ್ಟನಿಂದ ಸಾದುತ್ವವನ್ನು ಸಂಗ್ರಹಿಸುವಂಥವನೂ ಈ ೧೭ ಜನರನ್ನು ಯಮಭಟರು ಪಾಶಗಳಿಂದ ಕಟ್ಟಿ ನರಕವನ್ನು ಹೊಂದಿಸುವರು.

ಮಾಯಾವಿಯಾದ ಪುರುಷವಿಷಯಕವಾಗಿ ಮಾಯಮಾಡತಕದ್ದು. ಸದಾಚಾರಸಂಪನ್ನರ ವಿಷಯಕವಾಗಿ ಸತ್ಯವಾಗಿರತಕ್ಕದ್ದು. ಆದಕಾರಣ ಸತ್ಯವಂತರಾದ ಪಾಂಡವರ ವಿಷಯಕವಾಗಿ ನೀನು ಸತ್ಯವಂತನಾಗತಕ್ಕದ್ದು.

ವಾರ್ಧಿಕ್ಯವು ರೂಪವನ್ನೂ, ಆಶೆ ಧೈರ್ಯವನ್ನೂ, ಮೃತ್ಯುವು ಪ್ರಾಣಗಳನ್ನೂ, ಅಸೂಯೆ ಧರ್ಮಚರ್ಯವನ್ನೂ, ತೋರಿಕೆ ಲಜ್ಜೆಯನ್ನೂ, ದುಷ್ಟಜನಸೇವೆ ಸದ್ವೃತ್ತಿಯನ್ನೂ, ಕೋಪ ಸಂಪತ್ತನ್ನೂ, ಅಹಂಕಾರ ಸಮಸ್ತವನ್ನೂ, ಹೋಗಲಾಡಿಸುತ್ತದೆ.

ಅಹಂಕಾರ, ಅತಿಭಾಷೆ, ಸತ್ಪಾತ್ರದಲ್ಲಿ ತ್ಯಾಗಮಾಡ ಹೋಗುವದೂ, ಕ್ರೋಧವು ಶಿಶ್ನೋದರಪರಾಯಣನಾಗಿರುವದೂ, ಮಿತ್ರದ್ರೋಹವೂ, ಈ ಆರೂ ಕ್ರೂರವಾದಖಡ್ಗಗಳಾಗಿ ದೇಹಧಾರಿಗಳಾದವರ

ಆಯುಃಪುತ್ರಗಳನ್ನೂ ಕತ್ತರಿಸುತ್ತಿರುತ್ತದೆ. ಈ ಆರು ದುರ್ಗುಣಗಳ ತ್ಯಾಗದಿಂದ ನಿನ್ನ ಮಕ್ಕಳಿಗೆ ಸುಖವುಂಟಾಗಲಿ.

ಮಿತ್ರನ ಹೆಂಡತಿಯನ್ನು ಅಪಹರಿಸಿದವನೂ, ಗುರುತಲ್ಪಾಪಹಾರಮಾಡಿದವನೂ, ಶೂದ್ರ ಸ್ತ್ರೀ ಸಂಗಮಾಡಿದ ಬ್ರಾಹ್ಮಣನೂ, ಮದ್ಯಪಾನವನ್ನು ಮಾಡಿದ ಬ್ರಾಹ್ಮಣನೂ. ಗ್ರಾಮಣ್ಯತ್ವಮಾಡಿದವನೂ, ಜೀವನಗಳನ್ನು ಕೀಳುವವನೂ, ಬ್ರಾಹ್ಮಣರಿಂದ ಶೇವೆಮಾಡಿಸಿಕೊಳ್ಳುವವನೂ, ಶರಣಾಗತನಾಶಕನೂ, ಇವರೆಲ್ಲಾ ಬ್ರಹ್ಮಹತ್ಯಮಾಡಿದವರ ಸಂಗಡ ಸಮರು. ಆದಕಾರಣ ಇವರ ಸಂಗವುಂಟಾದರಾಗ ಪ್ರಾಯಶ್ಚಿತ್ತಮಾಡಿಕೊಳ್ಳತಕ್ಕದ್ದು.

ಎರಡನೇಯವರು ಹೇಳುವಂಥ ಮಾತುಗಳನ್ನು ಗ್ರಹಿಸಿ ವಿದ್ಯಾವಂತನಾಗುವಂಥವನೂ, ನೀತಿಯನ್ನು ತಿಳಿದಂಥವನೂ, ತನ್ನನ್ನು ಯಾಚಿಸುವಂಥ ಪುರುಷನನ್ನು ಎರಡನೇಯವರ ಸಮೀಪಕ್ಕೆ ಹೋಗೆಂದು ಹೇಳದವನೂ, ದೇವ ಪಿತೃವಿನಿಯೋಗವಾಗಿ ಮಿಕ್ಕಅನ್ನವನ್ನು ಭೋಜನಮಾಡುವವನೂ, ಹಿಂಸೆಮಾಡದವನೂ. ವ್ಯರ್ಥವಾದ ಕೆಲಸಗಳನ್ನು ಮಾಡದವನೂ. ಕಲಹವನ್ನು ತ್ಯಾಗಮಾಡಿದವನೂ, ಉಪಕಾರವನ್ನು ಸ್ಮರಿಸುವಂಥವನೂ, ಸತ್ಯವಾಕ್ಯಗಳುಳ್ಳಂಥವನೂ, ಮೃದುಗುಣವುಳ್ಳಂಥವನೂ ಇವರೇ ಸ್ವರ್ಗವನ್ನು ಹೊಂದುವರು.

ನಿರಂತರವೂ ಪ್ರಿಯೋಕ್ತಿಗಳನ್ನು ಹೇಳುವಂಥ ಪುರುಷರು ಯುಕ್ತವಾದ ಮಾತುಗಳನ್ನು ಗ್ರಹಿಸೋವಿಷಯದಲ್ಲಿ ಸುಲಭರು ಸತ್ಯವಾದ ಮಾತುಗಳಲ್ಲಿ ವಿಶ್ವಾಸವಿಲ್ಲದಂಥ ಪುರುಷರಿಗೆ ಹೇಳುವಂಥವನೂ ಆ ಮಾತುಗಳನ್ನು ಕೇಳುವಂಥವನೂ ದುರ್ಲಭನು.

ಯಾವ ಪುರುಷನು ಧರ್ಮವನ್ನು ಆಶ್ರಯಿಸಿ ತನಗೆ ಅಧಿಪತಿಯಾದಂಥವನು ಪ್ರಿಯಾಪ್ರಿಯಗಳನ್ನು ಎಣಿಸದೆ ಉತ್ತರೋತ್ತರ

ಶುಭಸಂಪಾದಕಗಳಾದ ಪ್ರಿಯೋಕ್ತಿಗಳನ್ನು ಹೇಳುವನೊ ಆ ಪುರುಷನಿಂದ ಆ ಅಧಿಪತಿಸಹಾಯವಂತನು.

ಒಂದು ಕುಲ ಸಂರಕ್ಷಣಾರ್ಥವಾಗಿ ಒಬ್ಬನ್ನ ತ್ಯಾಗಮಾಡುವದೂ, ಒಂದು ಗ್ರಾಮ ಸಂರಕ್ಷಣಾರ್ಥವಾಗಿ ಒಂದು ಕುಲವನ್ನು ತ್ಯಾಗಮಾಡುವದೂ, ಒಂದು ದೇಶಸಂರಕ್ಷಣಾರ್ಥವಾಗಿ ಒಂದು ಗ್ರಾಮವನ್ನು ತ್ಯಾಗಮಾಡಬಹುದು. ಆತ್ಮಸಂರಕ್ಷಣಾರ್ಥವಾಗಿ ಈ ಸಮಸ್ತ ಭೂಮಿಯನ್ನೂ ತ್ಯಾಗಮಾಡಬಹುದು.

ಆಪತ್ತು ಪರಿಹಾರಾರ್ಥವಾಗಿ ಧನವನ್ನು ರಕ್ಷಿಸಬೇಕು. ಧನದಿಂದ ಹೆಂಡತಿಯನ್ನು ರಕ್ಷಿಸಬೇಕು. ಹೆಂಡತಿಯಿಂದಲೂ ಧನದಿಂದಲೂ ತನ್ನ ಶರೀರವನ್ನು ಸಂರಕ್ಷಣೆಮಾಡಬೇಕು.

ಈ ದ್ಯೂತವು ಪೂರ್ವೀಕರಿಂದ ವೈರಸಂಪಾದಕವಾದಂಥಾದ್ದಾಗಿ ನೋಡಲ್ಪಟ್ಟದೆ. ಆದಕಾರಣ ಬುದ್ಧಿಶಾಲಿಯಾದಂಥವನು ಪರಿಹಾಸಾರ್ಥವಾಗ್ಯಾದರೂ ದ್ಯೂತವನ್ನು ಸೇವಿಸಬಾರದು.

ಎಲೈ! ಧೃತರಾಷ್ಟ್ರನೇ, ಈ ಪ್ರತೀಪ ವಂಶದಲ್ಲಿ ರೂಢಿಯಾದ ದ್ಯೂತವು ಯೋಗ್ಯವಾದದ್ದಲ್ಲವೆಂದು ಈ ದ್ಯೂತಾಧಿಕಾರದಲ್ಲಿಯೇ ನನ್ನಿಂದ ಹೇಳಲ್ಪಟ್ಟಂಥಾದ್ದಾದರೂ ಪಥ್ಯವಾದ ವಸ್ತುವು ರೋಗಿಗೆ ಹಿತವಾಗದ ಹಾಗೆಯೆ ನಿನಗೆ ರುಚಿಸದೆ ಹೋಯಿತು.

ವಿಚಿತ್ರವಾದ ಪಿಂಛಗಳುಳ್ಳ ನವಿಲುಗಳಂಥ ಪಾಂಡವರನ್ನು ಕಾಗೆಗಳಂಥ ನಿನ್ನ ಮಕ್ಕಳಿಂದ ಜಯಿಸುವದಕ್ಕೆ ಇಚ್ಛಿಸುತ್ತ ಇದ್ದೀ. ಸಿಂಹ್ಮಗಳಂಥ ಪಾಂಡವರನ್ನು ತ್ಯಾಗಮಾಡಿ ನರಿಗಳನ್ನು ಸಂರಕ್ಷಣೆಮಾಡುತ್ತ ಕಾಲ ಪ್ರಾಪ್ತಿಯಾದಾಗ ರೋದನವನ್ನು ಮಾಡುವಿ.

ಎಲೈ! ಅರಸನೇ, ಯಾವ ಪುರುಷನು ತನ್ನಲ್ಲಿ ಭಕ್ತನಾಗಿ ಹಿತಚಿಂತಕನಾದ ಭೃತ್ಯನವಿಷಯವಾಗಿ ಯಾವನು ಕೋಪವನ್ನು ಮಾ

ಡನೊ ಆ ಭೃತ್ಯರಗಳ ಜೀವನವನ್ನು ಅಭ್ಯಂತರಸಿ ಧನವನ್ನು ಸಂಪಾದಿಸ ಇಚ್ಛಿಸಬಾರದು. ಯಾಕಂದರೆ ಈ ಧೊರೆಯಿಂದ ವಂಚಿಸಲ್ಪಟ್ಟ ಆ ಭೃತ್ಯರು ಅರಸಿನಲ್ಲಿ ವಿರೋಧಿಗಳಾಗಿ ಅರಸಿನದೆಶೆಯಿಂದ ಹೀನ ಭೋಗವುಂಟಾದವರಾಗಿ ಆ ಭೃತ್ಯರೂ ಮಂತ್ರಿಗಳೂ ಅರಸನನ್ನು ತ್ಯಾಗಮಾಡುವರು.

ಅರಸನು ತಾನು ಮಾಡುವಂಥ ಕಾರ್ಯಗಳ ಲೆಖ್ಖವನ್ನು ಮಾಡಿ ತನಗೆ ಸಂಭವಿಸುವಂಥ ಆದಾಯವ್ಯಯಗಳನ್ನು ತನ್ನ ಕುಲೋಚಿತವಾದ ಜೀವನಗಳನ್ನೂ ನೋಡಿ ತನಗೆ ಯೋಗ್ಯರಾದ ಸಹಾಯಜನರನ್ನು ಸಂಗ್ರಹಿಸತಕ್ಕದ್ದು. ಅ ಸಹಾಯಜನರಗಳಿಂದ ಮಾಡದ ಕಾರ್ಯಗಳನ್ನು ಮಾಡುವದಕ್ಕೆ ಸಮರ್ಥರಾಗುವರು.

ಅರಸನ ಅಭಿಪ್ರಾಯ ತಿಳಿದು ಸಮಸ್ತ ಕಾರ್ಯಗಳನ್ನು ತೊಂದರೆ ಬೀಳದ ಹಾಗೆ ಮಾಡುತ್ತಾ ತನಗೆ ಹಿತವನ್ನು ಹೇಳುತ್ತಾ ತನ್ನಲ್ಲಿ ಅನುರಾಗವುಂಟಾದವನಾಗಿ ತನ್ನ ಶಕ್ತಿಯನ್ನು ತಿಳದಂಥ ಪೂಜ್ಯನು ತನ್ನ ದೇಹಕ್ಕೆ ಸಮಾನನಾಗಿ ದಯಮಾಡತಕ್ಕಂಥವನು. ತ್ವರೆಬೀಳದವನು ಅಪ್ರತ್ಯಕ್ಷವಾಗಿ ಶಕುನ ಹೇಳುವವನನ್ನು ವೃಥಾಲೋಚನೆ ಮಾಡುವ ಮಂತ್ರಿಯನ್ನು ಆಪ್ತರಾದ ಸ್ವಜನಗಳಿಲ್ಲದವನನ್ನು ಗರ್ವಿಷ್ಟನನ್ನೂ, ನಿರಂತರವೂ ರೋಗಿಷ್ಟನಾದವನನ್ನೂ, ಪ್ರತ್ಯುತ್ತರವನ್ನು ಯುಕ್ತವಾಗಿ ಹೇಳದವನನ್ನೂ ಈ ಏಳು ವಿಧದಸೇವಕರನ್ನು ತ್ಯಾಗಮಾಡಬೇಕು.

ತನ್ನಿಂದ ಆಜ್ಞಾಪಿಸಲ್ಪಟ್ಟವನಾಗಿ ಆ ಆಜ್ಞೆಯನ್ನು ಅದರಿಂದವನು ಆಜ್ಞಾಪಿಸಲ್ಪಟ್ಟವನಾಗಿ ಕಾರ್ಯ ವಿಘಟನಾರ್ಥವಾಗಿ ಪ್ರತ್ಯುತ್ತರವನ್ನು ಹೇಳುವವನೂ ತಾನೇ ಪ್ರಜ್ಞಾಶಾಲಿಯೆಂದು ಅಹಂಕಾರವುಳ್ಳವನೂ, ತಿರಸ್ಕಾರಮಾಡುವವನೂ, ಇಂಥ ಭೃತ್ಯರನ್ನು ತ್ಯಾಗಮಾಡಬೇಕು.

ಗರ್ವವಿಲ್ಲದೆ ತೊಂದರೆ ಬೀಳದೆ ಚಿರಕ್ರಿಯನಾಗದೆ ದಯಾಶಾಲಿಯಾಗಿ ಕಠಿಣನಾಗದೆ ಎರಡನೇಯವರಿಂದ ಭೇದಿಸಲ್ಪಟ್ಟವನಾಗದೆ ರೋಗ ಹಿತನಾಗಿ ಉತ್ಕೃಷ್ಟ ವಾಕ್ಯಗಳುಳ್ಳವನಾಗಿರೋಣ ಎಂಬ ಈ ಎಂಟು ಗುಣಗಳುಳ್ಳವನನ್ನು ದೂತನೆಂದೆಂಬುವರು.

ಶತ್ರುವಿನ ಮನೆಯನ್ನು ಕುರಿತು ಬಂದಾನೊಂದು ಕಾಲದಲ್ಲಾದರೂ ಸಾಯಂಕಾಲದಲ್ಲಿ ತಾನು ಹೋಗಲೇಬಾರದು. ತ್ವರೆಯುಕ್ತನಾಗಬಾರದು. ರಾತ್ರಿವೇಳೆಯಲ್ಲಿ ಗೋಪ್ಯವಾಗಿರಬಾರದು. ರಾಜ ಕನ್ನಿಕೆಯನ್ನು ಪರರ ಯುವ್ವನಸ್ತ್ರೀಯರನ್ನು ಪ್ರಾರ್ಥಿಸಬಾರದು.

ದುಷ್ಟಜನರಕೂಡ ದುಷ್ಟನು ಆಲೋಚನೆಮಾಡುವ ಕಾಲದಲ್ಲಿ ಅವರ ಆಲೋಚನೆಗೆ ವಿಘ್ನಕರವಾದ ಮಾತನ್ನು ತಾನು ಆಡಬಾರದು. ಇತಃಪರ ನಿನ್ನ ಸಮೀಪದಲ್ಲಿ ಇರುವದಿಲ್ಲವೆಂದು ತಾನು ಹೇಳದೆ ವ್ಯಾಜಾಂತರದಿಂದ ಅವನ ಸಹವಾಸವನ್ನು ತಪ್ಪಿಸಿಕೊಳ್ಳತಕ್ಕದು.

ದಯಾಶಾಲಿಯಾದ ಅರಸು, ವ್ಯಭಿಚಾರ ಸ್ತ್ರೀಯು, ರಾಜಭೃತ್ಯನು, ತನ್ನ ಮಗನು, ತನ್ನ ತಮ್ಮನು, ಚಿಕ್ಕಮಗವುಳ್ಳ ಬಾಲವಿಧವೆಯು, ಸೇನೆಯನ್ನು ಉಪಸರ್ಪಣೇಮಾಡಿ ಜೀವನಾ ಮಾಡುವವರು, ನಷ್ಟ ಐಶ್ವರ್ಯ ಇವುಗಳೆನ್ನು ನ್ಯಾಯ ವಿಮರ್ಶೆ ಕಾಲದಲ್ಲಿ ವರ್ಜಿಸತಕ್ಕವರು.

ಎಂಟು ಗುಣಗಳು ಪುರುಷನನ್ನು ಪ್ರಕಾಶಮಾಡುವವು ಅವು ಯಾವವೆಂದರೆ:—ಪ್ರಜ್ಞಾಸಕ್ತಿ, ಶಾಸ್ತ್ರಾಧ್ಯಯನ, ಮನೋನಿಗ್ರಹ, ಪರಾಕ್ರಮವು, ಶಕ್ತ್ಯಾನುಸಾರವಾಗಿ ದಾನಮಾಡುವದೂ, ಕೃತೋಪಕಾರ ಸ್ಮರಣೆಯು.

ಎಲೈ ಮಹಾಪ್ರಭಾವವುಳ್ಳವನೇ, ಈ ಎಂಟು ಗುಣಗಳನ್ನು ರಾಜಸತ್ಕಾರವೆಂಬ ಗುಣವು ಪ್ರಕಾಶಮಾಡುತ್ತದೆ.

ಸ್ಥಿರಸ್ವಭಾವವುಳ್ಳ ಪುರುಷನನ್ನು ಹತ್ತು ಗುಣಗಳು ಹೊಂದು ವವು. ಅವು ಯಾವವೆಂದರೆ:—ಬಲ, ರೂಪ, ಸುಸ್ವರಮಿತವಾದ ಪರಿಶುದ್ಧಾಕ್ಷರಗಳುಳ್ಳ ವಾಕ್ಯ, ಮೃದುವಾದ ಗುಣವು, ದೇಹಪ್ರಕಾಶವೂ, ಸುಗಂಧವು, ಪರಿಶುದ್ಧತ್ವವು, ಸುಕುಮಾರಭಾವವು, ಶ್ರೇಷ್ಠರಾದ ಸ್ತ್ರೀಯರುಂಟಾಗೋಣವು, ಇವೇ ಹತ್ತು ಗುಣಗಳು ಮಿತಭುಕ್ತನಾದ ಪುರುಷನನ್ನು ಹೊಂದುತ್ತವೆ. ಯಾಕಂದರೆ ಆರೋಗ್ಯವೂ, ಆಯುರ್ವೃದ್ಧಿಯೂ, ಬಲವೂ, ಸುಖವೂ, ತೇಜೋವೃದ್ಧಿಯೂ, ಬುದ್ಧಿಸಾಮರ್ಥ್ಯವೂ, ಇವು ಉಂಟಾದವನಿಗೆ ಪುತ್ರರುಂಟಾಗುವರು. ಇವನನ್ನು ಬಹುಭೋಕ್ತನೆಂದು ಹೇಳರು.

ಕೆಲಸಗಳು ಮಾಡುವದರಲ್ಲಿ ಸತ್ವವಿಲ್ಲದವನನ್ನು ಬಹುಭೋಕ್ತನಾದವನನ್ನು, ಜನವಿರೋಧಿಯನ್ನು, ಬಹುಮಾಯೆಗಳುಳ್ಳವನನ್ನೂ, ಘಾತಕನನ್ನೂ, ದೇಶಕಾಲಗಳು ತಿಳಿಯದವನನ್ನೂ: ಆರೋಗ್ಯವಾದ ವೇಷಗಳನ್ನು ಧರಿಸಿಕೊಳ್ಳುವವನನ್ನೂ, ಇಂಥವರನ್ನು ಮನೆಯಲ್ಲಿರಸಬಾರದು. ದಾತೃತ್ವವಿಲ್ಲದವನನ್ನೂ, ಕ್ರೋಧಪೂರ್ವಕವಾಗಿ ಆಲಾಪಿಸುವಂಥವನನ್ನೂ, ಬಹುಶ್ರುತನಾಗದೆ ಮೂರ್ಖನಾದವನನ್ನೂ, ಅರಣ್ಯದಲ್ಲಿ ವಾಸಮಾಡಿಕೊಂಡಿರುವವನನ್ನೂ, ವಂಚಕನನ್ನೂ, ಪೂಜ್ಯರಿಗೆ ಪೂಜೆಮಾಡದವನನ್ನೂ, ನಿಷ್ಠೂರಮಾಡುವವನನ್ನೂ, ವೈರಮಾಡುವವನನ್ನೂ, ಮಾಡಿದಸತ್ಕಾರವನ್ನು ಸ್ಮರಿಸದವನನ್ನೂ, ಇವರನ್ನು ತಾನು ಸಂಸಾರದಲ್ಲಿ ಬಹಳ ಕಷ್ಟಪಟ್ಟಂಥವನಾದರೂ, ಬಂದಾನೊಂದು ಕಾಲದಲ್ಯಾದರೂ, ಯೋಚನೆಮಾಡಬಾರದು.

ಮನಿಗೆ ಬೆಂಕೆಯಿಡುವಂಥವನೂ, ವಿಷಯಿಡುವಂಥನೂ, ನಿರ್ನಿಮಿತ್ಯ ಅನ್ಯಾಯಾಸಕ್ತನಾಗಿ ಖಡ್ಗಪಾಣಿಯಾದವನೂ, ಪರದ್ರವ್ಯಾಪಹಾರ ಮಾಡುವವನೂ, ಪರಕ್ಷೇತ್ರಾಪಹಾರ ಮಾಡುವವನೂ, ಪರದಾರಾಪಹಾರ ಮಾಡುವವನೂ, ಈ ಆರು ಜನರು ಆತತಾಯಿಗಳಾ

ದ್ದರಿಂದ, ಇಂಥಾ ಆತತಾಯಿಯನ್ನೂ ನಿರಂತರವು ತೊಂದರೆಬೀಳು ವಂಥ ಮನಸ್ಸುಳ್ಳಂಥವನನ್ನೂ, ನಿರಂತರವು ಅನೃತ ಹೇಳುವಂಥ ವನನ್ನೂ, ಧೃಢಭಕ್ತಿಯಿಲ್ಲದವನನ್ನೂ, ಅನುರಾಗಶೂನ್ಯನನ್ನೂ, ಅತ್ಯಹಂಕಾರಿಯನ್ನೂ ಈ ಆರು ಜನ ನರಾಧಮರನ್ನು ಶೇರಿಸಬಾರದು.

ಸಹಾಯ ಸಂಪತ್ತುಗಳಿಂದ ದ್ರವ್ಯಗಳು ಕಟ್ಟಲ್ಪಡುವಂಥವು; ದ್ರವ್ಯಗಳಿಂದ ಸಹಾಯಗಳು ಕಟ್ಟಲ್ಪಡುವಂಥವು. ಈ ಎರಡರಲ್ಲಿ ಒಂದೂ ಇಲ್ಲದೆ ಹೋದರೆ ಮತ್ತೊಂದು ಸಿದ್ಧಿಸದು.

ಪುರುಷನಾದವನು ಪುತ್ರರನ್ನು ಉಂಟುಮಾಡಿಕೊಂಡು ಆ ಸುಪುತ್ರನ್ನು ದೇವಋಷಿಪಿತೃರುಣಗಳದೆಶೆಯಿಂದ ಅವಿಮುಕ್ತರನ್ನು ಮಾಡಿ ಆ ಪುತ್ರರಿಗೆ ಕೆಲವು ಜೀವನೋಪಾಯವನ್ನುಂಟುಮಾಡಿ ತ ನಗೆ ಉಂಟಾದ ಪುತ್ರಿಯರನ್ನು ಸತ್ಪಾತ್ರದಲ್ಲಿ ದಾನಮಾಡಿ ಅನಂ ತರದಲ್ಲಿ ವಾನಪ್ರಸ್ಥಾಶ್ರಮವನ್ನು ಮಾಡಿಕೊಂಡು ಮಾಸವ್ರತವುಳ್ಳ ನಾಗಿ ಪರಮಾತ್ಮನನ್ನು ತಿಳಿಯತಕ್ಕದ್ದು.

ಯಾವ ಕೆಲಸ ಸಮಸ್ತಭೂತಗಳಿಗೂ ತನಗೂ ಹಿತಕರವಾಗಿ ಸುಖಸಂಪಾದಿತನಾಗುವದೋ ಆ ಕೆಲಸವನ್ನು ಯಜಮಾನನು ಮಾ ಡಬೇಕು. ಆ ಕೆಲಸಮಾಗುವದು ಧರ್ಮಾರ್ಥ ಸಿದ್ಧಿಗೋಸ್ಕರ ಕಾ ರಣವಾಗುತ್ತದೆ.

ಪುತ್ರಸಂಗ್ರಹ ಬುದ್ಧಿ ಶತ್ರುಪರಾಜಯ ಪ್ರಭಾವವು ಜಾಗ್ರತೆ ಯ ಕಾರ್ಯಕರಣದಲ್ಲಿಉದ್ಯುಕ್ತನಾಗುವದು ಕೃಷಿಯು ಯಾವನಿಗೆ ಉಂಟಾಗುವದೋ ಅವನಿಗೆ ಜೀವನವಿಲ್ಲದೆಂಬುವ ಭಯ ಹ್ಯಾಗಾ ದೀತು? ಪಾಂಡವರೊಡನೆ ವಿರೋಧದಲ್ಲಿ ಉಂಟಾಗುವ ದೋಷಗಳ ನ್ನು ನೀನೇ ನೋಡು. ಈ ಪಾಂಡವರ ಸಂಗಡ ನಿನಗೆ ಉಂಟಾ ಗುವ ವೈರದಲ್ಲಿ ಇಂದ್ರಾದಿ ದೇವತೆಗಳೆಲ್ಲ ವ್ಯಥೆಯುಕ್ತರಾಗಿದ್ದಾರೆ.

ನಿನಗೆ ಪಾಂಡವರ ಸಂಗಡ ಉಂಟಾದ ವೈರದಿಂದ ಭಯದ ಸಂಗಡ ಶೇರಿದ ಇರುವಿಕೆಯಾಗಿಯೂ, ಯಶೋನಾಶವಾಗಿಯೂ, ಶತ್ರುಗಳಿಗೆ ಹರ್ಷವಾಗಿಯೂ, ಇರುವದು.

ಎಲೈ ಇಂದ್ರ ಸಮಾನವಾದವನೇ, ಭೀಷ್ಮಾಚಾರ್ಯರು ದ್ರೋಣಾಚಾರ್ಯರು ಅರಸಾದ ಧರ್ಮರಾಯ ಇವರ ಕೋಪವು ಪ್ರವರ್ಧಮಾನವಾದದ್ದಾಗಿ ತಿರ್ಯಗ್ಭೂತವಾದ ಧೂಮಕೇತುವಿನ ಹಾಗೆ ಈ ಲೋಕವನ್ನು ನಾಶಮಾಡಹೋಗುವದು.

ಆದಕಾರಣ ನಿನ್ನ ನೂರು ಜನ ಮಕ್ಕಳೂ, ಕರ್ಣನೂ, ಐದು ಜನ ಪಾಂಡವರೂ, ಸಂಪೂರ್ಣ ಭೂಮಂಡಲವನ್ನು ಪರಿಪಾಲನ ಮಾಡಲಿ. ದುರ್ಯೋಧನಾದಿಗಳು ವನದಂಥವರು, ಪಾಂಡವರು ವ್ಯಾಘ್ರದಂಥವರು. ವ್ಯಾಘ್ರದಿಂದ ಕೂಡಿದ್ದ ವನವನ್ನು ಛೇದಿಸಿ ವ್ಯಾಘ್ರಗಳಿಗೆ ಆಸ್ಪದವಿಲ್ಲದ ಹಾಗೆ ಮಾಡಿ ವ್ಯಾಘ್ರಗಳು ನಾಶವಾಗುವ ಹಾಗೆ ಮಾಡದೇ ಇರುವ ಹಾಗೆ ಕುರುಪಾಂಡವರು ಪರಸ್ಪರ ಸಹಾಯಭೂತರಾಗಿರಲಿ.

ಪಾಪಿಷ್ಠರಾದ ಶತ್ರುಗಳು ಹ್ಯಾಗೆ ಎರಡನೇಯವರ ದುರ್ಗುಣಗಳನ್ನು ತಿಳಿಯಲಿಚ್ಛೈಸುತ್ತಾರೋ ಆ ಪ್ರಕಾರ ಸುಗುಣಗಳನ್ನು ತಿಳಿಯುವದಕ್ಕೆ ಇಚ್ಛೆಯುಳ್ಳವರಾಗುವದಿಲ್ಲ.

ಕೇವಲ ಅರ್ಥ ಸಿದ್ಧಿಯನ್ನು ವೃದ್ಧಿಹೊಂದಬೇಕೆಂಬ ಪುರುಷನು ಆದಿಯಿಂದ ಧರ್ಮವನ್ನು ಮಾಡಬೇಕು. ಹ್ಯಾಗಂದರೆ ಸ್ವರ್ಗವನ್ನು ಅಮೃತವು ಅನುಸರಿಸಿರುವಹಾಗೆ ಅರ್ಥವು ಧರ್ಮವನ್ನು ಅನುಸರಿಸಿರುವದು.

ಯಾವನ ಮನಸ್ಸು ಪಾಪಲೇಶದಿಂದ ರಹಿತವಾದದ್ದಾಗಿ ಶುಭಕಾರ್ಯಗಳಲ್ಲಿ ನಿರ್ದಿಷ್ಟವಾದ್ದದೋ ಆ ಪುರುಷನಿಂದ ಕರ್ಮಕಾಂಡ ಬ್ರಮ್ಹಕಾಂಡ, ಮೊದಲಾದ ಸಮಸ್ತವೂ ತಿಳಿಯಲ್ಪಟ್ಟದೆ.

ಯಥಾಯೋಗ್ಯವಾಗಿ ಕಾಲಾತಿಕ್ರಮವಿಲ್ಲದ ಹಾಗೆ ಧರ್ಮಾರ್ಥ ಕಾಮಗಳನ್ನು ಯಾವ ಪುರುಷನು ಸೇವಿಸುವನೋ ಆ ಪುರುಷನು ಧರ್ಮಾರ್ಥಕಾಮುದನ್ಯ ಸುಖಗಳನ್ನು ಇಹಪರ ಲೋಕಗಳಲ್ಲಿ ಹೊಂದುವನು.

ತನಗೆ ಉಳ್ಳ ಕ್ರೋಧ ಹರುಷಗಳ ಅಧಿಪತ್ಯವನ್ನು ಯಾವ ಪುರುಷನು ನಿಗ್ರಹಿಸುವನೋ ಯಾವನು ಆಪತ್ಕಾಲದಲ್ಲಿ ಮೋಹ ಪಡುವನೋ ಆ ಪುರುಷರು ಸಂಪತ್ತಿಗೆಸ್ಥಾನ ಭೂತರು.

ಪುರುಷರ ಬಲವು ೫ ವಿಧಗಳಾಗಿವೆ· ಹ್ಯಾಗಂದರೆ—ಬಹುಬಲವೆಂಬುವದೂ ಕನಿಷ್ಟಬಲವು, ಮಂತ್ರಿಲಾಭವು, ಎರಡನೇದು, ಧನ ಲಾಭವೂ ಮೂರನೇದು, ಸತ್ಕುಲಪ್ರಸೂತತ್ವವೆಂಬುವದೂ ನಾಲ್ಕನೇದು, ಪ್ರಜ್ಞಾಬಲವೆಂಬುವದೂ ಐದನೇದು, ಈ ಐದೂ ಕ್ರಮವಾಗಿ ಒಂದಕ್ಕಿಂತಾ ಒಂದು ಶ್ರೇಷ್ಠವಾದದ್ದು.

ಪುರುಷನವಿಷಯುಕವಾಗಿ ಮಹತ್ತರವಾದ ಅಪಕಾರವನ್ನು ಮಾಡುವದಕ್ಕೋಸ್ಕರ ಯಾವ ಪುರುಷನು ಉದ್ಯುಕ್ತನಾಗುವನೋ ಆ ಪುರುಷನು ತನ್ನಿಂದ ಅಪಕಾರವನ್ನು ಹೊಂದಿದವನಗಿಂತಲು ತಾನು ಬಹುದೂರದಲ್ಲಿರುವವನಾವ ಕಾರಣ ಅವನ ಭಯುವು ತನಗಿಲ್ಲವೆಂದು ಜಾಗರೂಕನಾಗದೆ ಇರಬಾರದು.

ತನ್ನ ಸ್ತುತಿಯುವಾದ ಸಮಸ್ತ ಅರಸುಗಳು ಶತ್ರುಗಳನ್ನು ಸೇವಿಸುತ್ತಿರಲಾಗಿ ಪಾಜ್ಞನಾದ ಯಾವ ಪುರುಷನು ಸ್ತುತಿಯುವಾದ ಅಧ್ಯಯನದಲ್ಲೂ ಭೋಗಗಳಲ್ಲೂ ಬದುಕುವದರಲ್ಲೂ ವಿಶ್ವಾಸವನ್ನು ಮಾಡುವದಕ್ಕೋಸ್ಕರ ಸಮರ್ಥನಾಗುತ್ತಿದ್ದಾನೆ.

ಪ್ರಜ್ಞಾಶರದಿಂದ ಹೊಡೆಯಿಲ್ಪಟ್ಟಂಥ ಜಂತುವಿನನ್ನು ಬದುಕಿಸುವದಕ್ಕೆ ಚಿಕಿತ್ಸಕರು ಎಲ್ಲಾ ಔಷಧಗಳೂ,ಹೋಮಗಳೂ, ಮಂತ್ರಗಳೂ, ಶಸ್ತ್ರಗಳೂ ಅಥರ್ವಣಮಂತ್ರಗಳೂ ರೋಗನಾಶಕಗಳಾದ ಮೂಲಿಕೆಗಳೂ, ಇವು ಯಾವೂ ಸಮರ್ಥವಾಗುವದಿಲ್ಲ.

ಸರ್ಪವೂ ಯುಧಿಷ್ಠಿರನೂ, ಸಿಂಹವೂ, ಕುಲಪುತ್ರನೂ ಇವರು ವಿಶೇಷವಾಗಿ ತೇಜಸ್ಸು ಉಂಟಾದವರಾದ ಕಾರಣ ಮನುಷ್ಯರಿಂದ ಅವಮಾನಾರ್ಹರಲ್ಲ.

ಮಹತ್ತರವಾದ ಅಗ್ನಿಯು ಕಾಷ್ಠಗಳಲ್ಲಿ ಗೋಪ್ಯವಾಗಿ ಇರುವಂಥಾದ್ದಾದರೂ ಎರಡನೆಯವರಿಂದ ಉದ್ದೀಪನ ಮಾಡಲ್ಪಡದೆ, ತನಗೆ ಆಧಾರಭೂತವಾದ ಕಾಷ್ಠವನ್ನು ದಹಿಸದು ಉದ್ದೀಪನ ಮಾಡಲ್ಪಟ್ಟದ್ದಾದ ತರುವಾಯ ಆ ಕಾಷ್ಠವನ್ನೂ ವನವನ್ನೂ ಮತ್ತು ಕೆಲವು ಪದಾರ್ಥಗಳನ್ನು ದಹಿಸುವದು. ಆದ್ದರಿಂದ ಸತ್ಕುಲ ಪ್ರಸೂತರಾದ ಪುರುಷರು ಅಗ್ನಿಗೆ ಸಮಾನವಾದ ತೇಜಸ್ಸು ಉಂಟಾದವರಾದ ಕಾರಣ ಕಾಷ್ಠಸ್ಥಿತವಾದ ಬೆಂಕಿಯು ಹಾಗೆಯೇ ಕ್ಷಮಾವಂತರಾಗಿರುವರು.

ಪುತ್ರರೊಡನೆ ಕೂಡಿವದನಾದ ನೀನು ಲತೆಗಳಂಥವನು. ಪಾಂಡುಪುತ್ರರು ವೃಕ್ಷಗಳಂಥವರಾದ ಕಾರಣ ಮಹತ್ತರವಾದ ವೃಕ್ಷಗಳನ್ನು ಆಶ್ರಯಿಸದೆ ಲತೆಗಳು ಪ್ರವರ್ಧಮಾನವಾಗಲಾರವು.

ಎಲೈ ಅರಸೇ, ಪುತ್ರರೊಡನೆ ಕೂಡಿದವನಾದ ಕಾರಣ ಪಾಂಡವರನ್ನು ಇಂಥ ವನದಲ್ಲಿ ಸಿಂಹಗಳಾಗಿ ತಿಳಿ, ಸಿಂಹವು ಇಲ್ಲದಿದ್ದರೆ ವನವು ನಸಿಸುವದು. ವನವು ಇಲ್ಲದಿದ್ದರೆ ಸಿಂಹವು ನಸಿಸುವದು.

---

## ಆರನೇ ಅಧ್ಯಾಯ.

ಪೂರ್ವಜನ್ಮದಲ್ಲಿ ವೀರರಿಗೆ ಪ್ರತ್ಯುತ್ಥಾನಾಭಿವಂದನೆಗನ್ನು ಮಾಡಿದವರು ಯಾರೋ ಅವರು ಈ ಜನ್ಮದಲ್ಲಿ ಪ್ರಾಣಾದಿ ವಾಯುಗಳು ಹೋದಂಥವಾದಾಗ್ಯೂ ಪುನಃ ಪ್ರಾಣಾದಿ ವಾಯುಗಳನ್ನು ಅವರು ಹೊಂದುವರು. ಆ ವೀರರಿಗೆ ಪ್ರತ್ಯುತ್ಥಾನಾದಿಗಳನು ಮಾಡಿದವರನ್ನು ಪ್ರಾಣಾದಿ ವಾಯುಗಳು ಪುನಃಹೊಂದುವದಿಲ್ಲ.

ಸತ್ಪುರುಷನು ಬಂದ ಕಾಲದಲ್ಲಿ ಪೀಠವನ್ನು ಕೊಟ್ಟು ಪಾದ ಪ್ರಕ್ಷಾಲನೆ ಮಾಡಿ ಕುಶಲ ಪ್ರಶ್ನೆ ಮಾಡಿ ತನ್ನ ಸ್ಥಿತಿಯನ್ನು ಆ ಸತ್ಪುರುಷನಿಗೆ ತಿಳಿಸಿ ಧೀರನಾಗಿ ಅನ್ನವನ್ನು ಕೊಡಬೇಕು.

ಯಾರ ಮನೆಯಲ್ಲಿ ಮಂತ್ರವಿತ್ತರಾದವರು ಲೋಭ, ಭಯ, ಅರ್ಥ, ಕಾರ್ಪಣ್ಯಗಳಿಂದ ಯಾರಿಂದ ಪೂಜೆಮಾಡಲ್ಪಡದೆ ಹೋಗುವ ರೋ ಅವರ ಜನ್ಮ ವ್ಯರ್ಥವಾದದ್ದೆಂದು ಹಿರಿಯರು ಹೇಳುವರು. ಚಿಕಿತ್ಸಕನು, ಆಯುಧಕಾರಕನು, ನಷ್ಟವಾದ ಬ್ರಹ್ಮಚರ್ಯವುಂಟಾದವನು, ಚೋರನು, ಕ್ರೂರನು, ಮದ್ಯಪಾಯಿ ಭ್ರೂಣಹತ್ಯ ಮಾಡಿದವನು, ಸೈನ್ಯವನ್ನು ಆಶ್ರಯಿಸಿ ಜೀವನ ಮಾಡುವಂಥವನು, ಶತ್ರುಗಳಿಗೆ ಅರ್ಥಾಂತರ ಕಲ್ಪಿಸುವವರು ಯಾರೂ ಪೂಜಾರ್ಹರಲ್ಲ. ಆದಕಾರಣ ಪ್ರಿಯನಾದ ಅಳಿಯನೋಪಾದಿಯಲ್ಲಿ ಅತಿಥಿಯು ಪೂಜಾರ್ಹನು. ಉದಕಮಾತ್ರಾರ್ಹನಲ್ಲ.

ದೋಷವುಳ್ಳ ಅತಿಥಿ ಪೂಜ್ಯನಾದ್ದರಿಂದ ದೋಷವಿಲ್ಲದೆ ಸಮಲೋಷ್ಟಾಶ್ಮಕಾಂಚನನಾಗಿ ದೋಷರಹಿತನಾಗಿ ಸ್ನೇಹ ವೈರಗಳು ಇಲ್ಲದವನಾಗಿ ನಿಂದಾ ಪ್ರಶಂಸೆಗಳಲ್ಲಿ ಅಪೇಕ್ಷೆ ಇಲ್ಲದೆ ಪ್ರಿಯಾಪ್ರಿಯಗಳನ್ನು ತ್ಯಾಗ ಮಾಡಿ ಉದಾಸೀನನಾದ ಸನ್ಯಾಸಿ ಹಾಗೆ ಅತಿಥಿ ವಿಶೇಷವಾಗಿ ಪೂಜ್ಯನು.

ಶಾಮಾಕ ಧಾನ್ಯವೂ, ಮೂಲಗಳೂ, ಶಾಕಗಳೂ, ಇಂಗುದೀ ಫಲ ಇವುಗಳಿಂದಜೀವನ ಮಾಡುತ್ತ ನಿಯಮಿಕ ಮನಸ್ಕನಾಗಿ ಅಗ್ನಿ ಕರ್ಮದಲ್ಲಿ ಉದ್ಯುಕ್ತನಾಗಿ ಪುಣ್ಯಗಳನ್ನು ಮಾಡುತ್ತ ವನದಲ್ಲಿ ತಪಸ್ಸು ಮಾಡುವಂಥ ತಪೋವಂತನು ಅತಿಥಿ ಪೂಜಾಪರನಾಗಿ ಇರಬೇಕಾದ ಕಾರಣ ಭಾಗ್ಯವಂತನು ಅತಿಥಿ ಪೂಜೆಯನ್ನು ವಿಶೇಷವಾಗಿ ಮಾಡಬೇಕಾದ ವಿಷಯದಲ್ಲಿ ಏನು ಹೇಳತಕ್ಕದ್ದು?

ಬುದ್ಧಿಶಾಲಿಯನ್ನು ಕುರಿತು ಅಪಕಾರ ಮಾಡಿ ತಾನು ದೂರ ದೇಶದಲ್ಲಿದ್ದೇನೆಂದು ಮಂದನಾಗಿರಬಾರದು. ಯಾಕಂದರೆ ಬುದ್ಧಿಶಾಲಿಯ ಭುಜಗಳು ದೀರ್ಘಾರ್ಹಗಳಾದವಗಳಾದ ಕಾರಣ ಆ ಭುಜಗಳಿಂದ ಹೊಡೆಯಲ್ಪಟ್ಟಂಥವನಾಗಿ ಸಂಹಾರಮಾಡಲ್ಪಡುತ್ತಾನೆ.

ತನ್ನಲ್ಲಿ ವಿಶ್ವಾಸವಿಲ್ಲದವನಲ್ಲಿ ತಾನು ವಿಶ್ವಾಸ ಮಾಡಬಾರದು. ತನ್ನಲ್ಲಿ ವಿಶ್ವಾಸ ಉಂಟಾದವನಲ್ಲಿ ತಾನು ಅತಿವಿಶ್ವಾಸಮಾಡಬಾರದು. ಅದುಯಾಕಂದರೆ ವಿಶ್ವಾಸಾಧಿಕ್ಯದಿಂದ ಹುಟ್ಟುವಂಥ ಭಯವು ಮೂಲವನ್ನು ಕತ್ತರಿಸುವದು.

ವಿಷಯಗಳಲ್ಲಿ ಇಚ್ಛೆಯಿಲ್ಲದೆ ಭಾರ್ಯೆ ಸಂರಕ್ಷಣೆಮಾಡುತ್ತ ಭೃತ್ಯ ಪರ್ಯಂತರವೂ ಯಥಾಯೋಗ್ಯವಾಗಿ ದ್ರವ್ಯವನ್ನು ಕೊಟ್ಟು ಸಂರಕ್ಷಣೆಮಾಡುತ್ತ ಒಳ್ಳೇ ಮಾತುಗಳನ್ನು ಹೇಳುತ್ತ ಸ್ವಚ್ಛವಾದ ಮನಸ್ಸುಳ್ಳವನಾಗಿ ಸ್ತ್ರೀಯರ ವಿಷಯವಾಗಿ ಮಧುರೋಕ್ತಿಗಳನ್ನು ಹೇಳಿ ಸಂರಕ್ಷಣೆ ಮಾಡುತ್ತಿರುವ ಪುರುಷನು ಪರವಶನಾಗುವದಿಲ್ಲ. ಇಷ್ಟು ಗುಣಗಳು ಧರ್ಮರಾಯನಲ್ಲಿ ಉಂಟಾಗಿರುವದರಿಂದ ಲಕ್ಷ್ಮಿಗೆ ಸಮಾನಳಾದ ದ್ರೌಪದಿಯನ್ನು ರಕ್ಷಿಸುವದು ನಿನಗೆ ಅವಶ್ಯಕವಾದದ್ದಾದ ಕಾರಣ ರಕ್ಷಿಸದೆ ಹೋಗುವದು ನಿನಗೆ ಭಯ ಸಂಪಾದಕವಾಗುವದು.

ತನ್ನ ಮನೆಗೆ ಪ್ರಕಾಶರಾದ ಭಾಗ್ಯಶಾಲಿಗಳಾದ ಸ್ತ್ರೀಯರು ಲಕ್ಷ್ಮಿಯಂಥವರಾದ ಕಾರಣ ವಿಶೇಷವಾಗಿ ಸನ್ಮಾನಮಾಡಿ ರಕ್ಷಿಸತಕ್ಕದು.

ಅಂತಃಪುರವನ್ನು ತಂದೆಯ ಸ್ವಾಧೀನಮಾಡಿ ಪಾಕಶಾಲೆಯನ್ನು ತಾಯಿಯ ಸ್ವಾಧೀನಮಾಡಿ ತನಗೆ ಸಮಾನನಾದವನನ್ನು ಗೋಸಂರಕ್ಷಣೆಯಲ್ಲಿರಿಸಿ ಕೃಷಿಯನ್ನು ತಾನೇ ವಿಚಾರಿಸತಕ್ಕದ್ದು.

ವರ್ತಕರ ಯೋಗಕ್ಷೇಮವನ್ನು ಭೃತ್ಯರ ಮುಖದಿಂದ ವಿಚಾರ ಮಾಡಿಸಿ ಪುತ್ರರಿಂದ ಬ್ರಾಹ್ಮಣರ ಶೇವೆಯುನ್ನು ಮಾಡಿಸುತ್ತಿರಬೇಕು.

ಸತ್ಕುಲ ಪ್ರಸೂತರಾದವರು ಪ್ರತಿದಿನದಲ್ಲೂ ಅಗ್ನಿಯ ಸಮಾನ ವಾದ ತೇಜಸುಳ್ಳವರು ಕ್ಷಮಾವಂತರಾಗಿ ಆಕಾರವನ್ನು ಗೋಪನ ಮಾಡಿಕೊಂಡು ಬೆಂಕೆಯಿರುವ ಹಾಗೆ ಇರುವರು.

ತಾನು ಮಾಡುವಂಥ ಕೆಲಸವನ್ನು ಹೇಳಬಾರದು. ಧರ್ಮಾರ್ಥ ಕಾಮುವುಳ್ಳ ಕಾಮರೂಪ ಕೆಲಸಗಳನ್ನು ತಿಳಿಸಬೇಕು. ಆ ಪ್ರಕಾರ ಮಾಡಿದರೆ ಮಂತ್ರಿಭೇದವುಂಟಾಗುವದಿಲ್ಲ. ಪರ್ವತದ ಮೇಲಾದರೂ ಜನರಹಿತವಾದ ಉಪ್ಪರಿಗೆಯ ಮೇಲಾದರೂ ತೃಣಗಳಿಂದರಹಿತವಾದ ಅರಣ್ಯದಲ್ಲ್ಯಾದರೂ ಮಾಡಿದ ಆಲೋಚನೆ ಮಾಡತಕ್ಕ ಶ್ರೇಷ್ಠವಾದ ಆಲೋಚನೆಯ ತನಗೆ ಮಿತ್ರನಾಗದವನು ತಿಳಿಯುತಕ್ಕವನಲ್ಲ.

ಯಾವ ಅರಸು ಮಾಡುವ ಆಲೋಚನೆಯನ್ನು ಹೊರಗಿನ ಜನ ರೂ ಅಂತಃಪುರದ ಜನರೂ ತಿಳಿಯರೋ ಆ ಅರಸ್ಸು ಸರ್ವತ್ರ ದೃ ಷ್ಟಿವುಳ್ಳವನಾಗಿ ಸ್ಥಿರವಾಗುವ ಹಾಗೆ ಐಶ್ವರ್ಯವನ್ನನುಭವಿಸುವನು.

ಪಂಡಿತನಾದವನಾದರೂ ಚಪಲನಾದ ಪಂಡಿತನು ಮಂತ್ರಿತ್ವಕ್ಕೆ ಯೋಗ್ಯನಲ್ಲ.

ಯಾವ ಮಂತ್ರಿ ಮಾಡಿದ್ದ ಕೆಲಸಗಳನ್ನು ಸಭೆಯಲ್ಲಿರುವವರು ತಿಳಿದುಮಾಡತಕ್ಕ ಕೆಲಸಗಳನ್ನು ತಿಳಿಯದೇ ಹೋಗುವರೋ ಅಂಥ ಮಂತ್ರಿಯು ಸಂಗಡ ಮಾಡುವ ಆಲೋಚನೆ ಅರ್ಥ ಸಂಪಾದಕವಾದದ್ದು.

ಧರ್ಮಾರ್ಥಕಾಮುಗಳ ವಿಷಯುವಾಗಿ ಅರಸು ಮಾಡುವಂಥ ಆಲೋಚನೆ ಗುಪ್ತವಾದ ಹಾಗಾದರೆ ಅರ್ಥಸಿದ್ಧಿಯು ನಿಸ್ಸಂದೇಹ ವಾಗಿ ಉಂಟಾಗುವದು.

ಅಪ್ರಶಸ್ತಗಳಾದ ಕಾರ್ಯಗಳನ್ನು ಯಾವ ಪುರುಷನು ಮೋಹದಿಂದ ಮಾಡುವನೋ ಆ ಪುರುಷನು ಆ ಕೆಲಸಗಳಿಂದ ತಾನು ಸೌಖ್ಯವನ್ನು ಹೊಂದದ ಜೀವಿತದಿಂದ ರಹಿತನಾಗುವನು.

ಪ್ರಶಸ್ತ ಕರ್ಮಾನುಷ್ಠಾನವು ಸುಖಕರವಾಗುವದು. ಅಪ್ರಶಸ್ತ ಕರ್ಮಾನುಷ್ಠಾನವು ಪಶ್ಚಾತಾಪ ಸಂಪಾದಕವಾಗುವದು.

ಯಾವ ಪ್ರಕಾರ ವೇದಾಧ್ಯಯನ ಮಾಡದವನು ಶ್ರಾದ್ಧಾರ್ಹನಾಗನೋ ಹಾಗೆ ಸಂಧಿ, ವಿಗ್ರಹ, ಯಾನ, ಆಸನ, ದ್ವೈಧೀಭಾವ ಮಾಶ್ರಯಗಳೆಂಬ ಆರು ಗುಣಗಳನ್ನು ಕೇಳದವನು ಅರಸು ಮಾಡುವ ಆಲೋಚನೆಯನ್ನು ಕೇಳುವದಕ್ಕೆ ಅರ್ಹನಾಗನು.

ಷಡ್ಗುಣಗಳನ್ನು ತಿಳಿದು ಕಾರ್ಯಗಳ ಸ್ಥಿತಿಯು ವೃದ್ಧಿನಾಶ ಇವುಗಳನ್ನು ತಿಳಿದು ಎರಡನೆಯವರಿಂದ ಅವಮಾನವನ್ನು ಹೊಂದುವ ಸ್ವಭಾವವಿಲ್ಲದಂಥವನ ಸ್ವಾಧೀನವಾಗಿ ಭೂಮಿ ಇರುವದು.

ನಿರರ್ಥಕವಾದ ಕ್ರೋಧಹರ್ಷಗಳಿಲ್ಲದೆ ಆಲೋಚಿಸುತ್ತ ಕಾರ್ಯಗಳನ್ನು ಮಾಡುತ್ತ ತಾನೇ ಬೊಕ್ಕಸದ ಲೆಖ್ಖವನ್ನು ಮಾಡುತ್ತಿರುವಂಥವನ ಸ್ವಾಧೀನದಲ್ಲಿ ಭೂಮಿ ಇರುವದು.

ಅರಸಾದವನು ತಾನೊಬ್ಬನೇ ಸಕಲ ಸೌಖ್ಯಗಳನ್ನು ಅನುಭವಿಸದೇ ಭೃತ್ಯರಾದಿಯಾಗಿ ಸಮಸ್ತರನ್ನು ಯಥಾಯೋಗ್ಯ ದ್ರವ್ಯದಾನ ಸಂತೋಷಪಡುತ್ತ ತಾನು ಅರಸಾದೆನಲ್ಲಾ ಎಂದು ಸಂತೋಷ ಪಡತಕ್ಕದ್ದು.

ಬ್ರಾಹ್ಮಣ ಮಹತ್ವವನ್ನು ಬ್ರಾಹ್ಮಣನು ಬಲ್ಲನು. ಪತ್ನಿ ಸ್ವಭಾವವನ್ನು ಪತಿ ಬಲ್ಲನು. ಮಂತ್ರಿ ಸ್ವಭಾವವನ್ನು ಅರಸು ಬಲ್ಲನು. ಅರಸಿನನ ಸ್ವಭಾವವನ್ನು ಅರಸು ಬಲ್ಲನು.

ವಧಾರ್ಹನಾದ, ಸ್ವಾಧೀನನಾದ ಶತ್ರುವು ಬಿಡತಕ್ಕವನಲ್ಲ. ಯಾಕಂದರೆ ಆ ಶತ್ರುವು ನಮ್ರನಾಗಿ ಸೇವಿಸುತ್ತಿದ್ದು, ಬಲವುಳ್ಳ ಕಾಲದಲ್ಲಿ ಸಂಹಾರಮಾಡುವನು.

ದೇವತೆಗಳೂ ಅರಸರೂ ಬ್ರಾಹ್ಮಣರೂ ವೃದ್ಧಬಾಲಾತುರರೂ ಇವರ ವಿಷಯವಾಗಿ ಕ್ರೋಧವಂನು ನಿರಂತರದಲ್ಲಿ ನಿಗ್ರಹಿಸತಕ್ಕದ್ದು.

ಮೂಢಯೋಗ್ಯವಾದ ನಿರರ್ಥಕವಾದ ಕ್ರೋಧವಂನು ವರ್ಜಿಸಿದವನು ಶಾಶ್ವತವಾದ ಕೀರ್ತಿಯಂನು ಹೊಂದುವನು.

ಸ್ತ್ರೀಯರು ಷಂಡನಂನು ಪತಿಯಾಗಿ ಇಚ್ಛೈಸದ ಹಾಗೆ ಯಾವನ ಅನುಗ್ರಹವೂ ಕ್ರೋಧವೂ ನಿಷ್ಫಲವಾದದ್ದೋ ಅವನನ್ನು ಅರಸನಾಗಿ ಇಚ್ಛೈಸರು.

ಧನ ಸಂಪಾದನಾರ್ಥವಾಗಿ ಸೂಕ್ಷ್ಮ ಬುದ್ಧಿ ಪ್ರಯೋಜನವಲ್ಲವೆಂದೂ, ಧನ ನಾಶಾರ್ಥವಾಗಿ ಜಡ ಬುದ್ಧಿ ಪ್ರಯೋಜನವಲ್ಲವೆಂದೂ, ಪೂರ್ವಕೃತ ಸಂಸ್ಕಾರಾನುಸಾರವಾಗಿ ಸಂಪತ್ತೂ, ದ್ರವ್ಯನಾಶವೂ, ಉಂಟಾಗುವದೆಂದು ಪ್ರಾಜ್ಞನು ತಿಳಿಯುತ್ತಾನೇ ಹೊರ್ತು ಎರಡನೆಯವನು ತಿಳಿಯಲಾರನು.

ಯಾಕಂದರೆ ಸೂಕ್ಷ್ಮ ಬುದ್ಧಿಯಿರದವರು ದ್ರವ್ಯವಂತರಾಗುವದೂ ಸೂಕ್ಷ್ಮ ಬುದ್ಧಿಯುಳ್ಳವರು ಧನರಹಿತರಾಗುವದೂ ಉಂಟು. ಆದ ಕಾರಣ ವಿದ್ಯಾವೃದ್ಧರನ್ನು, ಶೀಲವೃದ್ಧರನ್ನು, ವಯೋವೃದ್ಧರನ್ನೂ, ಬುದ್ಧಿವೃದ್ಧರನ್ನೂ, ಧನವೃದ್ಧರನ್ನೂ, ಸತ್ಕುಲ ಪ್ರಸೂತ ವೃದ್ಧರಾದವರನ್ನೂ, ನಿರಂತರದಲ್ಲಿ ಮೂಢನಾದವನು ಅವಮಾನಮಾಡುತ್ತಾನೆ.

ಸದ್ವೃತ್ತಿಯಿರದೆ ಪ್ರಜ್ಞೆಯಿಂದ ಶೂನ್ಯನಾಗಿ ಅಸೂಯಪರನಾಗಿ ಧರ್ಮಿಷ್ಠನಲ್ಲದೆ ದುಷ್ಟ ವಾಕ್ಯಗಳುಂಟಾಗಿ ಕ್ರೋಧಿಯಾದವನನ್ನು ದುಷ್ಟರು ಜಾಗ್ರತಿಯಾಗಿ ಅನುಸರಿಸುವರು.

ವಿರುದ್ಧ ವಾಕ್ಯಗಳನ್ನು ಹೇಳದೆ ದಾನಶೀಲನಾಗಿ ಆಡಿದ ಮಾತು ತಪ್ಪದೆ ಯುಕ್ತವಾದ ಮಾತುಗಳಾಡುತ್ತ ಇರುವದು ಸಮಸ್ತ ಜನರನ್ನೂ ಸ್ವಾಧೀನವಾಗುವ ಹಾಗೆ ಮಾಡುವದು.

ಧೈರ್ಯವೂ, ಬಾಹ್ಯಾಂತರ ಇಂದ್ರಿಯ ನಿಗ್ರಹವೂ, ಶುಚಿತ್ವವೂ, ದಯ, ಅನಿಷ್ಠುರವಾಕ್ಯ, ಮಿತ್ರದ್ರೋಹ ಮಾಡದೆ ಹೋಗುವದೂ, ಇವು ಏಳು ಸಂಪತ್ತನ್ನು ವೃದ್ಧಿಮಾಡಿಸುವಂಥವು.

ಭೃತ್ಯ ಪರಿಯಂತರವೂ ಸೇವಕರಿಗೆ ದ್ರವ್ಯವನ್ನು ಯಥಾಯೋಗ್ಯವಾಗಿ ಕೊಡದೆ ದುಷ್ಟ ಮನಸ್ಕನಾಗಿ ಕೃತಘ್ನನಾಗಿ ಲಜ್ಜೆಯಿಲ್ಲದ ನರಾಧಮನು ವರ್ಜಿಸತಕ್ಕವನು.

ಯಾವನು ದೋಷ ಸಹಿತವಾಗಿ ಈ ದೋಷ ರಹಿತವಾದ ಸ್ವಕೀಯ ಜನವನ್ನು ಯಾವ ಪುರುಷನು ಕೋಪವುಂಟಾಗುವ ಹಾಗೆ ಮಾಡುವನೋ ಅವನು ಸರ್ಪದ ಸಂಗಡ ಯುಕ್ತವಾದ ಮನೆಯಲ್ಲಿ ರಾತ್ರಿವೇಳೆಯಲ್ಲಿ ಪುರುಷನು ಹ್ಯಾಗೆ ಸುಖದಿಂದ ನಿದ್ರೆ ಹೋಗನೋ ಹಾಗೆ ಸುಖವಾಗಿರನು.

ಯಾರನ್ನು ತಾನು ದೂಷಿಸಿದ ಹಾಗಾದರೆ ತನ್ನ ಯೋಗಕ್ಷೇಮಕ್ಕೆ ದೋಷಗಳುಂಟಾಗುವವೋ ಅಂಥವರನ್ನು ದೇವತೆಗಳೋಪಾದಿಯಲ್ಲಿ ಉಪಚರಿಸತಕ್ಕದ್ದು. ಯಾರು ನಿರಂತರದಲ್ಲಿ ಸ್ತ್ರೀಯರಲ್ಲಿಯೂ ಮತ್ತರಲ್ಲಿಯೂ ಪತಿತರಲ್ಲಿಯೂ ಅಪೂಜ್ಯರಲ್ಲಿಯೂ ಆಸಕ್ತಿಯುಳ್ಳವರೋ ಅವರು ಪ್ರಾಣ ಸಂಶಯ ಹೊಂದುವರು.

ಯಾವ ಪ್ರದೇಶದಲ್ಲಿ ಸ್ತ್ರೀಪ್ರಾಬಲ್ಯವೊ ವಂಚಕರ ಆಧಿಕ್ಯವೊ ಬಾಲನೇ ಶಿಕ್ಷಿತನೋ ಆ ಪ್ರದೇಶದಲ್ಲಿರುವವರು ಅಸ್ವಾಧೀನರಾಗಿ ಪಾಷಾಣಕೃತವಾದ ನಾವೆಗಳು ನದಿಯಲ್ಲಿ ಮುಣಗುವ ಹಾಗೆ ಮುಣಿಗಿಹೋಗುವರು

ಸಾಮಾನ್ಯಪ್ರಯೋಜನಗಳಲ್ಲಿ ಆಸಕ್ತರಾಗಿ ವಿಶೇಷ ಪ್ರಯೋಜನಗಳಲ್ಲಿ ಆಸಕ್ತರಾಗದೆಯಿರುವವರನ್ನು ಪಂಡಿತರ ಹಾಗೆ ತಿಳಿಯುತ್ತೇನೆ. ಯಾಕಂದರೆ ಸಾಮಾನ್ಯಪ್ರಯೋಜನಗಳಲ್ಲಿ ವಿಶೇಷ ಪ್ರಯೋಜನಗಳು ಸೇರುತ್ತವೆಯಾಗಿ ವಿಶೇಷ ಪ್ರಯೋಜನವನ್ನು ಕುರಿತು ಸಂಘರ್ಷಣೆ ಮಾಡಬಾರದು.

ಯಾವ ಪುರುಷನನ್ನು ವಂಚಕರೂ ಅಸತ್ಪಾತ್ರವ್ಯಯದಲ್ಲಿ ಸಂತೋಷಿಸುವರೋ ವ್ಯಭಿಚಾರ ಸ್ತ್ರೀಯರೂ ಪ್ರಶಂಸೆಮಾಡುವರೋ ಆ ಪುರುಷನು ಜೀವಿತ್ವವನ್ನು ಹೊಂದುವನು.

ಮಹಾಧನುರ್ಧಾರಿಗಳಾದ ಅಮಿತ ತೇಜೋವಂತರಾದ ಪಾಂಡವರನ್ನು ಬಿಟ್ಟು ಭರತವಂಶೋತ್ಪನ್ನವಾದ ಐಶ್ವರ್ಯವು ನಿನ್ನಿಂದ ದುರ್ಯೋಧನನಲ್ಲಿಡಿಸಲ್ಪಟ್ಟದಾಗಿದೆಯಾಗಿ ಲೋಕತ್ರಯದದೆಶೆಯಿಂದ ಐಶ್ವರ್ಯ ಮದದಿಂದ ಮೂಢನಾಗಿ ಭ್ರಷ್ಟನಾದ ಬಲಿಚಕ್ರವರ್ತಿಯೋಪಾದಿಯಲ್ಲಿ ಐಶ್ವರ್ಯದದೆಶೆಯಿಂದ ಭ್ರಷ್ಟನಾದ ದುರ್ಯೋಧನನ್ನು ನೋಡ ಹೋಗುತ್ತೀ.

---

## ೩೪ನೇ ಅಧ್ಯಾಯ.

ಐಶ್ವರ್ಯಾನೈಶ್ವರ್ಯಗಳೆರಡು ದೈವ ಸಂಬಂಧವಾದವಗಳಾದ ಕಾರಣ ಸೂತ್ರದಿಂದ ಕಟ್ಟಲ್ಪಟ್ಟಂಥಾದ್ದಾದರೂ ವಿಕಾರವಾದ ಸ್ತ್ರೀ ಪ್ರಮೆಯ ಹಾಗೆ ಈ ಪುರುಷನು ಅಸ್ವಾಧೀನನಾಗಿ ದೈವದಿಂದ ಸ್ವಾಧೀನಮಾಡಿಕೊಳ್ಳಲ್ಪಟ್ಟವನಾದದ್ದರಿಂದ ಉಕ್ತಾರ್ಥವನ್ನು ಗ್ರಹಿಸುವಂಥ ನೀನು ಶ್ರವಣವಿಷಯವಾಗಿ ನನ್ನಿಂದ ಮಾಡಲ್ಪಟ್ಟಿತು.

ಅಕಾಲದಲ್ಲಿ ಯೋಗ್ಯವಾದ ವಾಕ್ಯಗಳನ್ನು ಬೃಹಸ್ಪತಿಯಾದರೂ ಹೇಳಿದರೂ ಮೂರ್ಖ ಭಾವವನ್ನು, ಅವಮಾನವನ್ನು ಹೊಂದುವನು.

ದಾನದಿಂದಲೂ, ಪ್ರಿಯೋಕ್ತಿಯಿಂದಲೂ, ಮಂತ್ರದಿಂದಲೂ, ಮೂಲಮಂತ್ರಪುನಶ್ಚರಣೆಯಿಂದಲೂ, ಪ್ರಿಯರಾಗುವವರು ಕೃತ್ರಿಮ ಪ್ರಿಯರು. ಸ್ವಾಭಾವಿಕವಾಗಿ ಪ್ರಿಯರಾಗುವವರೇ ನಿಜವಾದ ಪ್ರಿಯರು.

ದ್ವೇಷಿಯಾದವನೂ ಸತ್ಪುರುಷನೂ ಬುದ್ಧಿಶಾಲಿಯೂ ಪಂಡಿತ ನೂ ಆಗುವಂಥವನಲ್ಲ. ಅದು ಹ್ಯಾಗಂದರೆ ಪ್ರಿಯನ ವಿಷಯವಾಗಿ ಮಾಡಲ್ಪಡುವ ಶುಭ ಕಾರ್ಯಗಳು ದ್ವೇಷಿ ವಿಷಯಕವಾಗಿ ಪಾಪ ಸಂಪಾದಕಗಳಾಗುವವು.

ದುರ್ಯೋಧನನು ಹುಟ್ಟುತ್ತಲೇ ಇವನ ತ್ಯಾಗದಿಂದ ಪುತ್ರಶತ ಕಕ್ಕೆ ವೃದ್ಧಿಯೂ, ಇವನನ್ನು ತ್ಯಾಗಮಾಡದೆ ಹೋಗುವದರಿಂದ ಪು ತ್ರಶತಕಕ್ಕೆ ನಾಶವು ಆದಕಾರಣ ಇವನನ್ನು ತ್ಯಾಗಮಾಡೆಂದು ಆ ಕಾಲದಲ್ಲೆ ನನ್ನಿಂದ ಹೇಳಲ್ಪಟ್ಟದೆ.

ತನಗೆ ಆಗುವ ಯಾವ ವೃದ್ಧಿ ಭಯಂಕರ ವಾದದ್ದೋ ಆ ವೃದ್ಧಿ ಯು ಬಹು ಮಾನ ಮಾಡತಕ್ಕದಲ್ಲ. ಯಾವ ಕ್ಷಯ ತನಗೆ ವೃ ದ್ಧಿವುಂಟುಮಾಡುತ್ತದೋ ಆ ಕ್ಷಯವು ಬಹುಮಾನ ಮಾಡತಕ್ಕದ್ದು. ಆದಕಾರಣ ಆ ವೃದ್ಧಿಕ್ಷಯಗಳು ಎರಡನ್ನು ಉತ್ಕ್ರಮವಾಗಿ ಕ್ಷಯ ವೃದ್ಧಿಗಳಾಗಿ ತಿಳಿಯತಕ್ಕದ್ದು.

ಗುಣವೃದ್ಧರು ಕೆಲವರು, ಧನವೃದ್ಧರು ಕೆಲವರುಂಟು. ಗುಣ ಗಳಿಂದ ರಹಿತವಾದ ಧನ ವೃದ್ಧರನ್ನು ವಿಸರ್ಜಿಸು.

ಅತ್ಯಂತ ಗುಣ ಸಂಪನ್ನನಾಗಿ ವಿನಯಯುಕ್ತನಾದ ಪುರುಷ ನು ಒಂದಾನೊಂದು ಕಾಲದಲ್ಯಾದರೂ ಭೂತಗಳ ವಿಷಯವಾಗಿ ಸೂಕ್ಷ್ಮವಾಗಿದ್ದಾದರೂ ನಾಶವನ್ನು ಅಪೇಕ್ಷಿಸನು.

ಉಥ್ಧೃತರಾದ ಜನರು ಪರಾಪವಾದ ನಿರುತ್ತರಾಗಿ ಪರರಿಗೆ ದುಃಖವನ್ನುಂಟು ಮಾಡುತ್ತ ಪರಸ್ಪರವಾಗಿ ಜನರಿಗೆ ವಿರೋಧವನ್ನು ಉಂಟುಮಾಡುವರು.

ಯಾರ ದರ್ಶನವು, ಯಾರ ಸಹವಾಸವು, ಯಾರಿಂದ ದ್ರವ್ಯವನ್ನು ತಕ್ಕೊಳ್ಳುವದು, ಯಾರಿಗೆ ದ್ರವ್ಯವನ್ನು ಕೊಡುವದು, ಭಯಸಂಪಾದಕವೋ ಯಾರು ಪರಸ್ಪರ ಭೇದವನ್ನುಂಟು ಮಾಡುವ ಸಹಜಸ್ವಭಾವವುಳ್ಳವರಾಗಿ ಲಜ್ಜೆಯಿಲ್ಲದೆ ಶಠಸ್ವಭಾವದಿಂದ ಕಾಮುಕರೋ ಅವರು ಪಾಪಿಷ್ಠರೆಂದು ಪ್ರಸಿದ್ಧರಾದ್ದರಿಂದ ಸಹವಾಸ ವಿಷಯದಲ್ಲಿ ನಿಂದಾರ್ಹರು.

ಯಾವ ಪುರುಷನು ಮೊದಲು ಹೇಳಲ್ಪಟ್ಟವಗಳಾದ ದೋಷಗಳಿಂದಸಹಿತನೋ ಅವನನ್ನು ಬಿಟ್ಟ ಹಾಗಾದರೆ ಅವರಲ್ಲುಂಟಾದ ಸುಹೃತ್ತ್ವವು ಅತಿಕ್ರಮಿಸಿ ಹೋಗುವದು. ಯಾಕಂದರೆ ಆ ನೀಚರಲ್ಲುಂಟಾದ ವಿಶ್ವಾಸವು ಸುಖಸಂಪಾದಕವಾಗದೆ ನಶಿಸುವಂಥಾದ್ದು.

ಆದರಿಂದ ಯಾವ ಪ್ರೀತಿಫಲ ನಿವರ್ತಕವಾದದ್ದೋ, ಯಾವನ ಹೃತ್ತದಿಂದುಂಟಾಗುವ ಸುಖವು ಅಪರಾಧಕ್ಕೊಸ್ಕರ ಉದ್ಯುಕ್ತವಾಕ್ಷಯದಲ್ಲಿ ಆರಂಭಕವಾದದ್ದೋ ಅದನ್ನು ಪ್ರೀತಿಮಾಡಬಾರದು.

ಅಲ್ಪವಾಗಿ ಅಪಕಾರ ಮಾಡಲ್ಪಟ್ಟು ಉಪಶಾಂತಿಯನ್ನು ಹೊಂದದೆ ಹೋಗುವಂಥ ಘಾತಕರಾದ ಆ ಪರಿಶುದ್ಧ ಮನಸ್ಕರಾದ ನೀಚರನ್ನು ಬುದ್ಧಿಯಿಂದ ತಿಳಿದು ದೂರವಾಗಿ ವಿಸರ್ಜಿಸತಕ್ಕದ್ದು.

ಯಾವನು ದರಿದ್ರನಾಗಿ ದೈನ್ಯದಿಂದ ಆತುರಭಾವವನ್ನು ಹೊಂದುವಂಥ ಜ್ಞಾತಿಯನ್ನು ಅನುಗ್ರಹಿಸುವನೋ ಆ ಪುರುಷನು ಪುತ್ರಪಶು ವೃದ್ಧಿಯನ್ನು ಹೊಂದುವನು. ಅಪರಮಿತವಾದ ಶ್ರೇಯಸ್ಸನ್ನು ಅನುಭವಿಸುವವನಾದ ಕಾರಣ ನೀನು ಸುಖವನ್ನು ಇಚ್ಛೈಸುವವ

ನಾದರೆ ನಿನ್ನಿಂದ ಜ್ಞಾತಿಗಳು ವೃದ್ಧಿಹೊಂದತಕ್ಕವರಾದ ಕಾರಣ ಎಲೈ ರಾಜ ಶ್ರೇಷ್ಠನೇ, ಸತ್ಯವಾಗುವ ಹಾಗೆ ಕುಲವೃದ್ಧಿಯನ್ನು ಮಾಡಿ ಜ್ಞಾತಿ ಸತ್ಕಾರವನ್ನು ಮಾಡಿದೆಯಾದರೆ ಶ್ರೇಯಸ್ಸಿನಿಂದ ಕೂಡಿಸಲ್ಪಡುತ್ತಿದ್ದಿ.

ಯಾಕಂದರೆ ಗುಣರಹಿತರಾದ ಜ್ಞಾತಿಗಳನ್ನು ಸಂರಕ್ಷಿಸತಕ್ಕಂಥ ವರೇ ಗುಣವಂತರಾಗಿ ನಿನ್ನ ಅನುಗ್ರಹವನ್ನು ಇಚ್ಛೈಸುತ್ತಿರುವಂಥ ಜ್ಞಾತಿಗಳನ್ನು ಸಂರಕ್ಷಣೆಮಾಡುವ ವಿಷಯ ಏನು ಹೇಳತಕ್ಕದ್ದು?

ಎಲೈ ದಶದಿಕ್ಕುಗಳಿಗೆ ಅಧಿಪತಿಯಾದ ಅರಸೇ, ಕುರುಕುಲ ಶ್ರೇಷ್ಠರಾದ, ಪಾಂಡವರಿಗೋಸ್ಕರ ನೀನು ಪ್ರಸನ್ನನಾಗಿ ಅವರ ವೃದ್ಧ್ಯರ್ಥವಾಗಿ ಕೆಲವು ಗ್ರಾಮಗಳು ನಿನ್ನಿಂದ ಕೊಡಲ್ಪಟ್ಟದ್ದಾದರೆ ಯಶಸ್ಸು ಹೊಂದಲ್ಪಡುವದಾದ ಕಾರಣ ವೃದ್ಧನಾಗಿ ನಿನ್ನಿಂದ ಪುತ್ರರ ರಕ್ಷಣೆಮಾಡತಕ್ಕದು.

ಜ್ಞಾತಿಗಳೊಡನೆ ವಿರೋಧವೃದ್ಧಿಯನ್ನಾಪೇಕ್ಷಿಸುವ ಪುರುಷ ನಿಂದ ಮಾಡತಕ್ಕದ್ದಲ್ಲ. ನನ್ನಿಂದ ನಿನ್ನ ಕುರಿತು ಹಿತವೇ ಹೇಳತ ತಕ್ಕದು. ನಿನ್ನ ಹಿತವನ್ನೇ ಇಚ್ಛಿಸುತ್ತಿರುವವನೆಂದು ನನ್ನನ್ನು ತಿಳಿ. ಜ್ಞಾತಿಗಳಿಂದ ಕೂಡಿ ಸುಖಗಳು ಸಮಾನವಾಗಿ ಅನುಭವಿಸತಕ್ಕದ್ದು. ಜ್ಞಾತಿಗಳಿಂದ ಕೂಡಿ ಭೋಜನವು ಮಾತನಾಡುವದು ಪರಸ್ಪರ ಪ್ರೀತಿಯನ್ನು ಮಾಡತಕ್ಕದ್ದೇ ಹೊರ್ತು ಒಂದಾನೊಂದು ಕಾಲದಲ್ಲಿ ವಿರೋಧ ಮಾಡತಕ್ಕದ್ದಲ್ಲ. ಯಾಕಂದರೆ ಜ್ಞಾತಿಗಳೇ ಪುರುಷರನ್ನು ಕಷ್ಟಗಳದೆಶೆಯಿಂದ ದಹಿಸುವಂಥವರು; ಮುಣಗಿಸುವಂಥವರು. ಅವರಲ್ಲಿ ಸದ್ವೃತ್ತಿಯುಂಟಾದವರು ಕಡೆಹಾಯಿಸುವರು. ದುರ್ವೃತ್ತಿಯುಂಟಾದವರು ಮುಣಗಿಸುವರು. ಬುದ್ಧಿವಂತರಿಂದ ಉಪದೇಶ ಮಾಡಲ್ಪಡುವದು ಜ್ಞಾನ ಮಾರ್ಗವಾದ ಕಾರಣ ಆಯೋಗ್ಯವಾಗಿ

ಹೇಳಲ್ಪಡುವ ಜ್ಞಾನ ಮಾರ್ಗಕ್ಕೆ ನಿದರ್ಶನವೇನಂದರೆ ತಿಳಿಯದೆ ಹೋಗುವದೂ ತಿಳಿದರೂ ಅನುಷ್ಠಾನ ಮಾಡದೆ ಹೋಗುವದೂ ಪಾಪಸಂಪಾದಕವಾದ ಕಾರ್ಯಗಳನ್ನು ಆರಂಭಿಸಿದವನು ಮೃತ ಹೊಂದುವನು.

ಯಾವ ಪುರುಷನು ಪೂರ್ವಕೃತ ಪಾಪವನ್ನು ಆಲೋಚಿಸದೆ ಪುನಃ ಪಾಪಾಸಕ್ತನಾಗುವನೋ ಆ ಪುರುಷನು ನರಕದಲ್ಲಿ ಕೆಡವಲ್ಪಡುವನು.

ಮಂತ್ರ ಭೇದಕ್ಕೆ ಆರು ಮಾರ್ಗಗಳೆಂದು ತಿಳಿದು ಅರ್ಥಸಂತತಿ ಕಾಮುಕನು ಈ ಆರು ಮಾರ್ಗಗಳನ್ನು ರಕ್ಷಿಸಬೇಕು.

ಅವು ಯಾವವೆಂದರೆ ಮದ್ಯಜನ್ಯವಾದ ಮದವು, ನಿದ್ರೆ, ಜ್ಞಾನಶೂನ್ಯತ್ವ, ನೇತ್ರವಕ್ತ್ರವಿಕಾರಗಳು, ದುಷ್ಟ ಮಂತ್ರಿಗಳಲ್ಲಿ ವಿಶ್ವಾಸ, ಪರಿಶುದ್ಧನೂ, ಕುಶಲನೂ, ಆಗುವದು ಇವೇ ಆರು ಮಾರ್ಗಗಳು.

ಈ ಆರು ಮಾರ್ಗಗಳನ್ನು ಯಾವನು ತಿಳಿದು ಗೋಪನ ಮಾಡುವನೋ ಅವನು ಧರ್ಮಾರ್ಥಕಾಮಕರಣದಲ್ಲಿ ಯುಕ್ತನಾಗಿ ಶತೃಗಳನ್ನು ಅತಿಕ್ರಮಿಸಿ ಇರುವನು.

ಶಾಸ್ತ್ರಾಧ್ಯಯನ ಮಾಡದೆ ವೃದ್ಧೋಪಸೇವಿಯಾಗದೆ ಧರ್ಮಾರ್ಥಗಳ ತಿಳಿವಿಕೆ ಬೃಹಸ್ಪತಿಗೆ ಸಮವಾದವರಿಂದಲೂ ತಿಳುಕೊಳ್ಳುವದಕ್ಕೆ ಅಶಕ್ಯವಾದದ್ದು.

ಸಮುದ್ರದಲ್ಲಿ ಬಿದ್ದಂಥ ವಸ್ತುವೂ ಕೇಳದವನನ್ನು ಕುರಿತು ಹೇಳುವಂಥ ಮಾತೂ ಇಂದ್ರಿಯ ನಿಗ್ರಹವಿಲ್ಲದಂಥವನ ಶ್ರವಣವೂ ಅಗ್ನಿ ಇಲ್ಲದ ಸ್ಥಳದಲ್ಲಿ ಮಾಡುವ ಹೋಮವೂ ಇವೆಲ್ಲಾ ನಷ್ಟವಾದವುಗಳು. ಬುದ್ಧಿಶಾಲಿಯಾದವನು ಪರೀಕ್ಷೆಮಾಡಿ, ಅನೇಕಾವರ್ತಿ ಆಲೋಚಿಸಿ, ಸ್ಥಿರಪಡಿಸಿ, ಪುನಃ ಶ್ರವಣಮಾಡಿ, ಪ್ರಾಜ್ಞರ ಸಂಗಡ ಆಲೋಚಿಸತಕ್ಕದ್ದು.

ದಾರಿದ್ರವನ್ನು ವಿನಯು ಹೋಗಲಾಡಿಸುವದು. ಅನರ್ಥಗಳನ್ನು ಪರಾಕ್ರಮು ಹೋಗಲಾಡಿಸುವದು. ಕ್ರೋಧವನ್ನು ಕ್ಷಮಾಗುಣ ಹೋಗಲಾಡಿಸುವದು. ಶುಭಸೂಚಕವಾದ ರೇಖೆಗಳಿಲ್ಲದೇ ಹೋಗುವದನ್ನು ಆಚಾರವು ಹೋಗಲಾಡಿಸುವದು. ಭೋಜವಸ್ತುಗಳಿಂದಲೂ ಜನ್ಮಸ್ಥಾನವಾದ ಮಾತಾಪಿತೃ ಕುಲಗಳಿಂದಲೂ ಮನೆಯಿಂದಲೂ ಆಚಾರದಿಂದಲೂ ಭೋಜನಾಚ್ಛಾದನಗಳಿಂದಲೂ ಕಾಲವನ್ನು ಪರಿಕ್ಷಿಸತಕ್ಕದ್ದು.

ಪ್ರಾಪ್ತವಾದ ತೋರಿಕೆ ದೇಹಾಭಿಮಾನವಿಲ್ಲದವನಿಂದಲಾದರೂ ಪರಿತ್ಯಾಗಮಾಡಕೂಡದ್ದು. ಕಾಮುಕನಾದವನಿಂದ ಪರಿತ್ಯಾಗಮಾಡಕೂಡುವದನ್ನು ಏನು ಹೇಳಬೇಕು?

ರಾಜಸೇವೇಪರನಾಗಿ ವೇತ್ತನಾಗಿ ಧರ್ಮಿಷ್ಠನಾಗಿ ಪ್ರಿಯುವಾದ ದರ್ಶನವುಳ್ಳವನಾಗಿ ಮೈತ್ರಗುಣ ಉಂಟಾಗಿ ಒಳ್ಳೇ ಮಾತುಗಳನ್ನು ಹೇಳುವ ಪುತ್ರರನ್ನು ಪರಿಪಾಲನೆ ಮಾಡತಕ್ಕದ್ದು.

ದುಷ್ಟ ಕುಲದಲ್ಲಿ ಉತ್ಪನ್ನನಾದರೂ ಕುಲೀನನಾದರೂ ಮಯಾ೯ದೋಲ್ಲಂಘನೆ ಮಾಡದೆ ಧರ್ಮ ಶಿಕ್ಷೆಯಾಗಿ ಮೃದುಗುಣವುಳ್ಳವನಾಗಿ ಲಜ್ಜಾಪರನಾಗವನು ಸತ್ಕುಲ ಪ್ರಸೂತರಾದ ನೂರು ಪುರುಷರಿಗಿಂತಾ ಶ್ರೇಷ್ಠನು.

ಯಾವ ಇಬ್ಬರ ವೃತ್ತಿಯು ಸ್ಥಿರವು ಪ್ರಜ್ಞೆಶ್ರೇಷ್ಠವಾದದ್ದೋ ಆ ಇಬ್ಬರಿಗೂ ಉಂಟಾದ ಮಿತ್ರತ್ವವು ನಶಿಸುವದಲ್ಲ.

ದುರ್ಬುದ್ಧಿಯುಂಟಾಗಿ ಪ್ರಜ್ಞಾಶಾಲಿಯಾಗದೆ ತೃಣಗಳಿಂದ ಆಚ್ಛಾದಿತವಾದ ಕೂಪದ ಹಾಗೆ ಇರವಂಥ ಪುರುಷನ ಸಂಗಡ ಮಿತ್ರತ್ವವು ವರ್ಜಿಸತಕ್ಕದ್ದು.

ಯಾಕಂದರೆ ಅವರಲ್ಲಿರುವ ಮಿತ್ರತ್ವವು ನಶಿಸಿಹೋಗುವದಾದ

ಗರ್ವಿಷ್ಠರೂ, ಕೋಪಿಷ್ಠರೂ, ಸಾಹಸಪರರೂ, ಧರ್ಮಬುದ್ಧಿಯಿಲ್ಲದವರೂ, ಇವರ ಸಂಗಡ ಮಿತ್ರತ್ವವನ್ನು ಮಾಡ ಬಾರದು. ಕೃತಜ್ಞನೂ, ಧಾರ್ಮಿಕನೂ, ಸತ್ಯವಂತನೂ, ಆಗಿ ಕ್ಷುದ್ರನಲ್ಲದೆ ಧೃಢಭಕ್ತಿಯುಂಟಾಗಿ ಸನ್ಮಾರ್ಗಸ್ಥನಾದ ಸ್ನೇಹಿತನು ತ್ಯಾಗಮಾಡತಕ್ಕವನಲ್ಲ.

ಇಂದ್ರಿಯ ನಿಗ್ರಹವಿಲ್ಲದೆ ಹೋಗುವದು ಮೃತ್ಯುವಿಗಿಂತ ಹೆಚ್ಚಾದದ್ದಾದ ಕಾರಣ ಇಂದ್ರಿಯ ನಿಗ್ರಹವಿಲ್ಲದೆ ಹೋಗುವದು ದೇವತೆಗಳನ್ನಾದರೂ ಭೇದವಿಡುವದು.

ಮೃದುಗುಣವುಂಟಾಗುವದೂ, ಭೂತಗಳವಿಷಯವಾಗಿ ಅಸೂಯ ಭಾವವೂ, ಸಹನವೂ, ಧೈರ್ಯವೂ, ಮಿತ್ರಾವಮಾನ ಮಾಡದೆ ಹೋಗುವದೂ, ಇವು ಆಯುರ್ವೃದ್ಧಿಕರಗಳೆಂದು ತಿಳವಿಕೆಯುಳ್ಳ ಪಂಡಿತರು ಹೇಳುವರು.

ಅತಿಕ್ರಮಿಸಿ ಹೋದ ಅರ್ಥವನ್ನುದಯದಿಂದ ಯಾವನು ಹೊಂದಲಿಚ್ಛೈಸುವನೊ ಅವನ ಸ್ವಭಾವವು ಕುತ್ಸಿತವಾದದ್ದಲ್ಲ. ತನ್ನ ಕಾರ್ಯಗಳಿಗೆ ಮುಂದೆ ಆಗ ಹೋಗುವ ವಿಘ್ನಗಳನ್ನು ಪರಿಕ್ಷಿಸುವಂಥ ಸಾಮರ್ಥ್ಯವುಳ್ಳವನೂ ತತ್ಕಾಲದಲ್ಲಿ ಮಾಡುವಂಥ ಕಾರ್ಯಗಳ ವಿಷಯವಾಗಿ ಧೃಢಚಿತ್ತವುಳ್ಳವನೂ ಅತಿಕ್ರಮಿಸಿ ಹೋದ ಕಾರ್ಯಗಳ ವಿಷಯವಾಗಿ ಪೂರ್ವಕೃತಪಾಪವು ಅನುಭವಿಸದ ವಿನಃ ವಶಿಸುವದಲ್ಲವೆಂದು ತಿಳಿಯುವದೂ ಈ ಮೂರರ ತಿಳವಿಕೆಯುಳ್ಳ ಪುರುಷನು ಅರ್ಥಗಳಿಂದ ರಹಿತನಾಗುವದಿಲ್ಲ.

ಮನೋವಾಕ್ಕಾಯ ಕರ್ಮಗಳಿಂದ ಕ್ರೂರಕಾರ್ಯಗಳನ್ನು ಸೇವಿಸದೆ ಶುಭಕರ್ಯಗಳನ್ನು ಮಾಡದೆ ಹೋದರೆ ಆ ಮಾಡದೆ ಹೋಗುವದು ಅವನನ್ನು ನಾಶಮಾಡುವದು.

ಶುಭ ವಸ್ತುಗಳಾದ ದಧಿಪೂರ್ವ ಗೋವುಗಳನ್ನು ಸ್ಪರ್ಶಿಸೂವದೂ, ಉಪಾಯಗಳನ್ನು ತಿಳಿಯುವದೂ, ನೀತಿಶಾಸ್ತ್ರ ಶ್ರವಣವೂ, ಉದ್ಯೋಗಾಸಕ್ತಿಯೂ, ಶಿಷ್ಟಾನುಮತಿಯಾಗಿ ನಡಿಯುವದೂ, ಸರ್ವದಾ ಸತ್ಪುರುಷ ದರ್ಶನವೂ, ಇವು ಐಶ್ವರ್ಯವನ್ನುಂಟುಮಾಡುತ್ತವೆ.

ಕೆಲಸಗಳನ್ನು ಮಾಡುವದರಲ್ಲಿ ಅಸಹ್ಯವಿಲ್ಲದೆ ಹೋಗುವದು ಸಂಪತ್ತಿಗೆ ಮೂಲವಾಗುವದಲ್ಲದೆ, ಲಾಭ ಶುಭಗಳಿಗೂ ಕಾರಣವಾಗುವದಾದ್ದರಿಂದ ಅಸಹ್ಯವಿಲ್ಲದವನು ಮಹಾತ್ಮನಾಗಿ ಅಪರಿಮಿತ ಸುಖವನ್ನನುಭವಿಸುವನು.

ಪ್ರವರ್ಧಮಾನನಾಗುವ ಪುರುಷನಿಗೆ ಕ್ಷಮಾ ಗುಣಕ್ಕಿಂತ ಸಂಪತ್ಕರವಾದದ್ದು ಎರಡನೇದು ಇರದೆ, ಸರ್ವದಾ ಕ್ಷಮೆಯುಂಟಾಗತಕ್ಕದ್ದು.

ತಾನು ಸಮರ್ಥನಾದರೂ ಧರ್ಮ ಸಂಪಾದನಾರ್ಥವಾಗಿ ಕ್ಷಮೆಯುಳ್ಳವನಾಗಬೇಕು. ಕ್ಷಮವೇನಂದರೆ ಪ್ರಯೋಜನಾಪ್ರಯೋಜನಗಳು ಯಾರಿಗೆ ಸಮವಾದದ್ದೊ ಅವನು ಕ್ಷಮಾವಂತನು.

ಯಾವ ಸುಖವನ್ನು ಸೇವಿಸಿದ ಹಾಗಾದರೆ ಧರ್ಮಗಳಿಂದ ರಹಿತನಾಗನೋ ಆ ಸುಖವನ್ನು ಸೇವಿಸಬೇಕು. ಆಹಾರಾದಿ ಸುಖಗಳ ವಿಷಯವಾಗಿ ನಿರ್ಭಂದಮಾಡಬಾರದು. ದುಃಖಾರ್ತಿಗಳೂ ಯತ್ಕಿಂಚಿತು ಅಪೇಕ್ಷೆಯಿರದವರೂ ಇವರಲ್ಲಿ ಲಕ್ಷ್ಮಿಯಿರಳು.

ರುಜುಮಾರ್ಗವುಂಟಾಗಿ ಲಜ್ಜಾಸಹಿತನಾದವನ್ನು ಕುತ್ಸಿತ ಬುದ್ಧಿಯುಳ್ಳವರು ದೂಷಿಸುತ್ತಾರೆ.

ಅತ್ಯಂತ ಜ್ಞಾನಿಯಾದವನನ್ನೂ ಅತಿದಾತೃತ್ವ ಗುಣವುಳ್ಳವನನ್ನೂ ಅತಿಶೌರ್ಯವುಳ್ಳವನನ್ನೂ ಅತಿಕ್ರೂರ ವ್ರತಗಳನ್ನು ಮಾಡುವವನನ್ನೂ ತಾನೇ ಪ್ರಜ್ಞಾಶಾಲಿಯೆಂದು ಅಹಂಕಾರವುಳ್ಳವನನ್ನೂ ಇವರನ್ನು ಭಯದೆಶೆಯಿಂದ ಲಕ್ಷ್ಮಿಯು ವರ್ಜಿಸುವಳು.

ಈ ಲಕ್ಷ್ಮಿಯು ಅತ್ಯಂತ ಗುಣಗಳುಳ್ಳವರನ್ನು ಅತ್ಯಂತ ಗುಣಗಳು ಇರದವರನ್ನು ಹೊಂದದೆ ಗುಣವಂತರನ್ನೇ ಕೋರುವಳೇ ಹೊರ್ತು ಗುಣರಹಿತರನ್ನು ಕೋರಳು.

ವೇದಾಧ್ಯಯನಕ್ಕೆ ಅಗ್ನಿಹೋತ್ರಗಳೂ ಮಾಡುವದೇ ಫಲ. ಶ್ರಮಕ್ಕೆ ಸತ್ಸ್ವಭಾವವುಂಟಾಗುವದೇ ಫಲ. ಸ್ತ್ರೀಯರಿಗೆ ಪತಿಪುತ್ರರೇ ಫಲ, ಧನಕ್ಕೆ ಒಬ್ಬರಿಗೆ ಕೊಟ್ಟು ತಾನು ಅನುಭವಿಸುವದೇ ಫಲ.

ಅಧರ್ಮಾರ್ಜಿತವಾದ ದ್ರವ್ಯದಿಂದ ಯಜ್ಞ ಧಾನಗಳನ್ನು ಮಾಡಿದವನು ತಾನು ಮೃತನಾದ ಮೇಲೆ ಪರಲೋಕದಲ್ಲಿ ಆ ಯಜ್ಞ ದಾನಾದಿ ಜನ್ಯವಾದ ಫಲವನ್ನು ಹೊಂದುವನು.

ಧೈರ್ಯವಂತನಾದವನಿಗೆ ಅರಣ್ಯದಲ್ಲೂ ದುರ್ಗಸ್ಥಾನಗಳಲ್ಲೂ ಕಷ್ಟಕಾಲಗಳಲ್ಲೂ, ಆಪತ್ಕಾಲಗಳಲ್ಲೂ, ತ್ವರೆಯುಂಟಾದ ವೇಳೆಯಲ್ಲೂ, ತನ್ನ ಸಂಹಾರಾರ್ಥವಾಗಿ ಶತ್ರುಗಳು ಆಯುಧಧಾರಿಗಳಾದ ಕಾಲದಲ್ಲೂ, ಭಯವಿರದು

ಕಾರ್ಯ ಮಾಡುವದರಲ್ಲಿ ಆಸಕ್ತನಾಗುವದೂ ಇಂದ್ರಿಯನಿಗ್ರಹವುಂಟಾಗುವದೂ, ಅಸಾಧ್ಯಕಾರ್ಯವಾದರೂ, ಮಾಡುವದರಲ್ಲಿ ಸಾಮರ್ಥ್ಯವುಂಟಾಗುವದೂ, ಜಾಗ್ರತೆಯೂ, ಧೈರ್ಯವೂ, ಸ್ಮರಣೆಯೂ, ದೂರದೃಷ್ಟಿ ಉಂಟಾಗಿ ಕಾರ್ಯಾರಂಭ ಮಾಡುವದೂ ಇವು ಐಶ್ವರ್ಯಕ್ಕೆ ಕಾರಣಗಳು.

ತಪೋವಂತರಿಗೆ ತಪಸ್ಸೇ ಬಲವು. ಬ್ರಹ್ಮವೇತ್ತರಿಗೆ ವೇದವೇ ಬಲವು. ದುಷ್ಟರಿಗೆ ಪರಹಿಂಸೆಯೇ ಬಲವು, ಗುಣವಂತರಿಗೆ ಕ್ಷಮಾಗುಣವೇ ಬಲವು.

ಉದಕವೂ, ಮೂಲಗಳೂ, ಕ್ಷೀರವೂ, ಹವಿಸ್ಸೂ ಇವುಗಳನ್ನು ವರ್ಜಿಸದೆ ಹೋಗುವದು ಬ್ರಾಹ್ಮಣಾಜ್ಞೋಲಂಘನೆ ಮಾತದೆ

ಹೋಗುವದು ಗುರು ವಾಕ್ಯ ಪ್ರಕಾರ ನಡಿಯುವದು ಅದು ಸದ್ಭೋವೆಯೂ,' ಇವು ಎಂಟು ವ್ರತಹಾನಿಯನ್ನು ಮಾಡುವವು.

ತನಗೆ ಪ್ರತಿಕೂಲವಾದ ಕಾರ್ಯವನ್ನು ''ಎರಡನೇಯವನಿಗೆ ಕೊಡಿಸದೆ ಹೋದ ಹಾಗಾದರೆ ಈ ಸೂಕ್ಷ್ಮದಿಂದ ಧರ್ಮವುಂಟಾಗುತ್ತದೆ. ಇಲ್ಲದೆ ಹೋದ ಹಾಗಾದರೆ ಅಧರ್ಮವುಂಟಾಗುವದು.

ಶಾಂತದಿಂದ ಕ್ರೋಧವನ್ನು, ಸಾಧುತ್ವದಿಂದ ದುಷ್ಟನನ್ನು, ದ್ರವ್ಯದಾನದಿಂದ ಅರ್ಥಕಾರ್ಪಣ್ಯವುಳ್ಳವನನ್ನು, ತನ್ನ ಸತ್ಯವಾಕ್ಯದಿಂದ ಎರಡನೇಯುವನು ಹೇಳುವ ಅಪದ್ಧವಾಕ್ಯವನ್ನು ಈ ಮೇರೆ ಜಯಿಸಬೇಕು.

ಸ್ತ್ರೀ ಸಾನಿಧ್ಯದಿಂದ ದೂರ್ತನಾದ ಜಾರನು, ಮಂದ ಬುದ್ಧಿಯುಳ್ಳವನು, ಭಯಶೀಲನು, ಕೋಪಿಷ್ಟನು, ತಾನೇ ಪುರುಷನೆಂದು ಅಹಂಕಾರವುಳ್ಳವನು, ಚೋರನು, ಕೃತಘ್ನನನು, ಪರಮಾತ್ಮನಿಲ್ಲವೆಂಬುವ ನಾಸ್ತಿಕನು, ಇವರಲ್ಲಿ ವಿಶ್ವಾಸವಿಡಬಾರದು.

ನಿರಂತರದಲ್ಲೂ ವೃದ್ಧೋಪ ಸೇವೆಯಾಗಿ ಸರ್ವಭೂತನಮಸ್ಕಾರಪರನಾದವನಿಗೆ ಆಯುಃ ಪ್ರಮಾಣವು, ಪ್ರಜ್ಞಾವಿಶೇಷವು, ಯಶಸ್ಸು, ದೇಹದಾರಢ್ಯವು, ಈ ನಾಲ್ಕು ಪ್ರವರ್ಧಮಾನವಾಗುವದು

ಅತಿಕ್ಲೇಶವು, ಧರ್ಮಾತಕ್ರಮವು, ಶತ್ರುಗಳಿಗೆ ನಮ್ರನಾಗುವದು ಇವುಗಳಿಂದುಂಟಾಗುವ ಪ್ರಯೋಜನಗಳಲ್ಲಿ ಮನಸ್ಸನ್ನಿಡಬೇಡ.

ವಿದ್ಯವಿರದ ಪುರುಷನೂ ಪ್ರಜಾರಹಿತವಾದ ದಾಂಪತ್ಯವೂ ಆಹಾರವಿರದ ಪ್ರಜೆಗಳೂ ಅರಸಿರದ ರಾಜ್ಯವೂ ಇವುಗಳ ದರ್ಶನ ಕಾಲದಲ್ಲಿ ವ್ಯಸನಪಡತಕ್ಕದ್ದು.

ಪ್ರಾಣಧಾರಿಗಳಿಗೆ ಮಾರ್ಗವು ನಡಿಯುವದೂ ಪರ್ವತಗಳಲ್ಲಿ ಉದಕವಿರುವದೂ ಸ್ತ್ರೀಯರಿಗೆ ಸಂಭೋಗಾಭಾವವೂ ಮನಸ್ಸಿನಲ್ಲಿ ದುಷ್ಟವಾಕ್ಕುಗಳುಂಟಾಗಿರುವದೂ ಇವು ಇವುಗಳಿಗೆ ವಾರ್ಧಿಕ್ಯಗಳು.

ವೇದಗಳಿಗೆ ಆವರ್ತಿ ಇರದೆ ಹೋಗುವದೂ, ಬ್ರಾಹ್ಮಣರಿಗೆ ವ್ರತಗಳು ಮಾಡದೆ ಹೋಗುವದೂ, ಭೂಮಿಗೆ ಐದು ನದಿಗಳು ಸಮುದ್ರದಲ್ಲಿ ಕೂಡುವ ಪ್ರದೇಶವೂ, ಪುರುಷನಿಗೆ ಸುಳ್ಳು ಹೇಳು ವದೂ, ಇವು ಐದೂ ದೋಷಗಳು.

ಪತಿವ್ರತೆಯಲ್ಲಿ ಅತಿ ಸಂತೋಷವೂ, ಸ್ತ್ರೀಯರು ಪತಿಯನ್ನು ಬಿಟ್ಟಿರುವದೂ, ಸುವರ್ಣಕ್ಕೆ ರಜಿತ ಸಂಬಂಧವೂ, ರಜಿತಕ್ಕೆ ತವರ ಸಂಬಂಧವು, ತವರಕ್ಕೆ ಸೀಸ ಸಂಬಂಧವೂ, ಸೀಸಕ್ಕೆ ಮಲ ಸಂಬಂಧ ವೂ, ಇವುಗಳು ದೋಷ ಸಂಪಾದಕಗಳು.

ನಿದ್ರಾ ಸೇವೆಯಿಂದ ನಿದ್ರೆಯನ್ನೂ, ಕಾಮದಿಂದ ಸ್ತ್ರೀಯರ ನ್ನೂ, ಕಟ್ಟಿಗೆಗಳಿಂದ ಬೆಂಕಿಯನ್ನೂ ಪಾಪದಿಂದ ಅಸತ್ಯವಾಕ್ಯಗ ಳನ್ನೂ, ಇವುಗಳಿಂದ ಇವು ಜಯಿಸಕೂಡದದವುಗಳು.

ಯಾವನು ಪುನಶ್ಚರಣೆ ಮಾಡುವ ಗಾಯಿತ್ರಾದಿ ಮಂತ್ರಗಳು ಅನ್ನ ದಾನದಿಂ ಜಯಿಸಲ್ಪಟ್ಟವನೋ ಯಾವನಿಂದ ಶತ್ರುಗಳು ಯು ದ್ಧದಲ್ಲಿ ಜಯಿಸಲ್ಪಟ್ಟವರೋ ಅವರ ಜಿವಿತವು ಸಫಲವಾದದ್ದು.

ಸಹಸ್ರಸಂಖ್ಯಾತ ದ್ರವ್ಯವುಳ್ಳವರೂ, ಶತಸಂಖ್ಯಾತ ದ್ರವ್ಯ ವುಳ್ಳವರೂ, ಆದಾಗ್ಯಾದರೂ ಆಶೆಯು ಜೀರ್ಣವಸ್ಥೆಯನ್ನು ಹೊಂದ ದ್ದಾಗದ್ದರಿಂದ ಧೃತರಾಷ್ಟ್ರನೇ ಆಶೆಯನ್ನು ಬಿಡು.

ಭೂಮಿಯಲ್ಲಿರುವ ಧಾನ್ಯಗಳೂ, ಸುವರ್ಣವೂ, ಪಶುಗಳೂ, ಸ್ತ್ರೀಯರೂ ಇವೆಲ್ಲ ಆಶಾವಿಷಯದಲ್ಲಿ ಒಬ್ಬನಿಗೆ ಸಾಲದವಗಳೆಂದು ತಿಳಿದವನು ಮೋಹಪಡನು.

ಅರಸೇ ಪುನಃ ಹೇಳುತ್ತೇನೆ. ನಿನ್ನ ಮಕ್ಕಳಲ್ಲೂ ಪಾಂಡವರ ಲ್ಲೂ ಸಮ ಬುದ್ಧಿಯುಂಟಾದವನಾದರೆ ಉಭಯತ್ರರಿಗೂ ಸಮವಾ ಗಿ ಭೂಮಿಯನ್ನು ಭಾಗಮಾಡಿಕೊಡು.

# ಎಂಟನೇ ಅಧ್ಯಾಯು.

ಯಾವ ಪುರುಷನು ಸತ್ಪುರುಷರಿಂದ ಪೂಜೆಮಾಡಲ್ಪಟ್ಟು ಕಾರ್ಯಗಳಲ್ಲಿ ಆಸಕ್ತಿಯಿರದೆ ತನ್ನ ಸಾಮರ್ಥ್ಯವನ್ನು ವ್ಯಯಮಾಡದೆ ಇರುವನೋ ಅವನು ಪ್ರಶಸ್ತನಾದ್ದರಿಂದ ಅವನ ವಿಷಯವಾಗಿ ಸತ್ಪುರುಷರು ಪ್ರಸನ್ನರಾಗುವರು.

ತಾನು ಎರಡನೆಯುವನಿಂದ ನಿಂದಿತನಾಗದೆ ಅನರ್ಥಯುಕ್ತವಾದ ಮಹತ್ತರವಾದ ಪ್ರಯೋಜನವನ್ನು ಯಾವನು ಬಿಡುವನೋ ಅವನು ಸುಖದುಃಖಗಳನ್ನು ತ್ಯಾಗಮಾಡಿ ಬಿಟ್ಟ ಸರ್ಪದ ಹಾಗೆ ಪ್ರಕಾಶಿಸುವನು.

ಗುಣಾಧಿಕರಲ್ಲಿ ದುರ್ಗುಣಾರೋಪಣೆ ಮಾಡುವದೂ, ರಾಜ ಸಮೀಪದಲ್ಲಿರುವ ಪುರುಷನಲ್ಲಿ ಖಲಭಾವವನ್ನು ಆರೋಪಣೆ ಮಾಡುವದೂ, ತಂದೆ ಮೊದಲಾದ ಗರುಗಳಲ್ಲಿ ಮಿಥ್ಯಾವಾದಗಳಿಂದ ನಿರ್ಬಂಧ ಮಾಡುವದೂ, ಅತಿವಾದದಿಂದ ಇವು ಬ್ರಹ್ಮಹತ್ಯಕ್ಕೆ ಸಮಾನಗಳು.

ಗುಣವಂತರಲ್ಲಿ ದೋಷಾರೋಪಣೆಯಿಂದ ಮೃತ್ಯುವಿಗೆ ಸಮಾನವಾದ ಅಸೂಯೆಪಡುವದೂ ಅತಿವಾದದಿಂದ ಎರಡನೇಯುವರಿಗೆ ತೇಜೋವಧೆಮಾಡುವದೂ ಗುರುಶಿಶ್ರೂಷೆ ಮಾಡದೆ ತ್ವರೆಬೀಳುತ್ತ ಆತ್ಮಶ್ಲಾಘನೆಮಾಡಿಕೊಳ್ಳುವದೂ, ಈ ಮೂರು ವಿದ್ಯಾರ್ಥಿಗೆ ಶತ್ರುಗಳು.

ಆಲಶ್ಯವೂ, ಮದಮೋಹಗಳೂ, ಚಾಪಲ್ಯವೂ, ಅತಿಭಾಷೆಯೂ, ಸ್ತಬ್ಧನಾಗಿರುವದೂ ಅತ್ಯಹಂಕಾರವೂ, ತ್ಯಾಗ ಆಗದೇ ಹೋಗುವದೂ, ಇವು ಏಳು ವಿದ್ಯಾರ್ಥಿಗಳಲ್ಲಿ ಗೋಷಗಳು.

ಸುಖಾರ್ಥಿಗೆ ವಿದ್ಯವುಂಟಾಗದು. ಆದಕಾರಣ ವಿದ್ಯವನ್ನು ಬಿಡತಕ್ಕದ್ದು ವಿದ್ಯಾರ್ಥಿಗೆ ಸುಖವಿಲ್ಲದ್ದರಿಂದ ಸುಖವನ್ನು ಬಿಡತಕ್ಕದು.

ಕಾಷ್ಠಗಳ ಸಂಬಂಧದಿಂದ ಅಗ್ನಿಯೂ, ನದಿಗಳ ಸಂಬಂಧ ದಿಂದ ಸಮುದ್ರವೂ, ಭೂತ ಸಂಬಂಧದಿಂದ ಯಮನೂ, ಪುರುಷ ಸಂಗದಿಂದ ಸ್ತ್ರೀಯರೂ, ಇವು ತೃಪ್ತಿವುಂಟಾಗುವವುಗಳಾಗುವದಿಲ್ಲ.

ಆಶೆ ಧೈರ್ಯವನ್ನೂ, ಸಮೃದ್ಧಿ ಅಂತರಾತ್ಮನನ್ನೂ, ಕ್ರೋಧ ಸಂಪತ್ತುಗಳನ್ನೂ, ಕಾರ್ಪಣ್ಯ ಯುಶಸ್ಸನ್ನೂ, ಪಾಲನೆಮಾಡದೆ ಹೋ ಗುವದು. ಪಶುಗಳನ್ನು ನಾಶಮಾಡುವದು. ಆದರೆ ಕೋಪಿಷ್ಠನಾದ ಒಬ್ಬ ಬ್ರಾಮ್ಹಣನು ರಾಷ್ಟ್ರವನ್ನು ನಾಶಮಾಡುವದು.

ಕಬ್ಬಿಣವು, ಕಂಚುರಥವು, ವಿನೋದಾರ್ಥವಾಗಿ ಜೂಜಾಡುವವನ ಸಂಗಡ ಜೂಜು, ವಿಷ ಪರೀಕ್ಷಕಗಳಾದ ಚಕೋರಾದಿಪಕ್ಷಿಗಳೂ ಜಾತಕರ್ಮಾದಿ ಸಂಸ್ಕಾರಗಳಿಂದಲೂ, ವಾದ್ಯಗಳಿಂದಲೂ, ಶ್ರೋತ್ರಿಯು ನಾದವನೂ, ವೃದ್ಧನಾದ ಜಾತಿಯೂ, ದ್ರವ್ಯರಹಿತನಾದ ಸತ್ಕುಲಪ್ರ ಸೂತನೂ ಇವರು ನಿರಂತರದಲ್ಲಿ ನಿನ್ನ ಬಳಿಯಲ್ಲಿರಲಿ.

ದೇವತೆಗಳೂ, ಎತ್ತುಗಳೂ, ಚಂದನವೂ, ವೀಣೆಯೂ, ಕನ್ನ ಡಿಯೂ, ಜೇನತುಪ್ಪವೂ, ತುಪ್ಪವೂ, ತಾಮ್ರಪಾತ್ರೆಗಳಸಮೂಹ ವೂ, ಲೋಹವೂ, ಬಲಮುರಿಶಂಖವೂ, ಶಾಲಿಗ್ರಾಮವೂ, ಗೋರೋ ಚನವೂ, ಇವು ದೇವಬ್ರಾಮ್ಹಣ ಅಥಿತಿಪೂಜಾರ್ಥವಾಗಿ ಮನೆಯಲ್ಲಿ ಡಲ್ಪಟ್ಟಿದ್ದವೆಂದು ಮನುವು ಹೇಳಿದ್ದಾನೆ.

ಉತ್ಕೃಷ್ಟನಾದ ಶ್ರೇಷ್ಠವಾದ ಪುಣ್ಯಸಂಪಾದಕವಾದ ಮಾರ್ಗವ ನ್ನು ನಿನ್ನನ್ನು ಕುರಿತು ತಿಳಿಸುತ್ತಿದ್ದೇನೆ. ಯಾವದೆಂದರೆ ಕಾಮವೂ ಭಯವೂ, ಲೋಭವೂ. ತನ್ನ ಬದುಕುವಿಕೆಯೂ, ಯಾವಗಳ ದೆಶೆ ಯಿಂದ ಬಂದಾನೊಂದು ಕಾಲದಲ್ಲಾದರೂ ಧರ್ಮವನ್ನು ಬಿಡಬಾ ರದು. ಯಾಕಂದರೆ ಧರ್ಮವು ನಿತ್ಯವಾದದ್ದು, ಸುಖದುಃಖಗಳು ಅ ನಿತ್ಯವಾದದ್ದು. ಜೀವನು ನಿತ್ಯನು ಇವನಿಗೆ ಜೀವತ್ವ ಸಂಪಾದನೆಯು

ಲ್ಲಿ ಕಾರಣವಾದ ಅವಿದ್ಯೆಯು ಅನಿತ್ಯವಾದದ್ದು. ಅದ್ದರಿಂದ ಅವಿದ್ಯೆವನ್ನು ತ್ಯಾಗವಮಾಡಿ ಆತ್ಮನಿರತನಾಗಿ ಸಂತೋಷವೇ ಪರಮ ಲಾಭವು.

ಧನಧಾನ್ಯಪೂರ್ಣವಾದ ಭೂಮಿಯನ್ನು ಪರಿಪಾಲನೆಮಾಡಿ ಭೋಗಗಳನ್ನು ರಾಜ್ಯಗಳನ್ನು ಬಿಟ್ಟು ಯಮನ ಸ್ವಾಧೀನರಾದ ಮಹಾಪ್ರಭಾವ ಶಾಲಿಗಳಾದ ಅರಸರನ್ನು ನೋಡು.

ಸತ್ತಮಗನನ್ನು ತನ್ನ ಮನೆಯಿಂದ ಹೊರಗೆ ತಕ್ಕೊಂಡು ಹೋಗಿ ಬಿಚ್ಚಿಕೊಂಡು ಕೂದಲುಗಳುಂಟಾದವನಾಗಿ ಅಳುತ್ತ ಚಿತೆಯ ಮಧ್ಯದಲ್ಲಿ ಕಟ್ಟಿಗೆಯೋಪಾದಿಯಲ್ಲಿ ಹಾಕುತಾರೆ.

ಮೃತವಾದ ಪುರುಷನ ದ್ರವ್ಯವನ್ನು ಇತರರು ಅನುಭವಿಸುತ್ತಾರೆ. ಶರೀರದಲ್ಲಿರುವ ಧಾತುಗಳನ್ನು ಅಗ್ನಿಯೂ ಪಕ್ಷಿಗಳೂ ಭಕ್ಷಿಸುತ್ತವೆ. ತಾನು ಮಾಡಿದ ಪುಣ್ಯಪಾಪಗಳಿಂದ ಸುತ್ತಲ್ಪಟ್ಟವನಾಗಿ ಸುರಲೋಕವನ್ನು ಕುರಿತು ಹೋಗುವವನಾಗುತ್ತಾನೆ.

ಅಗ್ನಿಯಲ್ಲಿಡಲ್ಪಟ್ಟ ಪುರುಷನ ಸಂಪಾದಿತವಾದ ಸುಕೃತ ದುಷ್ಕೃತರೂಪಗಳಾದ ಕರ್ಮಗಳು ಅನುಸರಿಸುತ್ತವೆಯಾಗಿ ಮಾಡತಕ್ಕದ್ದು.

ಈ ಲೋಕಕ್ಕಿಂತ ಊರ್ಧ್ವವಾದ ಸ್ವರ್ಗಲೋಕದಲ್ಲೂ ಪಾತಾಳದಲ್ಲೂ ತಮೋಗುಣ ಪ್ರಧಾನವಾದ ಪುರುಷರಿಂದ ಹೊಂದ ತಕ್ಕ ಅಂಧತಾಮಿಶ್ರವೆಂಬ ಸ್ಥಾನವಿದೆಯೆಂದು ತಿಳಿದು ಆ ಅಂಧತಾಮಿಶ್ರವು ನಿನ್ನನ್ನು ಸ್ಪರ್ಶಿಸದ ಹಾಗಿರು.

ಈಗ ನಾನು ಹೇಳುವ ಮಾತು ಕೇಳಿ ತಿಳಿಯುವದಕ್ಕೆ ನೀನು ಸಮರ್ಥನಾದ ಹಾಗಾದರೆ ಜೀವಲೋಕದಲ್ಲಿ ಮಹತ್ತಾದ ಯಶಸ್ಸನ್ನು ಹೊಂದುತ್ತೀ. ಆದ್ದರಿಂದ ಇಹಪರಲೋಕಗಳಲ್ಲಿ ನಿನಗೆ ಭಯವಿಲ್ಲ.

ಪುಣ್ಯವೆಂಬುವ ತೀರ್ಥವುಳ್ಳ ಸತ್ಯವೆಂಬುವ ಸ್ಥಳದದೆಶೆಯಿಂದ ಹುಟ್ಟುವ ಸದ್ವೃತ್ತಿಯುಕ್ತ ವಾಕ್ಯಗಳನ್ನು ಮನಸಿನಲ್ಲಿ ಧಾರಣೆಮಾ

ಡುವದೆಂಬುವ ಎರಡುಧಡಗಳುಳ್ಳ ಹೊಳಯಲ್ಲಿ ಸ್ನಾನವಮಾಡಿದವನಾಗಿ ವಿಷಯಾಸಕ್ತನಾಗದವನು ಪವಿತ್ರನಾದ ಪರಮಾತ್ಮನು.

ಕಾಮಕ್ರೋಧಗಳೆಂಬ ಮೊಸಳೆಗಳೂ ಪಂಚೇಂದ್ರಿಯಗಳೆಂಬ ಜಲವೂ ಉಳ್ಳ ನದಿಯನ್ನು ಧೈರ್ಯವೆಂಬುವ ಹರಿಗೋಲನ್ನುಂಟುಮಾಡಿಕೊಂಡು ಸಂಸಾರವೆಂಬುವ ದುರ್ಘಟಸ್ಥಾನಗಳನ್ನು ದಾಟು. ಪ್ರಜ್ಞಾವೃದ್ಧನೂ ಧರ್ಮವೃದ್ಧನೂ ವಿದ್ಯಾವೃದ್ಧನೂ ವಯೋವೃದ್ಧನೂ ಆದ ತನ್ನ ಬಂಧುವನ್ನು ಕಾರ್ಯಕಾಲಗಳಲ್ಲಿ ಪೂಜೆಮಾಡಿ ಆಲೋಚನೆಯನ್ನು ಕೇಳುವವನು ಬಂದಾನೊಂದು ಕಾಲದಲ್ಲಾದರೂ ಮೋಹಪಡನು.

ಧೈರ್ಯದಿಂದ ಶಿಶ್ನೋದರಗಳನ್ನು, ನೇತ್ರಗಳಿಂದ ಹಸ್ತಪಾದಗಳನ್ನು, ಮನಸ್ಸಿನಿಂದ ಚಕ್ಷುಶ್ಶ್ರೋತ್ರಗಳನ್ನು, ಕರ್ಮದಿಂದ ಮನೋವಾಕ್ಕುಗಳನ್ನು ಸಂರಕ್ಷಿಸಬೇಕು.

ನಿರಂತರ ಕಾಲತ್ರಯದಲ್ಲೂ ಸ್ನಾನ ಮಾಡುತ್ತ ಕಾಲದಲ್ಲಿ ಯಜ್ಞೋಪವೀತ ಧಾರಣೆಮಾಡುತ್ತ ವೇದಾಧ್ಯಯನಪರನಾಗಿ ಪತಿತನಿಂದ ಅನ್ನವನ್ನು ಸಂಗ್ರಹಿಸದೆ ನಿಜವನ್ನು ನುಡಿಯುತ್ತ ಗುರು ಶುಶ್ರೂಷಾಪರನಾಗಿರುವಂಥ ಬ್ರಾಹ್ಮಣನು ಬ್ರಹ್ಮಲೋಕದಿಂದ ಬೀಳನು.

ವೇದಾಧ್ಯಯನ ಮಾಡಿ ಅಗ್ನಿಹೋತ್ರಿಯಾಗಿ ಅನಂತರ ಯಜ್ಞಗಳನ್ನು ಮಾಡಿ ಗೋಬ್ರಾಹ್ಮಣರ ರಕ್ಷಣಾರ್ಥವಾಗಿ ಶತ್ರುಗಳನ್ನು ಜಯಿಸಿ ಯುದ್ಧದಲ್ಲೇ ಶತ್ರುಗಳಿಂದ ಸಂಹೃತನಾದ ಕ್ಷತ್ರಿಯನು ಸ್ವರ್ಗವನ್ನು ಹೊಂದುತ್ತಾನೆ.

ವೈಶ್ಯನು ಅಧ್ಯಯನ ಮಾಡಿ ಬ್ರಾಹ್ಮಣಕ್ಷತ್ರಿಯ ವರ್ಣಗಳನ್ನೂ ಆಶ್ರಿತರನ್ನೂ ದ್ರವ್ಯದಾನದಿಂದ ಸಂತೋಷಿತಮಾಡಿ ಅಗ್ನಿಹೋತ್ರ ಕಾಲದಲ್ಲುಂಟಾಗುವ ಹೋಮ ಧೂಮವನ್ನು ಆಘ್ರಾಣಮಾಡಿ ಮೃತನಾದ ತರುವಾಯ ದೇವತೆಗಳಿಂದ ಕೊಡಲ್ಪಡುವ ಸುಖಗಳನ್ನನುಭವಿಸುವನು.

ಬಾಹ್ಮಣ ಕ್ಷತ್ರಿಯ ವೈಶ್ಯ ವರ್ಣಗಳನ್ನು ಶೂದ್ರನು ಯಥಾಕ್ರಮವಾಗಿ ಸೇವೆಮಾಡಿ ಸ್ವರ್ಗವನ್ನು ಹೊಂದುವನು.

ಚಾತುರ್ವರ್ಣ ಧರ್ಮಗಳನ್ನು ನಿನಗೆ ತಿಳಿಸಿದ್ದೇನೆ. ಆದರೆ ನಾನು ಹೇಳುವ ಕಾರಣಗಳನ್ನು ಕೇಳು ರಾಜ್ಯವಿಲ್ಲದೆ ಕ್ಷಾತ್ರಧರ್ಮದಿಂದ ರಹಿತನಾದ ಧರ್ಮರಾಯನನ್ನು ರಾಜ್ಯದಲ್ಲಿಟ್ಟು ಸ್ವಧರ್ಮಸ್ಥನನ್ನು ಮಾಡೆಂದು ವಿದುರನು ಹೇಳಲು, ಧೃತರಾಷ್ಟ್ರನು ಅಂದದ್ದು--ನೀನು ಹೇಳಿದ ಪ್ರಕಾರ ನನಗುಂಟಾಗುವ ಬುದ್ಧಿ ದುರ್ಯೋಧನನನ್ನು ಹೊಂದಿದ ಕಾಲದಲ್ಲಿ ವಿಪರೀತವಾಗುತ್ತದೆ. ದೈವ ಪ್ರಯತ್ನವು ದಾಟಗೂಡದ್ದಾದ್ದರಿಂದ ಪುರುಷಪ್ರಯತ್ನವು ನಿರರ್ಥಕವಾದದ್ದು.

---

# ಯಕ್ಷ ಪ್ರಶ್ನೆ.

ವೈಶಂಪಾಯನ ಮುನಿಯು ಜನಮೇಜಯರಾಜಗೆ ಹೇಳಿದ್ದೇನಂದರೆ—ಒಂದಾನೊಂದು ಕಾಲದಲ್ಲಿ ಧರ್ಮ, ಭೀಮ, ಅರ್ಜುನ, ನಕುಲ, ಸಹದೇವ ಪಂಚಪಾಂಡವರು ದ್ವೈತವನದಲ್ಲಿ ಇರುವಾಗ್ಗೆ, ಒಬ್ಬ ಬ್ರಾಹ್ಮಣನು ಅವರಿಗೆ ಅಂದದ್ದು—ಹೇ ಮಹಾರಾಯನೆ ! ನನ್ನ ಅಗ್ನಿಹೋತ್ರದ ಅರಣಿ ಅಂದರೆ ಬೆಂಕಿಯನ್ನು ಕೆಡವುವ ಕಟ್ಟಿಗೆಯನ್ನು ನಾನು ಗಿಡದಮೇಲೆ ಇಟ್ಟಿರಲು, ಅವನ್ನು ಒಂದು ಮೃಗವು ತಕ್ಕೊಂಡು ಓಡಿಹೋಯಿತು. ಅದನ್ನು ಗೊತ್ತುಹಚ್ಚಿ ನನ್ನ ಅರಣಿಯನ್ನು ನನಗೆ ಕೊಡಬೇಕು. ಇಲ್ಲದೇ ಹೋದರೆ ಮಾತ್ರ ಅಗ್ನಿಹೋತ್ರದ ಭಂಗವಾಗುತ್ತದೆ. ಹೀಗೆ ಹೇಳಿದ ಬ್ರಾಹ್ಮಣನ ಮಾತನ್ನುಕೇಳಿ ಆ ಪಂಚಪಾಂಡವರು ಯಾವತ್ತರು ತಮ್ಮ ಧನುಷ್ಯಬಾಣಗಳನ್ನು ತಕ್ಕೊಂಡು ಯಾವತ್ತು ಅಡವಿಯನ್ನು ಶೋಧಿಸಿದಾಗ್ಯಾದರೂ, ಆ

ಮೃಗದ ಸುದ್ದಿ ಹತ್ತಲಿಲ್ಲ. ಮತ್ತು ಹಸಿವೆ ನೀರಡಿಕೆಗಳಿಂದ ಪೀಡಿತರಾಗಿ ಬಂದು ಆಲದಮರದ ಕೆಳಕ್ಕೆ ಕೂತುಕೊಂಡಾಗ್ಗೆ, ಧರ್ಮರಾಜನು ಅಂದದ್ದೇನಂದರೆ—ನಕುಲನೇ ! ತೃಷೆಯಿಂದ ಪ್ರಾಣವು ವ್ಯಾಕುಲಪಡಹತ್ತಿರುವದಯ್ಯಾ ! ಎಲ್ಲಿಂದಾದರೂ ನೀರು ಸ್ವಲ್ಪ ತಕ್ಕೊಂಡು ಬಾ, ಅದನ್ನು ಕೇಳಿ ನಕುಲನು ಬಂದು ಎತ್ತರವಾದ ಗಿಡವನ್ನು ಹತ್ತಿ ನೋಡುವಾಗ್ಗೆ ದೂರದಲ್ಲಿ ನೀರಿನ ಝುರಿಗಳು ಕಂಡು ಬಂದವು. ಮುಂದೆ ಅದೇ ಸುಳವು ಹಿಡಿದು ಅಲ್ಲಿಗೆ ಹೋಗಿ ನೀರಿಗೆ ಕೈಹಚ್ಚಲು ಎಲೆಲಾ ! ಮೊದಲು ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಕೊಡು, ಆ ಮೇಲೆ ನೀರುಕುಡಿ, ಉತ್ತರಕೊಡದೆ ಹಾಗೇ ನೀರು ಕುಡಿದದ್ದರಿಂದ ಅಲ್ಲೇ ನಕುಲನು ಅಚೇತನನಾಗಿ ಬಿದ್ದನು. ಅವನ ಶೋಧಾರ್ಥವಾಗಿ ಧರ್ಮರಾಯನು ಭೀಮನನ್ನು ಕಳಿಸಿದನು. ಹೀಗೆ ಒಬ್ಬರ ಹಿಂದೊಬ್ಬರನ್ನು ಒಬ್ಬೊಬ್ಬರ ಶೋಧಾರ್ಥವಾಗಿ ಅರ್ಜುನ, ಸಹದೇವರನ್ನು ಕಳುಹಿಸಿದನು. ಆ ನಾಲ್ವರೂ ನೀರು ಕುಡಿದು ಬಿದ್ದಿರುವದರಿಂದ ಧರ್ಮರಾಜನು ಬಹಳ ಹೊತ್ತು ಹಾದಿನೋಡಿ, ತನ್ನ ಬಂಧುಗಳು ಬರುವದಿಲ್ಲವೆಂತ ತಿಳಿದು, ಅಡವಿಯಲ್ಲಿ ಹುಡುಕುತ್ತಾ ಆ ನೀರಿನಹತ್ತರ ಬಂದನು. ಅಷ್ಟರಲ್ಲಿ ಅಲ್ಲಿ ಅಚೇತನವಾಗಿ ಬಿದ್ದಿರುವ ಬಂಧುಗಳನ್ನು ನೋಡಿ ಬಹಳ ದುಃಖಿಸಹತ್ತಿದನು. ಇಷ್ಟರಲ್ಲಿ ವೃಕ್ಷದಮೇಲಿಂದ ಶಬ್ದ ಕೇಳಬಂದದ್ದೇನಂದರೆ—ಎಲೈ, ಈ ಸ್ಥಳದ ಸ್ವಾಮಿಯಾದ ನಾನೊಬ್ಬ ಯಕ್ಷನು. ಮತ್ತು ನಿನ್ನ ಬಂಧುಗಳಿಗೆ ಒಂದಿರುವ ಅವಸ್ಥೆಯು ನನ್ನಿಂದಾಗಿರುವದು. ಆದರೆ ಈಗ ನನ್ನ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಕೊಟ್ಟಲ್ಲಿ ದೈವಯೋಗದಿಂದ ನಿನ್ನ ಬಂಧುಗಳು ಜೀವಂತರಾಗಬಹುದು. ಹಾಗಿಲ್ಲದೆ ನೀನು ನನ್ನಾಜ್ಞೆಯನ್ನು ಮುರಿದು ನೀರನ್ನು ಕುಡಿದರೆ ನಿನ್ನ ಗತಿಯಾದರೂ ನಿನ್ನ ಬಂಧುಗಳಂತಾಗುವದು. ಈ ಮಾತನ್ನು ಕೇಳಿ ಧರ್ಮರಾಜನು ಮಾತಾಡಿದ್ದೇನಂದರೆ—ಯಕ್ಷನೆ! ನಿನ್ನ ಎಂಥೆಂತ

ಪ್ರಶ್ನೆಗಳಿರುತ್ತವೆ ಅವುಗಳನ್ನು ಹೇಳು. ನಾನು ನನ್ನ ಯಥಾಮತಿಯು ಪ್ರಕಾರವಾಗಿ ಉತ್ತರಕೊಡುವೆನು. ಅವು ಯಾವವೆಂದರೆ—

ಪ್ರ—ಬ್ರಾಹ್ಮಣಂಗೆ ದೊಡ್ಡಿಪ್ತನ ಯಾತರಿಂದ? ಉ-ವೇದಶಾಸ್ತ್ರದಿಂದ.
ಪ್ರ—ಇಚ್ಛಿಸಿದಫಲ ಯಾತರಿಂದ ಸಿಗುತ್ತದೆ? ಉ—ತಪಸ್ಸಿನಿಂದ
ಪ್ರ—ಸುಬುದ್ಧಿ ಯಾತರಿಂದಾಗುತ್ತದೆ? ಉ—ಹಿರಿಯರ ಸೇವೆಯಿಂದ.
ಪ್ರ—ಬ್ರಾಹ್ಮಣರಿಗೆ ದೈವತ ಯಾವದು? ಉ—ವೇದ.
ಪ್ರ—ಅವರ ಪರಂಪರ ಧರ್ಮ ಯಾವದು? ಉ—ತಪಶ್ಚರ್ಯ.
ಪ್ರ—ಅವರ ಸಾವು ಯಾವದು? ಉ—ದೇಹದ ಮೇಲೆ ಅಭಿಮಾನ.
ಪ್ರ—ಹೃದಯ ಯಾರಿಗೆ ಇಲ್ಲ? ಉ—ಕಲ್ಲಿಗೆ.
ಪ್ರ—ತನ್ನ ವೇಗದಿಂದ ಬೆಳೆಯುವದು ಯಾವದು? ಉ—ನದಿ.
ಪ್ರ—ಕುಟುಂಬವತ್ಸಲನಿಗೆ ಮಿತ್ರ ಯಾರು? ಉ—ದ್ರವ್ಯ.
ಪ್ರ—ಗೃಹಸ್ಥನಿಗೆ ಮಿತ್ರ ಯಾರು? ಉ—ಭಾರ್ಯ.
ಪ್ರ—ರೋಗಿಗೆ ಮಿತ್ರ ಯಾರು? ಉ—ಔಷಧ.
ಪ್ರ—ಮೃತ್ಯುವಿಗೆ ಮಿತ್ರ ಯಾರು? ಉ—ದಾನಧರ್ಮ.
ಪ್ರ—ಈ ಲೋಕದಲ್ಲಿ ಅಮೃತ ಯಾವದು? ಉ—ಹಾಲು.
ಪ್ರ—ಥಂಡಿಗೆ ಔಷಧ ಯಾವದು? ಉ—ಅಗ್ನಿ.
ಪ್ರ—ಎಲ್ಲರಿಗೂ ಸ್ಥಾನ ಯಾವದು? ಉ—ಪೃಥ್ವಿ.
ಪ್ರ—ಧರ್ಮದ ಮುಖ್ಯ ಸ್ಥಾನ ಯಾವದು? ಉ—ದಕ್ಷತೆ.
ಪ್ರ—ಯಶಸ್ಸಿಗೆ ಮುಖ್ಯ ಸ್ಥಾನ ಯಾವದು? ಉ—ದಾನ.
ಪ್ರ—ಸ್ವರ್ಗದ ಮುಖ್ಯ ಸ್ಥಾನ ಯಾವದು? ಉ—ಸತ್ಯ
ಪ್ರ—ಅವರಿಗೆ ಪಾಪ ಯಾವದು? ಉ—ಅನೇಯುವರ ದೋಷ ಆಡೋಣ.
ಪ್ರ—ಕ್ಷತ್ರಿಯರಿಗೆ ದೈವತ ಯಾರು? ಉ—ಧನುರ್ಬಾಣ.
ಪ್ರ—ಅವರ ಪರಂಪರ ಧರ್ಮ ಯಾವದು? ಉ—ಯುದ್ಧಮಾಡೋಣ.

ಪ್ರ—ಅವರಿಗೆ ಮರಣ ಯಾವದು? ಉ—ಯುದ್ಧದಲ್ಲಿ ಅಂಜೋಣ
ಅಥವಾ ಓಡೋಣ.
ಪ್ರ—ಅವರಿಗೆ ಪಾಪ ಯಾವದು? ಉ—ಶರಣಾಗತರ ರಕ್ಷಣೆಮಾಡದೆ
ಇರೋಣ.
ಪ್ರ—ಜಲದಲ್ಲಿ ಉತ್ತಮ ಜಲ ಯಾವದು? ಉ—ಪರ್ಜನ್ಯದ್ದು.
ಪ್ರ—ಸಲ್ಪ ಬಿತ್ತಿ ಬಹಳ ಆಗುತ್ತದೆ ಏನು? ಉ—ಧಾನ್ಯ ಯಾಚಕರಿ
ಪ್ರ—ಫಲದಲ್ಲಿ ಫಲ ಯಾವದು?. ಉ—ಸುಪುತ್ರಫಲ. [ಗೆ ಕೊಟ್ಟದ್ದು.
ಪ್ರ—ಜೀವಂತವಿದ್ದು ಸತ್ತವ ಯಾರು? ಉ—ಮೂರ್ಖ.
ಪ್ರ—ಪೃಥ್ವಿಗಿಂತ ದೊಡ್ಡದು ಯಾವದು? ಉ—ತಾಯಿ.
ಪ್ರ—ಆಕಾಶಕ್ಕಿಂತಲು ಎತ್ತರ ಯಾರು? ಉ—ತಂದೆ.
ಪ್ರ—ಗಾಳಿಗಿಂತ ಚಪಲ ಯಾರು? ಉ—ಮನ.
ಪ್ರ—ಸುಖದ ಮುಖ್ಯ ಸ್ಥಾನ ಯಾವದು? ಉ—ಸದಾಚರಣೆಯು.
ಪ್ರ—ಮನುಷ್ಯನಿಗೆ ಆತ್ಮಾ ಯಾವದು? ಉ—ಪುತ್ರನು.
ಪ್ರ—ದೈವದಿಂದ ಮಾಡಿದ ಮಿತ್ರ ಯಾರು? ಉ—ಭಾರ್ಯೆ.
ಪ್ರ—ಉಪಜೀವನ ಯಾವದು? ಉ—ಪರ್ಜನ್ಯ.
ಪ್ರ—ಎಲ್ಲರಿಗೂ ರಕ್ಷಕ ಯಾವದು? ಉ—ದ್ರವ್ಯತ್ಯಾಗ.
ಪ್ರ—ಧನದಲಿ ಉತ್ತಮ ಧನವು ಯಾವದು ಉ—ವಿದ್ಯಾಧನ.
ಪ್ರ—ಲಾಭದಲ್ಲಿ ಉತ್ತಮ ಲಾಭ ಯಾವದು ಉ—ಆರೋಗ್ಯ.
ಪ್ರ—ಸುಖದಲ್ಲಿ ವಿಶೇಷ ಸುಖವು ಯಾವದು? ಉ—ಸಂತೋಷವು.
ಪ್ರ—ಈ ಲೋಕದಲ್ಲಿ ಉತಮ ಧರ್ಮ ಯಾವದು? ಉ—ಭೂತದಯ.
ಪ್ರ—ಯಾತರಿಂದ ಮೈತ್ರೀ ಭಾವವು ಕಡಿಮೆಯಾಗಲಾರದು?
ಉ—ಸಾಧುತನದಿಂದ.

ಪ್ರ—ಏನು ಬಿಟ್ಟದ್ದರಿಂದ ಪ್ರಿಯನಾಗುತ್ತಾನೆ? ಉ—ಅಭಿಮಾನವನ್ನು
ಪ್ರ—ಏನು ಬಿಟ್ಟದ್ದರಿಂದ ಶೋಕ ಮಾಡುವದಿಲ್ಲ? ಉ—ಕ್ರೋಧ.

# ನಾರದ ನೀತಿ.

ಸರ್ವ ಬಂಧು ಸಮೇತನಾಗಿ ಧರ್ಮರಾಜನು, ಮಯಾಸುರನಿಂದ ನಿರ್ಮಿಸಲ್ಪಟ್ಟಂಥ ಸಭೆಯಲ್ಲಿ ಕುಳಿತಾಗ್ಗೆ ನಾರದ ಋಷಿಯು ವೀಣಾಪಾಣಿಯಾಗಿ ಭಗವಂತನ ಗುಣಾನುವಾದಗಳ ಗಾಯನವನ್ನು ಮಾಡುತ್ತ ಒಮ್ಮಿಂದೊಮ್ಮೆ ಧರ್ಮರಾಜನ ಸಭೆಗೆ ಬಂದನು. ಕೂಡಲೆ ರಾಜನು ಅರ್ಘ್ಯಪಾದ್ಯಗಳಿಂದ ನಾರದನ ಪೂಜೆಯನ್ನು ಮಾಡಿ ನಮ್ರತನದಿಂದ ಕೈಗಳನ್ನು ಜೋಡಿಸಿಕೊಂಡು ನಿಂತು ಕುಶಲ ಪ್ರಶ್ನೆಗಳನ್ನು ಮಾಡಿ ಸುಮ್ಮನೆ ನಿಂತುಕೊಂಡನು, ಈ ರೀತಿಯಾಗಿ ರಾಜನು ಮಾಡಿದ ಪೂಜೆಯನ್ನು ಆದರಪೂರ್ವಕ ಗ್ರಹಣ ಮಾಡಿ ಪರಮ ಸಂತೋಷಿತನಾಗಿ ಅರಸನ ಕಲ್ಯಾಣಾರ್ಥ ಉದ್ಯುಕ್ತನಾಗಿ ನಾರದನು ಮಾತನಾಡುತ್ತಾನೆ.

ಎಲೈ ಧರ್ಮರಾಜನೇ, ನೀನು ಧರ್ಮ ಋಷಿಯಾಗಿದ್ದಲ್ಲದೆ ನಿನ್ನ ಪ್ರಜೆಗಳು ಸಹ ಧರ್ಮಶೀಲರಿರುತ್ತಾರೆ. ಆದರೆ ನಿನ್ನ ಹೆಸರಿನಂತೆ ನಿನ್ನ ಧರ್ಮವಾದರೂ ಇರುತ್ತದಷ್ಟೇ?

ನಿನಗೆ ರಾಜ್ಯಾದಿಕ ಐಶ್ವರ್ಯವು ಪ್ರಾಪ್ತವಾದನಂತರ ನಿನ್ನ ಮನಸ್ಸು ದರ್ಮಮಾರ್ಗದ ವಿಷಯದಲ್ಲಿ ಪ್ರವರ್ತವಾಗಿರುವದಷ್ಟೇ?

ಈ ಯಾವತ್ತು ರಾಷ್ಟ್ರದಲ್ಲಿ ನಾನೇ ಆರಸನೆಂಬುವ ದುಷ್ಟ ಅಭಿಮಾನವು ನಿನ್ನಲ್ಲಿ ಇಲ್ಲವಷ್ಟೇ ?

ಯಾವ ಧರ್ಮವು ಪೂರ್ವಜರಿಂದ ನಡೆಸು ಬಂದಿರುವದೋ ಅದರಂತೆಯೇ ಅಂಖಡಿತವಾಗಿ ನಡಿಸಿರುತ್ತಿಯಷ್ಟೇ?

ಶಾಸ್ತ್ರಬೋಧಿತ ಕರ್ಮಕ್ಕೆ ಅನುಸರಿಸಿ ನಡಿಯದೆ ಇರುವದರಿಂದ ಯಾವ ದೋಷ ಬರುವದೋ ಅಂಥಾದ್ದರಿಂದ ದೂರಿರುವಿಯಷ್ಟೇ?

ಸ್ವಧರ್ಮದಿಂದ ಅರ್ಥಸಂಪಾದನೆ, ಅರ್ಥದಿಂದ ಧರ್ಮಸಂಪಾದನೆ ಈ ರೀತಿಯಾಗಿ ನಿರಂತರ ನಡಿಯುತ್ತಿರುವಾಗ್ಗೆ ನಾರಾಯಣನಲ್ಲಿ ಮನೋಭಾವದಿಂದ ಭಕ್ತಿಯುನಿಟ್ಟಿರುವಿಯುಷ್ಟೇ?

ಅಧರ್ಮೋತ್ಪಾಧಕ (ಅಧರ್ಮವನ್ನುಂಟು ಮಾಡುವ) ಅಲ್ಲದಂಥ ಯಾವ ಕಾರ್ಯವಿರುವದೋ ಅದನ್ನು ಸ್ವೀಕಾರ ಮಾಡಿರುತ್ತಿಯುಷ್ಟೇ?

ಮೊದಲಿನ ಚಂಚಲವಾದ ಇಂದ್ರಿಯುಗಳು ಕಾಮ ಸಂಯೋಗದಿಂದ ನಿನ್ನನ್ನು ಭ್ರಮಿಷ್ಟನಾಗಿ ಮಾಡಿಲ್ಲವಷ್ಟೇ?

ನಿತ್ಯ ಮತ್ತು ನೈಮಿತ್ತಿಕ ಈ ಎರಡು ಕರ್ಮಗಳು ಅವಶ್ಯವಾಗಿ ಮಾಡಲಿಕ್ಕೆ ಬೇಕೆಂಬುವದನ್ನು ನೀನು ತಿಳಿದಿರುವಿಯುಷ್ಟೇ?

ಕರ್ಮನಿಷೇಧಿಗಳ ಸಂಗಡ ವರ್ಮ ಮಾಡುವದು ಮತ್ತು ಫಲದ ಇಚ್ಛೆಯುನ್ನು ಮಾಡದಿರುವದು ಇವು ನಿನ್ನ ಧ್ಯಾನದಲ್ಲಿರುತ್ತವಷ್ಟೇ?

ಯುತ್ನದಿಂದಲೇ ಅಥವಾ ಯುತ್ನವಿಲ್ಲದೇ ಆಗಲಿ ಅಥವಾ ಸಹದವಾಗಿ ದೈವಯೋಗದಿಂದ ಪ್ರಾಪ್ತವಾದ ಯಾವತ್ತು ಸಂಪತ್ತಿಯು ಎಥಾವಿಭಾಗದಿಂದ ಎಲ್ಲರಕೂಡ ಉಪಭೋಗ ಮಾಡುತ್ತಿಯುಷ್ಟೇ?

ಅದೃಷ್ಟ (ದೈವ) ಪ್ರತಿಕೂಲ ಅಥವಾ ಅನಕೂಲವಾಗಿ ಕಟ್ಟಕಡೆಗೆ ಧರ್ಮವು ನಿಷ್ಫಲವೆಂದು ಭಾಸವಾಗಿ, ಆ ಧರ್ಮದ ವಿಷಯುದ ನಿನ್ನ ಬುದ್ಧಿಯುು ಚಂಚಲತ್ವವನ್ನು ಹೊಂದುವದರಿಂದ ನೀನೇನಾದರೂ ಧರ್ಮಾಚರಣದಿಂದ ನಡಿಯುವದಕ್ಕೆ ತಪ್ಪುವದಿಲ್ಲವಷ್ಟೇ?

ರಾತ್ರಂದಿವಸ (ಕಾಲಮಾನದಿಂದ ಅರವತ್ತು ಘಳಿಗೆಗಳ ಕಾಲವು) ಹರಣ ಮಾಡುತ್ತಿರುವಾಗ್ಗೆ, ಪ್ರತಿಕ್ಷಣಕ್ಕೂ ಎಷ್ಟೆಷ್ಟು ಪಾಪಪುಣ್ಯಗಳನ್ನು ಮಾಡಿದೆನೆಂಬುವದನ್ನು ನಿನ್ನ ಮನಸ್ಸಿನಲ್ಲಿ ವಿಚಾರ ಮಾಡುತ್ತಿಯುಷ್ಟೇ?

ಯಾವಾಗಲೂ ಪರಮಾತ್ಮನ ನಾಮಸ್ಮರಣೆಯನ್ನು ಮಾಡುವದ ರಿಂದ ನಿಶ್ಚಯವಾಗಿ ಮುಂದಿನ ಜನ್ಮದಲ್ಲಿ ಉತ್ತಮ ಲೋಕವು ಪ್ರಾಪ್ತವಾಗುವದೆಂದು ತಿಳಿದು ನೀನು ನಿನ್ನ ಕಲ್ಯಾಣದ ವಿಷಯವಾಗಿ ಉದ್ಯೋಗ ಮಾಡುತ್ತಿಯಷ್ಟೇ?

ಸಾಧುಗಳು ಮೋಕ್ಷಧಾಮಗಳ ದ್ವಾರಪಾಲಕರೆಂಬುದು ತಿಳಿದು ಅವರ ಸೇವೆಯಲ್ಲಿ ತತ್ಪರನಾಗಿರುವಿಯಷ್ಟೇ?

ಯಾವ ಜ್ಞಾನದೃಷ್ಟಿಯಿಂದ ಅಜ್ಞಾನವೆಂಬ ಗಾಢಾಂಧಃಕಾರ ದಿಂದ ಉತ್ತಮ ಮಾರ್ಗವನ್ನು ತೋರಿಸುವಂಥ ಪರಿಶ್ರಮ ( ಲೋಕಲಜ್ಜಾ )ಸಂತೋಷ, ವಿವೇಕ, ಸಾಧುಸಂಗ ಇವುಗಳನ್ನು ಪರಮ ಆದರದಿಂದ ಸ್ವೀಕಾರ ಮಾಡುತ್ತಿಯಷ್ಟೇ ?

ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ, ಇವು ಷಡ್ರಿಪುಗಳಿರುತ್ತವೆ. ಕಾರಣ ಅವುಗಳ ಪರಿತ್ಯಾಗವನ್ನು ಸರ್ವಥಾ ಮಾಡಲೇಬೇಕು. ಹ್ಯಾಗಂದರೆ:- ಕಾಮವು, ಪರಸ್ತ್ರೀಕೂಡಾ; ಕ್ರೋಧವು, ಸತ್ಪುರುಷರಕೂಡಾ: ಲೋಭವು, ಸ್ವಶರೀರದ ಸಲುವಾಗಿ; ಮೋಹವು, ಪುತ್ರನದಶಿಯಿಂದಾ; ಮದವು, ಸುಹೃದರುಗಳಕೂಡಾ; ಮತ್ಸರವು, ಸರ್ವಪ್ರಾಣಿಗಳಲ್ಲಿ, ಈ ಪ್ರಕಾರವಾಗಿ ಪರಿತ್ಯಾಗಮಾಡಬೇಕೆಂಬುವದನ್ನು ನೀನು ತಿಳಿಯುಲ್ಪಟ್ಟಿರುವಿಯಷ್ಟೆ ?

ಈ ಷಡ್ರಿಪುಗಳ ಸ್ವೀಕಾರವನ್ನು ಸಮಯಾನುಸಾರವಾಗಿ ಮಾಡಲೇಬೇಕು. ಅದು ಹ್ಯಾಗಂದರೆ ಈಶ್ವರನ ಭಜನೆಯಲ್ಲಿ ಕಾಮವೂ ಇಂದ್ರಿಯ ನಿಗ್ರಹದಲ್ಲಿ ಕ್ರೋಧವೂ. ತೀರ್ಥಾಟಣವಿಷಯದಲ್ಲಿ ಲೋಭವೂ, ಸಾಧುಜನರ ಉಪದೇಶದಿಂದ ಮೋಹವೂ, ದುರ್ಜನರ ವಿಷಯದಲ್ಲಿ ಮದವೂ, ಪ್ರಪಂಚದಲ್ಲಿ ಮತ್ಸರವೂ, ಈ ಪ್ರಕಾರವಾಗಿ ಸ್ವೀಕಾರಮಾಡಬೇಕು.

ಷಡ್ವಿಧ ರಾಜ ಚಿಹ್ನಗಳು, ಸತ್ಯ, ಬಲಾಬಲಗಳ ಲಕ್ಷಣ ಇವುಗಳ ಯಥಾರ್ಥ ಜ್ಞಾನವು ನಿನಗೆ ಇರುತ್ತದಷ್ಟೇ?

ನಿನ್ನ ಪ್ರಧಾನನು ಆಜ್ಞಾ, ಕೀರ್ತಿ, ದ್ವಿಜಪಾಲನೆ, ದಾನ, ಭೋಗ, ಮಿತ್ರಲಕ್ಷಣ, ಈ ಆರು ಗುಣಗಳಿಂದ ಮಂಡಿತನಾಗಿ ಶೋಭಿಸುವಂಥವನಿರುವನಷ್ಟೇ?

ನಾನಾಪ್ರಕಾರದಿಂದ ವ್ಯೂಹ ರಚನೆಯಲ್ಲಿ ಚತುರನಿದ್ದು ಅಲ್ಪ ಸೇನೆಕೂಡ ಇದ್ದಾಗ್ಯೂ ದೊಡ್ಡ ಸೇನೆಯನ್ನು ಪರಾಭವಗೊಳಿಸುವಂಥ ಸೇನಾಪತಿಯಿರುವನಷ್ಟೇ?

ಪರಮ ವಿಶ್ವಾಸುಗಳಾಗಿಯೂ, ನಿರ್ಲೋಭಿಗಳಾಗಿಯೂ, ಉತ್ತಮ ಕುಲದಲ್ಲಿ ಜನಿಸಿದವರಾಗಿಯೂ. ಸ್ವಾಮಿಕಾರ್ಯಕ್ಕೆ ಪ್ರಸಂಗಾನುಸಾರವಾಗಿ ತಮ್ಮ ಜೀವಕೂಡ ಕೊಡಲಿಕ್ಕೆ ಸಿದ್ಧರಿರುವಂಥ ನಿನ್ನ ಸೇವಕರಿರುವರಷ್ಟೇ?

ವೇತನಾತಿರಿಕ್ತ (ಹಣದ ಆಶೆಯಿಲ್ಲದ) ರಾಜ ದ್ರವ್ಯವನ್ನು ಅಪೇಕ್ಷಿಸುವದು ಅತಿ ಅಯೋಗ್ಯವೆಂದು ದೃಢವಾಗಿ ತಿಳಕೊಂಡು ಸ್ವಕಾರ್ಯ (ತನ್ನದು ಕೆಲಸ) ವೆಂದು ತಿಳಿದು ವರ್ತಿಸತಕ್ಕ ಪ್ರಾಮಾಣಿಕ, ನಿಜವಾದ ಗೃಹಸ್ಥರು ನಿನ್ನಲ್ಲಿ ಇರುವರಷ್ಟೇ?

ಉತ್ತಮ ಮಧ್ಯಮ, ಕನಿಷ್ಟ ಕಾರ್ಯಗಳಮೇಲೆ ಯೋಗ್ಯಾಯೋಗ್ಯ ವಿಚಾರಮಾಡುವಿಕೆ, ಅದರ ವಿಪರೀತ ಎಂದರೆ: - ಪ್ರಧಾನಕಾರ್ಯಕ್ಕೆ ದಾಸೀಪುತ್ರನನ್ನೂ, ಸಣ್ಣ ಕೆಲಸದಮೇಲೆ ದೊಡ್ಡವನನ್ನೂ. ಯಾರಸಂಗಡಾ ಭಾಷಣ ಮಾಡಲಿಕ್ಕೆ ಸಹಾ ಯೋಗ್ಯನಲ್ಲದಂಥವರ ಸತ್ಕಾರಪೂರ್ವಕವಾಗಿ ಪೂಜಾ. ಸತ್ಪಾತ್ರರ ಅವಗಣನೆಯು ಮುಂತಾದವುಗಳ ಅಯೋಗ್ಯ ವಿಚಾರವು ನಿನ್ನ ಕೈಯಿಂದ ಆಗುವದಿಲ್ಲದಿರುವದಷ್ಟೇ?

ಮಹತ್ವದ ಕಾರ್ಯವನ್ನು ಮಾಡಿ ಬಂದವರಿಗೆ ವೇತನೆಯ ಕಾಲಕ್ಕೆ ಹೆಚ್ಚಿನ ದ್ರವ್ಯವನ್ನು ಸನ್ಮಾನಾರ್ಥವಾಗಿ ಕೊಡುತ್ತಿರುವಿಯಷ್ಟೇ?

ಪ್ರಸಂಗವಶಾತ್ ನಿನ್ನದೆಶಿಂದಾ ಯಾವನು ತನ್ನ ಜೀವ ಸಹಾ ಕೊಟ್ಟನೊ ಅಂಥವರ ಹೆಂಡರುಮಕ್ಕಳಿಂದ ಕೂಡಿದ ಕುಂಟುಂಬದವರನ್ನು ನಿನ್ನ ಸ್ವಂತದನರಂತೆ ಸಂರಕ್ಷಣೆಮಾಡುತ್ತಿಯುಷ್ಟೆ ?

ಚಿಕ್ಕವಯುಸಿನಲ್ಲಿ ನಿನ್ನ ಕೂಡಾಡಿದ ಬಡಬಗ್ಗರಾದ ನಿನ್ನ ಮಿತ್ರರು ನಿನ್ನನ್ನು ಕಾಣಬಂದರೆ ಅವರಿಗೆ ಬೇಕಾದ ಸಂಪತ್ತಿ ಮುಂತಾದ್ದನ್ನು ಕೊಟ್ಟು ಸಂತೋಷ ಬಡಿಸುವಿಯುಷ್ಟೆ ?

ಎರಡನೆಯುವರಲ್ಲಿರುವ ಗುಣವನ್ನೂ ಮತ್ತು ಅವರ ಮನಸ್ಸಿನ ಅಭಿಪ್ರಾಯುವನ್ನು ತಿಳಿದುಕೊಳ್ಳುವ ಜ್ಞಾನವು ನಿನ್ನಲ್ಲಿರುವದಷ್ಟೆ ?

ನಿನ್ನ ಪ್ರಧಾನಿಗಳು ಯಾವತ್ತು ರಾಷ್ಟ್ರದಲ್ಲಿ ಕೀರ್ತಿ ಅಥವಾ ಅಪಕೀರ್ತಿ ಪಡಿಯುತ್ತಾರೋ ಇದನ್ನು ನೀನು ನಿನ್ನ ಚಾರರ ಮುಖಾಂತರವಾಗಿ ತಿಳಿದುಕೊಳ್ಳುಯುಷ್ಟೇ?

ನಿನ್ನ ಯಾವತ್ತು ಪ್ರಜೆಗಳು ತಮ್ಮ ತಮ್ಮ ಕಪ್ಪಕಾಣಿಕೆಗಳನ್ನು ಒಪ್ಪಿಸಿ, ರಾಜಾಜ್ಞೆಯುನ್ನುಲ್ಲಂಘನಮಾಡದೆ, ಭೂಮಿಸೇವಕ ( ಹೊಲಮನೆ ) ಯಥಾಯೋಗ್ಯವಾಗಿ ಮಾಡುತ್ತಿರುವರಷ್ಟೇ?

ತೀರ್ಥಯಾತ್ರೆಯುನ್ನು ಮಾಡತಕ್ಕ ಜನರಿಗೆ ಮಾರ್ಗದಲ್ಲಿ ಸುಲಕೊಳ್ಳತಕ್ಕಂಥ ಚೌರ್ಯಕರ್ಮಿಗಳ ಪಾರಿಪತ್ಯಮಾಡಿ, ಮಾರ್ಗವನ್ನು ನಿರ್ಭಯುವಾಗಿ ಮಾಡಿರುವಿಯುಷ್ಟೆ ?

ನೀನು ನಿನ್ನ ಯಾವತ್ತು ದೇಶದಲ್ಲಿ ವಿಚಾರಣೆಯುನ್ನು ಇಟ್ಟು ಕಳ್ಳರ ಬಂಡಾಟವು ನಿಲ್ಲುವಂತೆ ಕಳ್ಳರನ್ನು ಶಿಕ್ಷಿಸುತ್ತಿಯುಷ್ಟೇ?

ಬಡವರು ತಮ್ಮ ದು:ಖವನ್ನು ಹೇಳಲು ಬರಲು ಅವರಿಗೆ ಯಾವತರದ ಪ್ರತಿಬಂಧಗಳಿಲ್ಲವಷ್ಟೇ?

ನಿನ್ನ ಸೈನ್ಯವು ಪರಚಕ್ರನಾಶಾರ್ಥವಾಗಿ ಯಾವಾಗ್ಗೆ ಹೊರಡುತ್ತದೋ ಅಗ್ಗೆ ಊರ ಜನರನ್ನು ಹೊಡೆದು ಬಡಿದು ಮಾಡೋಣ ಮತ್ತು ಸುಲಕೊಳ್ಳೋಣ ಇಂಥ ಕೆಲಸಗಳನ್ನು ಮಾಡುವದಿಲ್ಲವಷ್ಟೇ?

ನಿನ್ನ ಶರೀರದ ಮೇಲೆ ಎಲ್ಲ್ಯಾದರೂ ಇರುವೆಯು ಹತ್ತಿ ಕಡಿಯು ಹತ್ತಿದರೆ ಅದನ್ನು ಹ್ಯಾಂಗೆ ನಿವಾರಣ ಮಾಡುತ್ತೀಯೋ ಅದರಂತೆ ದುಷ್ಟ ಜನರಿಂದಾ ಜನರ ಸಂರಕ್ಷಣ ಮಾಡುತ್ತಿ ಯಷ್ಟೆ ?

ಸದ್ಗುರುವಿನ ಸಲುವಾಗಿ ತಮ್ಮ ಶರೀರ, ದ್ರವ್ಯ, ಮನೋಭಾವ ಇವುಗಳನ್ನು ಅರ್ಪಣಮಾಡಿ, ಆದರಿಂದ ಸೇವೆ ಧರ್ಮ ಸಂಪಾದನೆಯನ್ನು ಮಾಡತಕ್ಕಂಥ ಶಿಷ್ಯರು ನಿನ್ನ ರಾಜ್ಯದಲ್ಲಿರುವರಷ್ಟೇ

ಕೇವಲ ನಿರ್ಧನ ಶ್ರೋತ್ರಿಯ (ವೇದಶಾಸ್ತ್ರ ಸಂಪನ್ನ) ಕ್ಷೀಣ ವೃತ್ತಿ (ಯಾತರಿಂದ ಜೀವನವು ನಡೆಯಲಾರದು) ಅಂಥ ಉಭಯ ಸಾದುಗಳ ದೈನ್ಯವನ್ನು ಹೋಗಲಾಡಿಸಿ ಅವರನ್ನು ಒಳ್ಳೇ ಬಗೆಯಿಂದ ಪರಿಪಾಲನ ಮಾಡುತ್ತಿರುವಿಯಷ್ಟೆ ?

ಬಡ ಬ್ರಾಹ್ಮಣ ಕನ್ಯಯು ದರಿದ್ರಾವಸ್ಥೆಯಿಂದ ಅವಳ ಲಗ್ನ ನಿಂತಪಕ್ಷದಲ್ಲಿ ಹಣಕೊಟ್ಟು ಆವಳ ಲಗ್ನ ಮಾಡುವಿಯಷ್ಟೆ ?

ಯಾವನ್ನು ತನ್ನ ಕರ್ಮಾನುಸಾರವಾಗಿ ನಿನ್ನ ಬಂದಿಯಲ್ಲಿ ಬಿದ್ದಾಗ್ಗೆ ಅವನು ಅಸ್ವಸ್ಥನಾದರೆ ಅವನಿಗೆ ವೈದ್ಯನಕಡಿಯಿಂದ ಔಷದೋಪಚಾರಗಳನ್ನು ಮಾಡಿಸಿ, ಸಂರಕ್ಷಣೆ ಮಾಡಿಸುವಿಯಷ್ಟೆ ?

ಬಹಳೆ ಹಸಿದು ಬಂದ ಅತಿಥಿಗಳು ನಿನ್ನ ಮನೆಯಲ್ಲಿ ಮಾಡಿರುವ ಪಕ್ವಾನ್ನಗಳನ್ನು ಊಟಮಾಡಿ, ನಿನಗೆ ಆಶೀರ್ವಾದಗಳನ್ನು ಕೊಟ್ಟು ಹೋಗುತ್ತಿರುವರಷ್ಟೆ ?

ಯಾವನಾದರೂ ಉತ್ತಮ ಕುಲದಲ್ಲಿ ಹುಟ್ಟಿದವನಾಗಿ, ಪ್ರಸಂಗಾನುಸಾರವಾಗಿ ಧನಲುಬ್ಧ ಮತ್ತು ಕ್ಷುಲ್ಲಕ ಸಾವಕಾರನಕಡಿಂದಾ ಸಾಲತೆಗೆದುಕೊಂದು ಅದನ್ನು ತನ್ನ ಬಡತನದ ಮೂಲಕವಾಗಿ ಮುಟ್ಟಿಸಲಿಕ್ಕೆ ಆಗದೆ, ಜನಮಾನ ಹಾನಿಯಸಲುವಾಗಿ ದೇಹತ್ಯಾಗ ಮಾಡಿಕೊಳ್ಳುವ ಸಂಕಟ ಬಂದೊದಗಿದ್ದರೆ ಅವನನ್ನು ಬಹು ಸಂಕ್ಷೇಪದಿಂದ ಋಣಮುಕ್ತ ಮಾಡುತ್ತಿರುವಿಯಷ್ಟೆ ?

ಶ್ರೀಮಂತರಿಗೆ ಹ್ಯಾಗೆ ತಮ್ಮ ಮಕ್ಕಳು ಗುಣವಂತರು ಮತ್ತು ಪ್ರೀತಿಯುವರಿರುತ್ತಾರೋ, ಅದರಂತೆ ನೀನಾದರೂ ಯಾಚಕರನ್ನು ಆರ್ತ ಬುದ್ಧಿಯಿಂದ ತಿಳಿಯುತ್ತಿರುವಿಯಷ್ಟೆ ?

ನಿನ್ನ ಋತ್ವಿಜರು ವೇದಶಾಸ್ತ್ರಜ್ಞರೂ, ಆಚಾರಸಂಪನ್ನರೂ. ಉತ್ತಮೋತ್ತಮರಾಗಿಯೂ ಇದ್ದು ಯಜ್ಞಯಾಗಾದಿಗಳನ್ನು ಯಥಾ ಸಾಂಗವಾಗಿ ಮಾಡುತ್ತಿರುವರು. ಅಂಥ ವೇಳೆಯಲ್ಲಿ ನಿನ್ನ ಅಜ್ಞಾನ ತನದಿಂದ ಏನಾದರೂ ಆ ಕರ್ಮಕ್ಕೆ ನ್ಯೂನತೆ ಬರುವದಿಲ್ಲವಷ್ಟೆ ?

ವಾಜಪೇಯಾದಿಕ, ಪುಂಡರಿಕ, ಅನೇಕರು ಮುಂತಾದ ಕ್ರತುಗಳು ನಿನ್ನಲ್ಲಿ ಯಥಾಸಾಂಗ ಕ್ರಿಯಾಯುಕ್ತವಾಗಿ ಹವ್ಯದ ಆಹುತಿಯಿಂದ ಯಜ್ಞ ಪುರುಷನು ಸರ್ವ ಕಾಲದಲ್ಲೂ ತೃಪ್ತಿಹೊಂದಿರುವನಷ್ಟೆ ?

ಅಖಂಡವಾಗಿ ಪುತ್ರಪೌತ್ರಾದಿ ವಂಶಪರಂಪರವಾಗಿ ಉಪಭೋಗಮಾಡಬೇಕೆಂಬ ಹೇತುವಿನಿಂದ ಕೊಟ್ಟ ಕ್ಷೇತ್ರದ ಬ್ರಾಹ್ಮಣರು ಸ್ವಧರ್ಮತತ್ಪರರಾಗಿ ಆನಂದಯುಕ್ತವಾಗಿರುವಷ್ಟೆ ?

ಆಯಾ ಕಾಲದಲ್ಲಿ ವಿಪರೀತವಾಗಿ ಬರತಕ್ಕ ಸರ್ವ ಗ್ರಹಗಳ ಶಾಂತ್ಯರ್ಥ, ತ್ರಿಕಾಲಜ್ಞನಾದ ಶುಭ ಸೂಚಕನಾದ ಜೋತಿಷ್ಯನು ನಿನ್ನ ಆಶ್ರಯದಲ್ಲಿ ಇರುವನಷ್ಟೆ ?

ನಿನ್ನ ಭಾಂಡಾರಖಾನೆಯಲ್ಲಿ ಕಾರಕೂನನು ನಿರ್ಲೋಭಿಯೂ ಮತ್ತುನಿರಪೇಕ್ಷಿಯೂ ಇದ್ದು; ಪಾಕಶಾಲೆಯ ಬ್ರಾಹ್ಮಣನು ಆಪ್ತನಿದ್ದು ಸ್ವಚ್ಛ ಮತ್ತು ತೃಪ್ತಿಕರನು ( ಕೂಳಬಕ್ಕನಲ್ಲದ ), ಶರೀರ ಸಂಪತ್ತಿಯಿಂದ ಘಟ್ಟಿಗನಾಗಿರುವರಷ್ಟೇ?

ಸಂಧಿ ಕಾರ್ಯಕ್ಕೋಸ್ಕರ ನಿನ್ನ ಹೆಚ್ಚಿನ ಶತ್ರುಗಳ ಕಡೆಗೆ ಕಳಿಸಬೇಕಾದರೆ ನೀನು ಸಮಯೋಚಿತ ಭಾಷಣ ಕುಶಲನು, ಪರಮ ಚತುರ ನಿಷ್ಟ ಸಮ್ಮತನೂ ಆದವನನ್ನು ಯೋಜಿಸುವಿಯಷ್ಟೇ ?

ಎಲೈ ಅರಸನೇ, ಅಗ್ನಿಯೂ, ಕಳ್ಳನೂ, ಸರ್ಪವೂ, ಹುಲಿ ಮೊದಲಾದವುಗಳಿಂದ ನಿನ್ನ ರಾಷ್ಟ್ರವನ್ನು ಸಂರಕ್ಷಣೆಯಷ್ಟೆ ?

ನಿನ್ನ ಸಭೆಯಲ್ಲಿ ಅತಿ ಸನ್ನಿಹಿತ ದೊಡ್ಡ ದೊಡ್ಡ ವಿದ್ವಜ್ಜನ ಪರಮ ಜ್ಞಾನಿಗಳಿದ್ದು ಆಚಾರಸಂಪನ್ನ ಮತ್ತು ಶಿಷ್ಟಸಮ್ಮತರಾಗಿ ಕೂಡುತ್ತಿರುವಷ್ಟೆ ?

ದುರ್ಜನ ಶೀಘ್ರಕೋಪಿ ( ತತ್ಕಾಲ ಸಿಟ್ಟುಬರುವಂಥವ ) ಕಠೋರ ಭಾಷಣ ಆಡುವವನೂ, ಪರಮ ಸಂತಾಪಿಯೂ, ಶೂನ್ಯವಾದಿ ( ನಿಷ್ಕಾರಣ ವಾದಮಾಡುವವ ) ಮಹಾ ಪಾಪಿ, ಇಂಥ ಮನುಷ್ಯರಿಗೆ ಸಭೆಯಲ್ಲಿ ಬರುವ ಪ್ರತಿಬಂಧವಿರುವದಷ್ಟೆ ?

ಸಾಧು ಸಂತರ ಅಪಮಾನಮಾಡುವವನೂ, ದೇವದ್ವಿಜರಿಗೆ ದುಷ್ಟ ಅಪಶಬ್ದಗಳನ್ನಾಡುವವನೂ, ಇಂಥ ಅಪರಾಧಿಯನ್ನು ತತ್ಕಾಲ ಜಿಂಹ್ವಾಛೇದನ ಮಾಡುತ್ತಿ ಯಷ್ಟೇ ?

ನೀನು ರಾತ್ರಿಯ ಕಡೆಯ ಭಾಗದಲ್ಲಿ ಅಂದರೆ ಬೆಳಗುಮುಂಜಾನೆ ಎದ್ದು ಸಾರಾಸಾರ ವಿಚಾರ, ನೀತಿ, ಮೋಕ್ಷಮಾರ್ಗ, ಭಯನಿವೃತ್ತಿ ಇವುಗಳ ವಿಷಯದಲ್ಲಿ ನಿರಂತರ ವಿಚಾರಮಾಡುತ್ತಿರುವಿಯಷ್ಟೇ ?

ನರಕ, ಮೋಕ್ಷ, ಪಾಪ, ಇವುಗಳ ಪೂರ್ಣ ಜ್ಞಾನವು ಜನನಿಂದೆ ಯುಂಟಾಗದಂತೆ ಇರುವದಷ್ಟೆ ?

ಭೂಕೋಟೆ ಕೊತ್ತಲ, ಗಡಗಳಲ್ಲಿ ಪ್ರತಿವರ್ಷವು ಧಾನ್ಯಗಳನ್ನು ತಗೆದು ಹೊಸ ಹೊಸ ಧಾನ್ಯ ಔಷಧ ನೀರು ಮುಂತಾದವುಗಳನ್ನು ಉತ್ತಮತರದಿಂದ ಸಂಗ್ರಹಿಸುವಿಯಷ್ಟೆ ?

ಮಠ, ದೇವಾಲಯ, ಭಾವಿ, ಕೆರೆ, ಧರ್ಮಶಾಲೆ ಇವುಗಳ ಜೀರ್ಣೋದ್ಧಾರ ಮಾಡುವದು, ನಂದಾದೀಪ, ಪೂಜಾ, ಮತ್ತು ನೈವಿದ್ಯಗಳು ಚನ್ನಾಗಿ ನಡಿದಿರುವವಷ್ಟೆ ?

ಅತಿ ವೃಷ್ಟಿಯಿಂದ ಬಹಳೇ ಪೀಡಿತವಾದ ಗೊವು ಮುಂತಾ ಪಶುಗಳು, ಅತ್ಯಂತ ಕರ್ದಮಯುಕ್ತವಾದ ಹಕ್ಕಿಗಳು, ಇಂಥ ಪದ ನ್ಯದಿಂದ ಅನ್ಯವಸ್ಥೆಯಿಂದ ಕೆಟ್ಟ ಶಾಲಿಕ್ಷೇತ್ರ ( ಭತ್ತದ ಗದ್ದೆ ) ಗಳು ನಿನ್ನ ರಾಜ್ಯದಲ್ಲಿಲ್ಲವಷ್ಟೆ ?

ದೀನದುರ್ಬಲ ಅನಾಥರಾದ ವೃದ್ಧರೂ, ಬಾಲರೂ, ದರಿದ್ರರೂ ಹಸಿವೆಯಿಂದ ಬಳಲಿ, ಮಳೆಗಾಲದಲ್ಲಿ, ಕೆಟ್ಟಹಾದಿಗುಂಟ ನಿರ್ವಾಹ ದಶಿಂದ ತಿರಗುತ್ತಿರುವದಿಲ್ಲವಷ್ಟೆ ?

ಅಪ್ತರಾದ ಸುಹೃಜ್ಜನಗಳಿಗೆ ತೊಂದರೆಯು, ಸಾಧುಗಳಿಗೆ ಕ್ಲೆಶವು, ಈ ಪ್ರಕಾರದ ದುರ್ಜನದೋಷದಿಂದ ನೀನು ಅಲಿಪ್ತನಿರುವಿಯಷೆ. ?

ನಿನ್ನ ಪುರೋಹಿತನು ಪ್ರಧಾನನು, ಮತ್ಯಾರಾದರೂ ದೊಡ್ಡ ಮನುಷ್ಯನು ರಾಜದರ್ಶನಕ್ಕೆ ಬಂದರೆ ತನ್ನ ದೊಡ್ಡಸ್ತಿಕೆ ಕಡಿಮೆಯಾಗುವದೆಂದು ತಿಳಿದು, ಅವರಿಗೆ ಅಡ್ಡಿಮಾಡುವದಿಲ್ಲವಷ್ಟೆ ?

ನೀನು ಪರ್ವಕಾಲದಲ್ಲಿ ( ದ್ವಾದಸಿ, ಪೌರ್ಣಿಮಾ, ಅಮಾವಾಸ್ಯ ವೈಧೃತಿ, ವ್ಯತಿಪಾತ, ಈ ಕಾಲದಲ್ಲಿ ) ಸ್ತ್ರೀಸಂಗ, ಸೂರ್ಯೋದಯ ಕಾಲದಲ್ಲಿ ನಿದ್ದೆಮಾಡುವದು ಮತ್ತು ಊಟಮಾಡುವದು ಈ ಪ್ರಕಾರವಾದ ದುರಾಚರಣವು ನಿನ್ನಿಂದ ಆಗುವದಿಲ್ಲವಷ್ಟೆ ?

ನಾಲ್ಕು ವರ್ಣಗಳು ಎಥಾವಿಹಿತವಾದ ವಿದ್ಯೆವನ್ನು ನಿನ್ನ ಮಕ್ಕಳಕಡಿಂದ ಮಾಡಿಸುತ್ತಿರುವ ಪರಿಪಾಠವಿರುತ್ತದಷ್ಟೆ ?

ಹೇ ಪೃಥ್ವೀಪತೇ, ಉಗ್ರಕಾಮಿ, ಮಿತ್ರಧನ ಹರಣಮಾಡುವಂಥವರೂ ಮತ್ತು ಪತಿಯನ್ನು ಬಿಟ್ಟಂಥವಳು ನಿನ್ನ ರಾಷ್ಟ್ರದಲ್ಲಿ ಲ್ಲವಷ್ಟೆ ?

ಸಹಸ್ರಾದಿ ಮೂರ್ಖರಕಿಂತಲೂ ಒಬ್ಬಟಿಗನಾದ ವಿದ್ವಾಂಸನು ನಿನ್ನ ಆಶ್ರಯಕ್ಕೆ ಇರುವನಷ್ಟೆ ?

ನಿನ್ನ ಮುಂದೆ ಬಹಳೇ ದೀನತನವನ್ನು ತೋರಿಸಿ ಯಾವತ್ತು ಸಂಗತಿಗಳನ್ನು ನಿನ್ನ ಶತ್ರುಗಳಿಗೆ ತಿಳಿಸತಕ್ಕಂಥವರನ್ನು ನೀನು ತಿಳಿದಿರುವಿಯಷ್ಟೇ?

ಯಾವವಿಷಯದಲ್ಲಿ ಬಹಳ ಲಾಭವಿದ್ದು ಸ್ವಹಿತದ ಸಂಶವು ಯಾವದರಲ್ಲಿ ಆಗುವದೋ ಅಂಥ ಲಾಭದ ಉದ್ಯೋಗ ಮಾಡುವದಿಲ್ಲವಷ್ಟೇ?

ನಿನ ರಾಜ್ಯದ ಸಂರಕ್ಷಣೆ ಯೋಧ್ಯರಿಂದ ಆಗುತ್ತದೆಂಬುದನ್ನು ತಿಳಿದು ನೀನು ನಿನ್ನ ಸೈನ್ಯದ ಸಂಬಳವನ್ನು ಅಗಾಗ್ಗೆ ಕೊಡುತ್ತೀರು. ಹೀಗೆ ಮಾಡುವದರಿಂದ ಸೇವಕರು ಏಕಚಿತ್ತತನದಿಂದ ತಮ್ಮ ಕೆಲಸವನ್ನು ಚನ್ನಾಗಿ ಮಾಡುವರೆಂಬದನ್ನು ನೀನು ತಿಳಿದಿರುವಿಯಷ್ಟೇ?

ಒಬ್ಬ ಮೂರ್ಖನ ಸಮಾಗಮದಿಂದ ಕೀರ್ತಿಯು, ಲಾಭದ, ಸುಖದ, ಸಂಪತ್ತಿಯು, ಇವುಗಳ ಸರ್ವಥೈವ ನಾಶಹೊಂದಿ, ದುರ್ಕೀರ್ತಿಕವಾತ್ರ ಬರುವದೆಂದು ನೀನು ತಿಳಿದಿರುವಿಯಷ್ಟೇ ?

ನೀನು ಮತ್ತು ನಿನ್ನ ಪ್ರಧಾನನು ಗುಪ್ತ ಆಲೋಚನಮಾಡುವದು ಸಪ್ಮರ್ಣವಾಗಿ ಹೊರಗೆ ಪ್ರಸಿದ್ಧವಾಗುವದಿಲ್ಲವಷ್ಟೇ ?

ಎಲೈ ಅರಸನೇ ! ಈ ತರದ ಉತ್ತಮ ಗುಣಗಳು ನಿನ್ನಲ್ಲಿ ನಿಶ್ಚಯವಾಗಿ ನೆಲಗೊಂಡಿರುಬೇಕೆಂದು ತಿಳಿದು ನಿನ್ನನ್ನು ಕುರಿತು ಈ ಪ್ರಶ್ನೆಗಳನ್ನು ಮಾಡಿದೆನು. ಆದರೆ ಎಲೈ ಧರ್ಮನೆ ! ಸಾವಧಾನಚಿತ್ತನಾಗಿ ವಿಚಾರಪೂರ್ವಕವಾಗಿ ನಡೆದುಕೊಳ್ಳು ಅಂದರೆ ಅದರಿಂದ

ಇಹಲೋಕದಲ್ಲಿ ಕೀರ್ತಿಯನ್ನು ಹೊಂದಿ ಕಡೆಯಲ್ಲಿ ಉತ್ತಮ ಲೋಕವು ಪ್ರಾಪ್ತವಾಗುವದು. ಈಪ್ರಕಾರದ ನಾರದಮುನಿಯ ಭಾಷಣವನ್ನು ಕೇಳಿ ಧರ್ಮರಾಯನು ಪರಮಾನಂದನಾಗಿ ಮಾತಾಡಿದ್ದೇನಂದರೆ:—“ಮಹಾಮುನಿಗಳೇ ತಾವು ಮಹಾಭಾಗವತೋತ್ತಮ ಇರುವಿರಿ. ನಾನೇನು ತಮ್ಮಮುಂದೆ ಮಾತಾಡಲಿಕ್ಕೆ ಸಮರ್ಥನು ?” ಈ ಪ್ರಕಾರವಾಗಿ ಸಭಾಪರ್ವದಲ್ಲಿ ಹೇಳಿರುತ್ತದೆ. ಯಾವನಿಗೆ ರಾಜ್ಯದ ಆಶೇ ಇರುವದು. ಅವರು ಈ ನೀತಿಗಳನ್ನು ಮನಗೊಟ್ಟು ಓದಿ ಧ್ಯಾನದಲ್ಲಿಟ್ಟರೆ ಅವನ ಯಾವತ್ತು ಚಿಂತೆಯು ನಷ್ಟವಾಗಿ “ಚಕ್ರವರ್ತಿತ್ವ” ಅಂದರೆ ಯಾವತ್ತು ಭೂಮಂಡಲದ ಸ್ವಾಮಿತ್ವವು ದೊರಕುವದು.

ಸಮಾಪ್ತ.